# ಸಂಗ್ಯಾ ಬಾಳ್ಯಾ : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ನಿಬಂಧ)


ಸಂಶೋಧಕರು :

ಪ್ರಿಯಾ ಪ್ರಭಾಕರ ಸತ್ತಿಗೇರಿ ಉಪನ್ಯಾಸಕರು
ಸರಕಾರಿ ಪದವಿ ಪೂರ್ವ ಕಾಲೇಜು, ನೇಸರಗಿ
ತಾ: ಬೈಲಹೊಂಗಲ, ಜಿ: ಬೆಳಗಾವಿ.

ಮಾರ್ಗದರ್ಶಕರು :

ಡಾ. ವ್ಹಿ. ಎಸ್. ಮಾಳಿ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ, ಜಿ: ಬೆಳಗಾವಿ.



ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ
ಹಾರೂಗೇರಿ, ಜಿ: ಬೆಳಗಾವಿ
[illegible]ನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೯

# ಸಂಗ್ಯಾ ಬಾಳ್ಯಾ : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ)



ಸಂಶೋಧಕರು :

ಪ್ರಿಯಾ ಪ್ರಭಾಕರ ಸತ್ತಿಗೇರಿ ಉಪನ್ಯಾಸಕರು
ಸರಕಾರಿ ಪದವಿ ಪೂರ್ವ ಕಾಲೇಜು, ನೇಸರಗಿ
ತಾ: ಬೈಲಹೊಂಗಲ, ಜಿ: ಬೆಳಗಾವಿ.

ಮಾರ್ಗದರ್ಶಕರು :

ಡಾ. ವ್ಹಿ. ಎಸ್. ಮಾಳಿ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ, ಜಿ: ಬೆಳಗಾವಿ.

**ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ**
ಹಾರೂಗೇರಿ, ಜಿ: ಬೆಳಗಾವಿ
ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೦೮

# ಪ್ರಮಾಣ ಪತ್ರ

**ಸಂಗ್ಯಾಬಾಳ್ಯಾ : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ** ಎಂಬ ಶೀರ್ಷಿಕೆಯ ನಿಬಂಧವನ್ನು **ಡಾ.ವ್ಹಿ.ಎಸ್.ಮಾಳಿ** ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ **ಎಂ. ಫಿಲ್. ಪದವಿಗಾಗಿ** ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಲಿ, ಬಿಡಿಯಾಗಲಿ ನಾನು ಪ್ರಕಟಿಸಿರುವುದಿಲ್ಲ ವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲ ವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ: 30-09-2009

(Signature)
ಪ್ರಿಯಾ ಪ್ರಭಾಕರ ಸತ್ತಿಗೇರಿ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ.

# ದೃಢೀಕರಣ ಪತ್ರ

**ಪ್ರಿಯಾ ಪ್ರಭಾಕರ ಸತ್ತಿಗೇರಿ** ಇವರು **ಸಂಗ್ಯಾಬಾಳ್ಯಾ : ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ **ಎಂ. ಫಿಲ್. ಪದವಿಗಾಗಿ** ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಲಿ, ಬಿಡಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವು ದಿಲ್ಲವೆಂದೂ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ:

**ಡಾ. ವ್ಹಿ. ಎಸ್. ಮಾಳಿ**
ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ, ಜಿ: ಬೆಳಗಾವಿ.

# ಕೃತಜ್ಞತೆಗಳು

"ಅಂದು ಇತ್ತು । ತಾಯಿಯ ತುತ್ತನುಂಡು
ತೃಪ್ತಿಗೊಳ್ಳುವ ಮನಸು । ಇಂದು ಬೆಳೆದು
ನನಗೆ ನಾನು ನಿರ್ಮಿಸಬೇಕು । ನನ್ನ ಲೋಕದ ಕನಸು"

ಎಷ್ಟೋ ದಿನಗಳಿಂದ ಮನಸ್ಸಲ್ಲೇ ಒಂದು ಕನಸು ಕಾಣತಾ ಇದ್ದೇ. ಆ ಕನಸಿಗೆ ಮೂಲ ಪ್ರೇರಣೆ ನನ್ನ ತಂದೆ. ಅವರು ಉನ್ನತ ವ್ಯಾಸಂಗದ ಹೆಬ್ಬಯಕೆ ಇಟ್ಟುಕೊಂಡವರು. ಆದರೆ ದುರದೃಷ್ಟವಶಾತ್ ಕೌಟುಂಬಿಕ ಕಾರಣಗಳಿಂದ ಆ ಬಯಕೆ ಅವರಲ್ಲಿಯೇ ಕಮರಿಹೋಯಿತು. ಅವರ ಪ್ರೋತ್ಸಾಹದ ಫಲವಾಗಿಯೇ ಚಿಕ್ಕಂದಿನಿಂದಲೂ ಆ ಬಯಕೆ ಕ್ರಮೇಣವಾಗಿ ನನ್ನಲ್ಲೂ ಮೊಳಕೆಯೊಡೆಯಲು ಶುರುವಾಯಿತು. ಹಲವು ವರ್ಷಗಳಿಂದ ನನ್ನಲ್ಲಿ ಮೊಳಕೆಯೊಡೆಯುತ್ತಿದ್ದ ಬಯಕೆಗೆ ಸಕಾಲದಲ್ಲಿ ನೀರೆರೆದು ಸಸಿಯಾಗಲು ಸಹಾಯ ಮಾಡಿದವರು ಪ್ರೀತಿಯ ನಂದಮ್ಮ. ಅವರು ಹಾರೂಗೇರಿಯಲ್ಲಿ ಎಂ.ಫಿಲ್. ಮಾಡುವ ವಿಷಯ ತಿಳಿದಂದಿನಿಂದ ನನ್ನ ಕನಸಿನ ಹಕ್ಕಿಗೆ ರೆಕ್ಕೆ ಪುಕ್ಕಗಳು ಮೂಡತೊಡಗಿ ಹಾರಲು ಸಿದ್ಧವಾಗತೊಡಗಿದ ಮೇಲೆ ಅವರೇ ದಿಕ್ಸೂಚಕರೂ ಆದರು.

ಅಪ್ಪ, ಅಮ್ಮನ ಆಶೀರ್ವಾದದಿಂದ ಆ ಬಯಕೆ ನನಗೆ ಪ್ರಾಪ್ತವಾಯಿತು. ಎಂ.ಫಿಲ್. ಪದವಿಗೆ ಪ್ರವೇಶವನ್ನು ಪಡೆದು, ಪರೀಕ್ಷೆಗಳನ್ನು ಸಲೀಸಾಗಿ ಮುಗಿಸಿದೆ. ಆದರೆ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಾಗ ಗೊಂದಲಕ್ಕೆ ಬಿದ್ದು ಹೊರಳಾಡುತ್ತಿರುವಾಗ ಕೈನೀಡಿ ಮೇಲೆತ್ತಿದವರೇ ಪ್ರೀತಿಯ **ಡಾ. ಮಾಳಿ ಸರ್**. ಅವರು **'ಸಂಗ್ಯಾ ಬಾಳ್ಯಾ'** ಸಣ್ಣಾಟದ ವಿಷಯವನ್ನು ಆಯ್ಕೆ ಮಾಡಿಕೊಟ್ಟಾಗ ನನಗೆ ಎಲ್ಲಿಲ್ಲದ ಖುಷಿ. ಕಾರಣ ನನ್ನ ತವರು ತಾಲೂಕಾದ ಬೈಲಹೊಂಗಲ ಮತ್ತು ನೆರೆಯ ಬೈಲವಾಡ ಸಣ್ಣಾಟದ ಕೇಂದ್ರ ಸ್ಥಳ ವಾಗಿರುವುದರಿಂದ ನನ್ನ ಗೊಂದಲ, ಆತಂಕಗಳು ಶಾಂತವಾದವು. ಆತಂಕವನ್ನು ಶಾಂತಗೊಳಿಸಿದ ಮಾನ್ಯ ಮಾಳಿ ಸರ್‌ಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ಪ್ರತಿಯೊಂದು ಘಟ್ಟದಲ್ಲಿಯೂ ನನ್ನ ಅಧ್ಯಯನಕ್ಕಾಗಿ ಜೊತೆ ಜೊತೆಗೆ ಹೆಜ್ಜೆ ಹಾಕಿದ **ಅಪ್ಪ, ಅಮ್ಮ, ಅಣ್ಣ, ಅತ್ತಿಗೆ, ನಂದಮ್ಮ** ಹಾಗೂ ಆತ್ಮೀಯ **ಸ್ನೇಹಿತರನ್ನು** ಚಿರಕಾಲ ನೆನೆಯುತ್ತೇನೆ. ಕಾಲೇಜಿನ ಅವಧಿಯಲ್ಲೂ ನನಗೆ ಬಿಡುವು ಮಾಡಿಕೊಟ್ಟು ಪ್ರೋತ್ಸಾಹಿಸಿದ ಪ್ರಾಚಾರ್ಯರಾದ **ಶ್ರೀ ಬಿ. ಸಿ. ಕರಿಕಟ್ಟಿ** ಹಾಗೂ **ಸಿಬ್ಬಂದಿಯವರ** ಸಹಾಯ, ಸಹಕಾರಕ್ಕೆ ಋಣಿಯಾಗಿದ್ದೇನೆ. ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಗ್ರಂಥಾಲಯ ಸಿಬ್ಬಂದಿಯವರ ಸಹಾಯ, ವಿಷಯ ವಿಸ್ತರಣೆಗೆ ಮಾರ್ಗದರ್ಶನ ನೀಡಿದ **ಡಾ. ವ್ಹಿ. ಎಸ್. ಮಾಳಿ, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಡಾ. ಬಸವರಾಜ ಮಲಶೆಟ್ಟಿ** ಮತ್ತು **ಡಾ. ಸಿ. ಕೆ. ನಾವಲಗಿ** ಗುರುಗಳಿಗೆ ಅನಂತ ಅನಂತ ವಂದನೆಗಳು.

ಈ ಅಧ್ಯಯನದ ಸ್ಫೂರ್ತಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ಹಾಗೂ ಅತೀ ಶೀಘ್ರವಾಗಿ ಅಕ್ಷರ ಸಂಯೋಜಿಸಿ ಕೊಟ್ಟ **ನೇಸರಗಿಯ ಶ್ರೀ ವಿನಾಯಕ ವಾಣಿಜ್ಯ ವಿದ್ಯಾ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಬಿ. ಬಿ. ಹಿರೇಮಠ** ಅವರಿಗೂ ಕೃತಜ್ಞತೆಗಳು.

ಈ ಸಂಶೋಧನಾ ನಿಬಂಧವನ್ನು ಆಕರ್ಷಕವಾಗಿ ಮುದ್ರಿಸಿ ಮತ್ತು ಅಂದವಾಗಿ ಬೈಂಡಿಂಗ್ ಮಾಡಿಕೊಟ್ಟ **ವೀಣಾ** ಮತ್ತು **ದೀಪಕ** ರವರ **ಸಾಯಿ ಝೆರಾಕ್ಸ ಮತ್ತು ಡಿ.ಟಿ.ಪಿ. ಸೆಂಟರ್, ಬೆಳಗಾವಿ.** ಇವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳು.

ದಿನಾಂಕ : ಪ್ರಿಯಾ ಪ್ರಭಾಕರ ಸತ್ತಿಗೇರಿ.

# ಪರಿವಿಡಿ

## ಅಧ್ಯಾಯ – ೧

# ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

## ಅಧ್ಯಾಯ – ೧

# ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

"ಅಕ್ಕಾ । ನೀನು ಪುಣ್ಯವಂತೆ ಕಣೆ
ಮೈ ಮನಗಳನ್ನು ಬೆತ್ತಲೆಗೆ ಬಿಚ್ಚಿಟ್ಟ । ದಿಟ್ಟೆಯಾದೆ
ನಾ ನೋಡು । ಅಜ್ಜ ಹೊಲಿದಿಟ್ಟ
ಕೌದಿಯ ಸುರುಳಿಯಲ್ಲಿ
ಇವನ ಬವಣೆಯ ತೊತ್ತಾಗಿ
ಅರಮನೆಗೆ ಮೇಣದ ಬತ್ತಿಯಾಗಿ
ಒಳಗೆ ಉರಿಯುತ್ತ । ಬಿಸಿಗೆ ಕರಗುತ್ತ
ಹೆಪ್ಪುಗಡುತ್ತಿದ್ದೇನೆ".

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಭೋಗದ ವಸ್ತುವಾಗಿ ಅನುಭವಿಸಿದ ಯಾತನೆಯ ಪರಂಪರೆ ದೊಡ್ಡದು. ಅವಳು ಅನುಭವಿಸಿದ ನೋವು ಅಗಾಧ. ಪುರುಷಕೇಂದ್ರಿತ ಸಮಾಜದಲ್ಲಿ ಅವಳ ಧ್ವನಿಗೆ ಬೆಲೆಯೇ ಇಲ್ಲ. ಎಲ್ಲವನ್ನು ಪುರುಷಾತ್ಮಕವಾಗಿ ಪರಿಗಣಿಸುವುದು ಭಾರತೀಯ ಸಮಾಜದ ಸ್ವಭಾವ. ಶತಶತಮಾನಗಳ ಪರಂಪರೆ ಇರುವ ನಮ್ಮ ಸಮಾಜದಲ್ಲಿ ಕೆಲವು ಮಹಿಳೆಯರಲ್ಲಿ ಸ್ತ್ರೀವಾದಿ ಪ್ರಜ್ಞೆ ಜಾಗೃತಗೊಂಡದ್ದುಂಟು. ಆದರೆ ಅದು ಒಂದು ನಿಶ್ಚಿತವಾದ ಸಿದ್ಧಾಂತಕ್ಕೆ ಬದ್ಧವಾಗಿರಲಿಲ್ಲ. ಆ ಕಾರಣದಿಂದ ಅದು ಒಂದು ಚಿಂತನಾ ಕ್ರಮವಾಗಿ ರೂಪಗೊಳ್ಳಲಿಲ್ಲ. ತೀರಾ ಇತ್ತೀಚೆಗೆ ಸ್ತ್ರೀವಾದಿ ಚಿಂತನೆಗಳು ಚರ್ಚೆಗೊಳಗಾಗುತ್ತಿವೆ. ಕ್ರಮೇಣ ಅದೊಂದು ಚಳುವಳಿಯಾಗಿ ರೂಪಗೊಳ್ಳುತ್ತಿದೆ.

"ಮಾನವನ ಇತಿಹಾಸ "ಮಹಿಳೆಯ ಇತಿಹಾಸ" ಅಲ್ಲ. ಮಹಿಳೆಯ ಇತಿಹಾಸ ಹೊಸದಾಗಿಯೆ ಶೋಧಿತವಾಗಬೇಕಾಗಿದೆ. ಇತಿಹಾಸ ಪೂರ್ವದ ಬಗೆಗೆ ವಿಶೇಷ ಕಾಳಜಿವಹಿಸಿ ಅಭ್ಯಾಸ ಮಾಡುತ್ತಿರುವ ಅಂತ್ರೋಪಾಲಜಿ ಮತ್ತು ಆರ್ಕಿಯಾಲಜಿಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮರುಪರಿಶೀಲನೆಗೆ ಗುರಿಪಡಿಸ ಬೇಕಾಗಿದೆ. ಮಹಿಳೆಯ ದೃಷ್ಟಿಕೋನದಿಂದ ಪುರುಷನ ದೃಷ್ಟಿಕೋನವೂ ಸೇರಿಕೊಂಡಂಥ "ಸ್ನೇಹವಾದ" ಒಂದು ರೂಪುಗೊಳ್ಳಬೇಕಾಗಿದೆ. ಮಾರ್ಕ್ಸಿಸಂ, ಸೋಷಲಿಸಂ, ಗಾಂಧೀಯಿಸಂ, ಎಂಬಂತೆ ಫೆಮಿನಿಸಂ ಕೂಡಾ ಅಖಂಡ ಭೂಮಿಯ ಇತಿಹಾಸವನ್ನು ಹೊಸದಾಗಿ ನಿರೂಪಿಸುವ ಇತಿಹಾಸ ಸೃಷ್ಟಿಯ ದೃಷ್ಟಿಕೋನವಾಗಿ ರೂಪುಗೊಳ್ಳಬೇಕಾದರೆ ಏನು ಮಾಡಬೇಕೋ ಅದನ್ನು ಇನ್ನು ಮುಂದೆ ಮಾಡಬೇಕಾಗಿದೆ. ಇದು ನಮ್ಮ ಶೈಕ್ಷಣಿಕ ಆಲೋಚನೆಗಳ ಮೇಲೆ ಕೂಡಾ ಬೆಳಕು ಬೀರುವಂಥದಾಗಬೇಕೆನಿಸುತ್ತದೆ".[೧]

ಈ ವಿಚಾರಗಳ ಕುಲುಮೆಯಲ್ಲಿ ನಮ್ಮ ಮಹಿಳೆಯರು ತಮ್ಮ ಅಸ್ತಿತ್ವವನ್ನು ನಿರ್ಮಿಸಿಕೊಳ್ಳುತ್ತಿರುವರಲ್ಲದೇ ಸಾಹಿತ್ಯದ ಹಲವು ಪಾತ್ರಗಳನ್ನು ಪುನಃ ಸೃಷ್ಟಿಸುತ್ತಿರುವುದು ತೀರಾ ಇತ್ತೀಚಿನ ಬೆಳವಣಿಗೆ. ಅಮೃತಮತಿಯನ್ನು ಚಿತ್ರಿಸುವಾಗ ಜನ್ನ ಯಶೋಧರಚರಿತೆಯಲ್ಲಿ ಪುರುಷ ಪರ ನೆಲೆಯಲ್ಲಿಯೇ ಯೋಚಿಸಿದ್ದಾನೆ. 'ಚಿತ್ತ ಅಪಾತ್ರೆ ರಮತೇ ನಾರಿ' ಎಂಬುದು ಅವನ ವಾದ. ಅವನ ದೃಷ್ಟಿಯಲ್ಲಿ ಅಮೃತಮತಿ ಅದಃಪತಿತೆ, ಓದುಗರ ದೃಷ್ಟಿಯಲ್ಲಿ ಅವಳು ಜಾರಿದವಳು. ಆ ಕಾವ್ಯವನ್ನು ಓದಿದಾಗ ಆ ಎಲ್ಲ ಘಟನೆಗಳಿಗೂ ಅಮೃತಮತಿಯೇ ಕಾರಣವೆಂದು ಬಿಂಬಿತಗೊಂಡು ಅವಳ ವಿಷಯದಲ್ಲಿ ಮನಸ್ಸು ಒಂದು ಕ್ಷಣ ಜಿಗುಪ್ಸೆಗೊಳಗಾಗುವುದುಂಟು. ಈಗ ನಮ್ಮ ಕವಿಯತ್ರಿಯರು ಆ

---

೧. ಎಚ್.ಜೆ. ಸರಸ್ವತಿ (ಲೇ) ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ. ಪುಟ – ೧೦

ಪಾತ್ರದ ಒಳಹೊಕ್ಕು ಮನಸ್ಥಿತಿಯನ್ನು ಶೋಧಿಸಲು ಪ್ರಯತ್ನಿಸಿದ್ದಾರೆ. ಎಚ್.ಎಲ್. ಪುಷ್ಪರವರ 'ಅಮೃತಮತಿಯ ಸ್ವಗತ' ಈ ಮಾತಿಗೆ ಒಂದು ಉದಾಹರಣೆ. ಅವರು ನೈತಿಕ ಕಟ್ಟುಪಾಡುಗಳನ್ನು ದಾಟಿದ ಮೈಮನಗಳು ಹಸಿವನ್ನು ನಿರ್ಭಿಡೆಯಿಂದ ಅಭಿವ್ಯಕ್ತಿಸುತ್ತಾರೆ.

"ಇದು ಜೀವ;। ಪ್ರೇಮ, ಕಾಮ, ಮೋಹ ಒಳಗೊಂಡದ್ದು
ಮೈಯ ಹಸಿವಿಗೆ ಜನ್ಮಾಂತರಗಳಿಲ್ಲ.
ಬಂಧವಿಲ್ಲ ಈ ಪಾಡುಗಳಿಗೆ । ಹೊರುವ ಪಾಪಗಳಿಲ್ಲ
ಹಸಿವಿನೆದುರು ಏನಿಲ್ಲ.

## ಅಧ್ಯಯನದ ಉದ್ದೇಶ :

ಸ್ತ್ರೀವಾದಿ ಚಿಂತನೆಯ ಈ ನೆಲೆಯಲ್ಲಿ ಸಂಗ್ಯಾ-ಬಾಳ್ಯಾ ಸಣ್ಣಾಟದ ಗಂಗೆಯನ್ನು ಶೋಧಿಸುವ ಅಗತ್ಯವಿದೆ. ಸ್ಥೂಲವಾದ ಅರ್ಥದಲ್ಲಿ ಸಂಗ್ಯಾ-ಬಾಳ್ಯಾ ಗಂಗಿಯ ಹಾದರದ ಕಥೆಯಾದುದು ಪುರುಷ ಪ್ರಧಾನ ವ್ಯವಸ್ಥೆಯ ಸಂಚು ಆ ಪಾತ್ರವನ್ನು ಅವಮಾನಿತಗೊಳಿಸುವುದೇ ಆ ಬಯಲಾಟದ ಕರ್ತೃವಿನ ಉದ್ದೇಶವಾದಂತಿದೆ.

ಕೃಷ್ಣಪಾರಿಜಾತವನ್ನು ಹೊರತುಪಡಿಸಿದರೆ "ಸಂಗ್ಯಾ-ಬಾಳ್ಯಾ" ಉತ್ತರ ಕರ್ನಾಟಕದ ಪ್ರಸಿದ್ಧ ಬಯಲಾಟ. ಇದು ಸಣ್ಣಾಟದ ಉಗಮದ ಎರಡನೇ ಘಟ್ಟದಲ್ಲಿ ರಚಿತಗೊಂಡಿದ್ದು ಒಂದರ್ಥದಲ್ಲಿ ಗೀತರೂಪಕವೇ. ಈ ಸಣ್ಣಾಟದ ಕಥಾ ಪರಿಸರ ಬೆಳಗಾವಿ ಜಿಲ್ಲೆಯ ಇಂದಿನ ಬೈಲಹೊಂಗಲ ತಾಲೂಕು. ಬೈಲಹೊಂಗಲವೇ ಕಥೆಯ ಕೇಂದ್ರಸ್ಥಳ. ಈ ಸಣ್ಣಾಟದ ವಸ್ತು ಚಾರಿತ್ರಿಕವಾದುದು. ಅಲ್ಲಿ ಬರುವ ಪಾತ್ರಗಳೆಲ್ಲವು ನೈಜವಾದವು. ಅಲ್ಲಿಯ ಜನ ಇಂದಿಗೂ ಆ ಪಾತ್ರಗಳ ಕಾಲ, ಪರಿಸರ ಸಾಮಾಜಿಕ ಸ್ಥಿತಿ, ಘಟನಾ ನಂತರದ ಪರಿಣಾಮ ಪ್ರಭಾವಗಳನ್ನು ಮಾತಾಡಿಕೊಳ್ಳುತ್ತಾರೆ. ಆದರೆ ಬಯಲಾಟದ

ನಾಯಕಿಯಾಗಿರುವ ಗಂಗಿಯ ಮನೋವಿಶ್ಲೇಷಣೆ ಯಾವ ಕೃತಿಗಳಲ್ಲಿಯೂ ಪಡೆಮೂಡಿಲ್ಲ. ಎಲ್ಲರೂ ಅದನ್ನು ನೈತಿಕ ಮತ್ತು ಅನೈತಿಕತೆಯ ಚೌಕಟ್ಟಿನಲ್ಲಿಯೇ ನೋಡಿ ಆನಂದಿಸುತ್ತಿದ್ದಾರೆ. ಡಾ. ಎಂ. ಎಂ. ಕಲಬುರ್ಗಿಯವರ "ಖರೇ-ಖರೇ ಸಂಗ್ಯಾ-ಬಾಳ್ಯಾ" ನಾಟಕ ಇಡೀ ವಸ್ತುವನ್ನು ಪುನರ್ ಪರಿಶೀಲಿಸಲು ಕಾರಣವಾದಂತೆ ಚಾರಿತ್ರಿಕ ಸತ್ಯ ಮತ್ತು ಸಾಹಿತ್ಯಿಕ ತಥ್ಯಗಳನ್ನು ಸಾಮಾಜಿಕ ನ್ಯಾಯದ ಕಟಕಟೆಗೆ ಎಳೆತಂದಿತು. ಈ ನಿಟ್ಟಿನಲ್ಲಿ ಸಂಗ್ಯಾ-ಬಾಳ್ಯಾ ಬಯಲಾಟದ ವಸ್ತು, ಆಶಯ, ಉದ್ದೇಶ ಹಾಗೂ ಪರಿಣಾಮಗಳನ್ನು ಸಾಮಾಜಿಕ ನ್ಯಾಯದ ತಕ್ಕಡಿಯಲ್ಲಿ ತೂಗುವುದು ಅನಿವಾರ್ಯವಾಗುತ್ತದೆ. ಒಂದು ವಸ್ತುವನ್ನು ಇದ್ದಕ್ಕಿದ್ದಂತೆ ಸಾಹಿತ್ಯದ ಚೌಕಟ್ಟಿನಲ್ಲಿ ಬಿಂಬಿಸುವುದು ಎಷ್ಟರ ಮಟ್ಟಿಗೆ ಪ್ರಯೋಜನಕಾರಿ ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಅವಶ್ಯಕತೆ ಎನಿಸುತ್ತದೆ. ಈ ಎಲ್ಲ ಚಿಂತನೆಗಳ ನೆಲೆಯಲ್ಲಿ ಸಂಗ್ಯಾ ಬಾಳ್ಯಾ ಬಯಲಾಟವನ್ನು ಆಂತರಿಕ ಶೋಧಕ್ಕೆ ಒಳಪಡಿಸಿ ಅದರ ಚಾರಿತ್ರಿಕ ಮತ್ತು ಸಾಹಿತ್ಯಿಕ ನೆಲೆಗಳನ್ನು ಗುರುತಿಸುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶವಾಗಿದೆ.

## ಅಧ್ಯಯನದ ಸ್ವರೂಪ :

ಜನಪದ-ಜನರ ಬಾಯಿಂದ ಬಾಯಿಗೆ ಬಂದಿರುವ ಸಾಹಿತ್ಯ. ಇದು ಲಿಖಿತ ರೂಪದಲ್ಲಿರದ ಮೌಖಿಕ ಸಾಹಿತ್ಯ. ಹೀಗೆ ಮೌಖಿಕವಾಗಿ ಬೆಳೆದು ಲಿಖಿತರೂಪ ಹೊಂದಿ ಮಹತ್ವವನ್ನು ಪಡೆದವುಗಳೇ ಸಣ್ಣಾಟ, ಕೃಷ್ಣಪಾರಿಜಾತ, ದೊಡ್ಡಾಟ, ಬಯಲಾಟ, ಯಕ್ಷಗಾನಗಳು. ಅವುಗಳಲ್ಲಿ ಸಣ್ಣಾಟ ಬಹಳ ಮಹತ್ವ ಪಡೆದ ಪ್ರಭೇಧವಾಗಿದೆ. ಜಾನಪದ ಅನಕ್ಷರಸ್ಥರ ಅಂತರಂಗದಿಂದ ಹೊರಬಂದಂತದಾಗಿದೆ. ಜಾನಪದ ಕೇವಲ ಹಾಡು, ಕುಣಿತ, ತಮಟೆ, ಡಪ್ಪು, ಮದ್ದಳೆಗಳಾಗದೇ ಗಾದೆ, ಒಗಟು, ಮದುವೆ, ಜಾತ್ರೆ, ಹಬ್ಬ, ನೋವು, ನಲಿವು ಹೀಗೆ ಹಲವಾರು ಸಂದರ್ಭಕ್ಕೆ ತಕ್ಕಂತೆ ಹುಟ್ಟಿ ಬಂದಿವೆ. ಒಂದು ಶತಮಾನದ ಹಿಂದೆ ನಡೆದು ಹಳ್ಳಿಹಳ್ಳಿಗಳಲ್ಲಿ ರಂಗ ಪ್ರಯೋಗವಾಗುತ್ತಿರುವ ಸಂದರ್ಭದಲ್ಲಿ "ಸಂಗ್ಯಾ-ಬಾಳ್ಯಾ" ಲಿಖಿತ ರೂಪವನ್ನು ಪಡೆಯಿತು. ಇದು ಜನರ ಬಾಯಲ್ಲಿ

ಲೀಲಾಜಾಲವಾಗಿ ಬರುವ ಒಂದು ಜನಪದ ಕಥಾನಕ. ಈ ಸಣ್ಣಾಟ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗುತ್ತ ಹೋಗುತ್ತದೆ.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರ ಮೇಲಾದ ದೌರ್ಜನ್ಯಗಳನ್ನು, ಅಕ್ರಮಗಳನ್ನು ಸಮಾಜಕ್ಕೆ ತೋರಿಸಲು ಸಣ್ಣಾಟ, ಬಯಲಾಟಗಳೇ ಒಂದು ಮಾಧ್ಯಮವಾಗಿ ರೂಪಗೊಂಡಂತಹ ಕಾಲದಲ್ಲಿ ಸ್ತ್ರೀಯರ ಅನೈತಿಕತೆಯ ರೂಪವನ್ನೇ ಎತ್ತಿಹಿಡಿದು ಆ ವಿಷಯದ ಮೇಲೆಯೇ ಅನೇಕ ಟೀಕೆಗಳಾದವೇ ಹೊರತು ಆ ಅನೈತಿಕತೆಯ ಹಿಂದೆ ಪುರುಷನ ಪಾತ್ರವೇ ಮುಖ್ಯವಾಗಿರುತ್ತದೆ ಎನ್ನುವ ಅಂಶವು ಬದಿಗಿದ್ದು ಕೇವಲ ಹೆಣ್ಣಿನ ಅನೈತಿಕತೆಯ ವಿಷಯವನ್ನೇ ಬಯಲಿಗೆಳೆಯುವ ಪ್ರಯತ್ನಗಳಾಗಿವೆ. ಭಾರತೀಯ ಸಮಾಜದ ಪರಂಪರೆಯಲ್ಲಿ ಶತಶತಮಾನಗಳಿಂದ ಬೆಳೆದು ಬಂದ ಪುರುಷಕೇಂದ್ರಿತ ಸಮಾಜದಲ್ಲಿ ಗಂಗಿಯಂತಹ ಪಾತ್ರಗಳು ನ್ಯಾಯವೇ ಸಿಗದೇ ತನ್ನ ಬೆಲೆಯನ್ನೇ ಕಳೆದುಕೊಂಡು ಜನರ ಮನರಂಜನೆಯ ವಸ್ತುವಾಗಿ ಉಳಿದುಬಿಟ್ಟಿದೆ.

ಪುರುಷ ಪ್ರಧಾನ ಸಮಾಜ ರಚನೆಯಲ್ಲಿ ಹುಟ್ಟಿ ಬೆಳೆಯುವ ಹೆಣ್ಣಿನ ಮನಸ್ಸು, ಪ್ರಜ್ಞೆ ಸಹ ಪುರುಷ ಮೌಲ್ಯಗಳಿಂದಲೇ ನಿಯಂತ್ರಿತಗೊಂಡಿರುತ್ತವೆ. ಹೀಗಾಗಿ ಪುರುಷ ಪ್ರಭುತ್ವವನ್ನೇ ಒಪ್ಪಿಕೊಂಡು ಅದನ್ನು ಸ್ವೀಕರಿಸುವ ಅಭಿವ್ಯಕ್ತಿಸುವ ಮಹಿಳೆಯರೂ ನಮ್ಮ ಮಧ್ಯೆ ಇದ್ದಾರೆ. "ಹುಟ್ಟಿದಾಗ ತಂದೆಯ ಆಸರೆ, ಬೆಳೆಯುವಾಗ ಸಹೋದರರ ಆಸರೆ, ಯೌವ್ವನದಲ್ಲಿ ಗಂಡನ ಆಸರೆ, ಮುಪ್ಪಿನಲ್ಲಿ ಮಗನ ಆಸರೆ" ಹೀಗೆ ಪ್ರತಿಯೊಂದು ಹಂತದಲ್ಲಿ ಪುರಷನ ಆಸರೆಯಲ್ಲಿಯೇ ಬೆಳೆದು ಆತನ ನಿರ್ಬಂಧನೆಗಳನ್ನು ಒಪ್ಪಿಕೊಂಡು ಬೆಳೆಯುವ ಹೆಣ್ಣಿಗೆ ಪುರುಷ ಪ್ರಧಾನ ಸಮಾಜದಲ್ಲಿ ಪುರುಷನ ಆಸೆಗಳನ್ನು ಪೂರೈಸುವ ಸಾಧನವಾದಳು. ಅವಳ ಸ್ಥಾನಮಾನ ಆದರ್ಶಗಳನ್ನು ಪುರುಷನೇ ರೂಪಿಸಿದನು. ಅವಳ ಆಸೆ, ಕನಸು, ಬಯಕೆಗಳಿಗೆ ಯಾವ ಬೆಲೆಯು

ದೊರೆಯದು. ಈ ಹಿನ್ನೆಲೆಯಲ್ಲಿಯೇ ಸಂಗ್ಯಾಬಾಳ್ಯಾ ನಾಯಕಿಯ ಪಾತ್ರವು ಪಡೆಮೂಡಿದೆ.

ಉತ್ತರ ಕರ್ನಾಟಕದ ಪ್ರಸಿದ್ಧ ಸಣ್ಣಾಟ ಸಂಗ್ಯಾಬಾಳ್ಯಾದ ಮೇಲೆ ಅನೇಕ ವಿದ್ವಾಂಸರು ಅಧ್ಯಯನ ಕೈಗೊಂಡು ಸಾಹಿತ್ಯಿಕ ಸತ್ಯವನ್ನು ತಿಳಿಹೇಳಿದ್ದಾರೆ. ಆ ಅಧ್ಯಯನಗಳನ್ನೆಲ್ಲ ಸಂಗ್ರಹಿಸಿ, ಅಭ್ಯಸಿಸಿ, ತುಲನಾತ್ಮಕವಾಗಿ ಪರಿಶೋಧಿಸಿದ್ದು ಈ ಪ್ರಬಂಧದ ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನ ಐದು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೇ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯನ್ನು ವಿವರಿಸಲಾಗಿದೆ. ಎರಡನೇ ಅಧ್ಯಾಯ ಸಂಗ್ಯಾಬಾಳ್ಯಾ ವಸ್ತು, ಸ್ವರೂಪ ಮತ್ತು ಆಶಯ ಪ್ರಸ್ತುತಪಡಿಸುವುದು. ಮೂರನೇ ಅಧ್ಯಾಯ ಸಂಗ್ಯಾಬಾಳ್ಯಾ ಸಣ್ಣಾಟದ ವಿವಿಧ ಪಠ್ಯ ಮತ್ತು ಪಠ್ಯೆಗಳ ಅಂಶಗಳನ್ನು ಚರ್ಚಿಸುತ್ತದೆ. ನಾಲ್ಕನೇ ಅಧ್ಯಾಯದಲ್ಲಿ ಸಣ್ಣಾಟದ ಚಾರಿತ್ರಿಕ ಸತ್ಯ ಮತ್ತು ಸಾಹಿತ್ಯಿಕ ತಥ್ಯದ ಬಗ್ಗೆ ವಿವರಿಸಲಾಗಿದೆ. ಐದನೇ ಅಧ್ಯಾಯ ಸಮಾರೋಪ. ಈ ಎಲ್ಲ ಅಧ್ಯಯನದ ಫಲಿತಾಂಶದ ಸಂಕ್ಷಿಪ್ತ ರೂಪವಿದು.

ಹೀಗೆ ಈ ಸಂಪ್ರಬಂಧ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮುಖಾಮುಖಿ ಅಧ್ಯಯನದ ಮಾದರಿಯಾಗುತ್ತದೆ.

## ಅಧ್ಯಯನದ ವ್ಯಾಪ್ತಿ :

ಸಣ್ಣಾಟ, ಕೃಷ್ಣಪಾರಿಜಾತ ಎಂಬ ರಂಗನಾಟಕಗಳನ್ನು ಡಾ. ಇಟ್ಟಣ್ಣವರ, ಡಾ. ಮಲಶೆಟ್ಟಿ ಮೊದಲಾದ ವಿದ್ವಾಂಸರು ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ವಸ್ತು, ಆಶಯ, ವಿಕಾಸ, ನಟನಟಿಯರ ಕುರಿತು ಅವುಗಳ ವಿಸ್ತೃತ ಅಧ್ಯಯನವನ್ನು ಕೈಗೊಂಡು ಅದರ ಮಹತ್ವವನ್ನು ತಿಳಿಸಿದ್ದಾರೆ. ನಾಟಕಗಳಲ್ಲಿ

ಬರುವ ನಾಯಕ, ನಾಯಕಿಯ ಮನೋವಿಶ್ಲೇಷಣೆಯನ್ನು ಓದುಗರ ಮನಮುಟ್ಟುವಂತೆ ಸೃಷ್ಟಿಸಿದ್ದಾರೆ. ಅವರು ಅನುಭವಿಸುವ ಯಾತನೆ, ಅವಳ ಮೇಲಾದ ಅನೈತಿಕತೆಯ ಅಪವಾದಗಳು, ಮನಸ್ಸಿನ ತುಮುಲಗಳು, ಭಾವನೆಗಳನ್ನು ಪ್ರೇಕ್ಷಕರ ಮನಸ್ಸಿನ ಮೇಲೆ ಅಚ್ಚನ್ನೊತ್ತುವ ಹಾಗೆ ಮೂಡಿಸಿದ್ದಾರೆ.

ಈ ನಾಟಕದ ನಾಯಕಿಯ ಪಾತ್ರದ ಬಗ್ಗೆ ಸಾಕಷ್ಟು ಚರ್ಚೆಗಳಾದವು. ಆದರೆ ಸ್ತ್ರೀವಾದಿ ವಿಮರ್ಶೆಗಳು ಹುಟ್ಟಿಕೊಂಡಾಗಿನಿಂದ ಆ ಪಾತ್ರಕ್ಕೆ ಸ್ವಲ್ಪ ಪ್ರಮಾಣದಲ್ಲಿ ಬೆಲೆ ದೊರೆತಂತಾಗಿದೆ. [೨]"ಸ್ತ್ರೀವಾದವೆನ್ನುವುದು ಬೌದ್ಧಿಕ ಕಸರತ್ತು ಏನಲ್ಲ ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ, ಘನತೆ, ಗೌರವದ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹದೇ ಪ್ರತಿಕ್ರಿಯೆಯನ್ನು ಬಯಸುವಂತಹದಾಗಿದೆ. ಪ್ರಜ್ಞಾವಂತ ಪುರುಷರು ಸ್ತ್ರೀಯರಿಗೆ ತಕ್ಕ ಘನತೆ ಗೌರವಗಳಿಂದ ಅವರನ್ನು ಕಾಣುವುದೂ ಸ್ತ್ರೀವಾದವಾಗಿದೆ". [೨]

ಇತ್ತೀಚಿನ ದಿನಗಳಲ್ಲಿ ಸ್ತ್ರೀವಾದಿ ಚಿಂತನೆಯ ನೆಲೆಯಲ್ಲಿಯೇ ಚರ್ಚೆಯ ಸಂದರ್ಭಕ್ಕೆ ಒಳಪಟ್ಟ ಡಾ. ಕಲಬುರ್ಗಿಯವರ "ಖರೇ-ಖರೇ ಸಂಗ್ಯಾಬಾಳ್ಯಾ" ಪರ-ವಿರೋಧ ಚರ್ಚೆಗಳಿಗೆ ಆಸ್ಪದ ಮಾಡಿಕೊಟ್ಟಿತು. ಅದರ ಬಗ್ಗೆ ಅನೇಕ ಚರ್ಚೆಗಳು ನಡೆದವು. ಸ್ತ್ರೀವಾದಿ ವಿಮರ್ಶಾ ಚಿಂತನಾಪರ ದಾರಿಯಲ್ಲಿ ಗಂಗಿ ಪಾತ್ರವನ್ನು ಕಂಡುಕೊಂಡಿದ್ದಾರೆ. ಅದರ ಚಾರಿತ್ರಿಕ ಸತ್ಯವನ್ನು ಹೇಳಲು ತವಕಿಸಿದ್ದಾರೆ. ಆದರೆ ಆ ವಿಷಯದ ವಿರುದ್ಧವಾಗಿಯೇ ಅನೇಕ ಚರ್ಚೆಗಳು ಭುಗಿಲೆದ್ದವು.

ಆ ಎಲ್ಲ ಚರ್ಚೆಗಳನ್ನು ಇಲ್ಲಿ ಸಾದ್ಯಂತವಾಗಿ ಪರಿಶೀಲಿಸಿ ಹೊಸ ಆಯಾಮ ನೀಡಲು ಪ್ರಯತ್ನಿಸಲಾಗಿದೆ.

---

೨. ಎಚ್.ಜೆ. ಸರಸ್ವತಿ (ಲೇ) ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ಪುಟ – ೧೨

## ಅಧ್ಯಯನದ ವೈಧಾನಿಕತೆ :

ಕೃಷ್ಣಪಾರಿಜಾತ, ಯಕ್ಷಗಾನ, ಸಂಗ್ಯಾಬಾಳ್ಯಾ ಹೀಗೆ ಮೊದಲಾದ ಗೀತರೂಪಕಗಳಾದ ಸಣ್ಣಾಟಗಳ ಬಗ್ಗೆ ಎಷ್ಟು ಅಧ್ಯಯನ ಮಾಡಿದರೂ ಕಡಿಮೆಯೇ ಪ್ರತಿಸಲ ಅಧ್ಯಯನ ಕೈಗೊಂಡಾಗಲೂ ಒಂದೊಂದು ಹೊಸ ವಿಷಯಗಳು ಬೆಳಕಿಗೆ ಬರುತ್ತವೆ. ಸಣ್ಣಾಟಗಳಲ್ಲಿ ಜನಪ್ರೀಯತೆಯನ್ನು ಗಳಿಸಿದ ಸಂಗ್ಯಾಬಾಳ್ಯಾ ವಿಷಯದ ಮೇಲೆ ಅನೇಕ ವಿಮರ್ಶೆಗಳು ಆಗಿವೆ. ಸಾಕಷ್ಟು ಪರ–ವಿರೋಧ ಚರ್ಚೆಗಳಾಗಿವೆ. ಸಂಗ್ಯಾಬಾಳ್ಯಾ ನಡೆದ ಪ್ರದೇಶದಲ್ಲಿಯೇ ಈ ಆಟವನ್ನು ಆಡಲು ನಿರ್ಬಂಧ ಹಾಕಲಾಗಿದೆ. ಇದಕ್ಕೆ ಕಾರಣ ಊರಿನ ಗೌರವದ ಪ್ರತಿಷ್ಠೆಗೆ ಆಗುವ ಧಕ್ಕೆಯನ್ನು ತಪ್ಪಿಸುವುದು.

ಈಗ ಸಂಗ್ಯಾ–ಬಾಳ್ಯಾ ಸಣ್ಣಾಟವನ್ನು ಜಾನಪದ ನೆಲೆಯಲ್ಲಿಟ್ಟು ಅಧ್ಯಯನ ಮಾಡುವುದು ಮುಗಿದಿದೆ. ಅದನ್ನು ಹೊಸ ಕಾಲದ, ಹೊಸ ವಿಚಾರಗಳ ವೇದಿಕೆಯಲ್ಲಿ ಅಧ್ಯಯನ ಮಾಡುವ ಅಗತ್ಯ ತಲೆದೋರಿದೆ. ಹಳಗನ್ನಡ ಸಾಹಿತ್ಯದ ಹಲವು ಪಾತ್ರಗಳನ್ನು ಹೊಸ ಸೈದ್ಧಾಂತಿಕ ಧೋರಣೆಗಳಿಂದ ಪುನರ್ ಪರಿಶೀಲಿಸುವ ಕಾರ್ಯ ಈಗಾಗಲೇ ಆರಂಭವಾಗಿದೆ.

ನವ್ಯದ ಸಂದರ್ಭದಲ್ಲಿ "ಅಮೃತಮತಿ" ತುಂಬ ಚರ್ಚೆಗೆ ಒಳಗಾದವಳು ಏಕಲವ್ಯ, ಕರ್ಣ ಪಾತ್ರಗಳನ್ನು ಬಂಡಾಯದ ವೇದಿಕೆಗೆ ತರಲಾಯಿತು. ಅದರಂತೆ "ಸಂಗ್ಯಾ–ಬಾಳ್ಯಾ" ಸಣ್ಣಾಟವನ್ನು ಆಧುನಿಕ ವೇದಿಕೆಗೆ ತರುವ ಕಿರು ಪ್ರಯತ್ನ ಈ ಪ್ರಬಂಧದ ಆಶಯವಾಗಿದೆ. ಹೊಸ ಹೊಸ ವಿಚಾರಧಾರೆಗಳ ಹಿನ್ನಲೆಯಲ್ಲಿ ಇಲ್ಲಿಯ ವೈಧಾನೀಕತೆಯನ್ನು ರೂಪಿಸಲಾಗಿದೆ.

"ಸಂಗ್ಯಾ–ಬಾಳ್ಯಾ" ಸಣ್ಣಾಟದ ಮೌಖಿಕ ಪಠ್ಯ, ಲಿಖಿತ ಪಠ್ಯ, ಪಠ್ಯ–ರೂಪಿತ ಪಠ್ಯಗಳನ್ನು ಆಧಾರವಾಗಿಟ್ಟಕೊಂಡು ಅವುಗಳ ಆಶಯ–ಉದ್ದೇಶಗಳನ್ನು ಪರಿಶೀಲಿಸಿ, ಸಾಹಿತ್ಯಿಕ ನಿಲುವು ವಿವರಿಸಲು ಯತ್ನಿಸಲಾಗಿದೆ.

# ಅಧ್ಯಾಯ – ೨

# ಸಂಗ್ಯಾ ಬಾಳ್ಯಾ: ವಸ್ತು, ಸ್ವರೂಪ ಮತ್ತು ಆಶಯ

# ಅಧ್ಯಾಯ – ೨

# ಸಂಗ್ಯಾ ಬಾಳ್ಯಾ: ವಸ್ತು, ಸ್ವರೂಪ ಮತ್ತು ಆಶಯ

## ಸಣ್ಣಾಟದ ವಸ್ತು :

"ಸಂಗ್ಯಾ ಬಾಳ್ಯಾ" ಸಣ್ಣಾಟದ ವಸ್ತು ಸಂಕೀರ್ಣತೆಯಿಂದ ಕೂಡಿದೆ. ಅದು ಕಾಣಲು ಸರಳವಾಗಿದ್ದರೂ ಒಳಗೊಳಗೆ ಅನೇಕ ಪದರುಗಳನ್ನೊಳಗೊಂಡಿದೆ. ಅವುಗಳನ್ನು ಬಿಚ್ಚುತ್ತಾ ಹೋದಂತೆ ಹೊಸ ಹೊಸ ಸಂಗತಿಗಳು ತೆರೆದುಕೊಳ್ಳುತ್ತವೆ.

ಸಾಮಾಜಿಕ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿ ಸಂಗ್ಯಾ ಬಾಳ್ಯಾ ರೂಪಿತಗೊಂಡಿದೆ. ಸಮಾಜದ ಎಲ್ಲ ಮುಖಗಳನ್ನು ಒಳಗೊಂಡಂಥ ಒಂದು ಮಾದರಿ ಆಟ. ಇದು ಬಡವರ ತೊಳಲಾಟ, ದೌರ್ಬಲ್ಯ, ಪ್ರಾಮಾಣಿಕತೆ, ಶ್ರೀಮಂತರ ಅಟ್ಟಹಾಸ, ವೈಭವ, ದೌರ್ಜನ್ಯಗಳ ರೂಪಕ ಇಲ್ಲಿ ಒಬ್ಬ ಶ್ರೀಮಂತ ಬಡವನೊಬ್ಬನ ಬಡತನವನ್ನೇ ತನ್ನ ಸ್ವಾರ್ಥದ ದಾಳವಾಗಿ ಬಳಸಿಕೊಳ್ಳುತ್ತಾನೆ. ಅದರಂತೆ ಮನುಷ್ಯ ಸಹಜವಾದ ದೌರ್ಬಲ್ಯವನ್ನು ಶ್ರೀಮಂತ ನಗದೀಕರಿಸಿಕೊಳ್ಳುತ್ತಾನೆ. ಒಂದು ವಿಧದಲ್ಲಿ ಇದು ಬಡತನ ಮತ್ತು ಸಿರಿತನಗಳ ಸಂಘರ್ಷ. ಸಾಮಾಜಿಕ ಚಿಂತನಾ ನೆಲೆಯಲ್ಲಿ ವಿಚಾರಿಸಿದಾಗ ಶ್ರೀಮಂತರು ಬಡವರ ದೌರ್ಬಲ್ಯಗಳನ್ನು ನಾನಾ ತೆರದಲ್ಲಿ ಉಪಯೋಗಿಸಿಕೊಂಡ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಪರಮ್ಮ, ಬಾಳ್ಯಾ ತಮ್ಮ ಬಡತನದ ದೆಸೆಯಿಂದ ಸಂಗ್ಯಾನಿಗೆ ಸಹಕಾರ ಮಾಡಿರಬಹುದು. ಇದರಲ್ಲಿ ಅವರ ಸ್ವಾರ್ಥವು ಅಡಕವಾಗಿದೆ. ಸಮಾಜದಲ್ಲಿ ಜರುಗುವ ಅಷ್ಟೋ ಅನೈತಿಕ ಕಥೆಗಳನ್ನೆಲ್ಲ ಬಿಟ್ಟು ಇದೇ ಏಕೆ ಇಷ್ಟು ಜನಪ್ರಿಯವಾಯಿತು ಎಂಬ ಪ್ರಶ್ನೆ ಮೂಡಿದಾಗ ಹಳ್ಳಿಯ ಪರಿಸರದಲ್ಲಿ ಶ್ರೀಸಾಮಾನ್ಯನ ಮನೆಯ ವಿಷಯಗಳಿಗಿಂತ ಶ್ರೀಮಂತರ ಮನೆಯ ಸಣ್ಣ ಘಟನೆಯು ದೊಡ್ಡ ಪೆಡಂಭೂತವಾಗಿ ಸೃಷ್ಟಿಯಾಗುತ್ತದೆ. ಈ ಘಟನೆಯನ್ನು

ಹೊರತುಪಡಿಸಿ ಸಾಕಷ್ಟು ಅನೈತಿಕ, ಹಾದರದ ಕಥೆಗಳಿದ್ದರೂ ಇದು ಶ್ರೀಮಂತ, ಪ್ರತಿಷ್ಠಿತ ಮನೆತನದ ಹೊಸ್ತಿಲೊಳಗೆ ನಡೆದ ಘಟನೆಯಾಗಿರುವುದರಿಂದ ಇದು ಹೆಚ್ಚು ಬಯಲಿಗೆ ಬಂದಿತು.

ಈ ಸಣ್ಣಾಟದಲ್ಲಿ ಮಾನವನಲ್ಲಿ ಹುದುಗಿರುವ ನಾನಾ ಭಾವಗಳು ವ್ಯಕ್ತವಾಗಿವೆ. ಪ್ರೀತಿ, ಪ್ರೇಮ, ಪ್ರಣಯ, ದ್ವೇಷ, ಸಂಘರ್ಷ, ಮೋಸ, ಕುತಂತ್ರ, ಆಪ್ತತೆ ಈ ರೀತಿಯಾಗಿ ವಿವಿಧ ಭಾವಗಳನ್ನು ಒಳಗೊಂಡ ಸಾಮಾಜಿಕ ನಾಟಕವಾಗಿ ರೂಪಿತಗೊಂಡಿದೆ. ಈ ಸಣ್ಣಾಟವನ್ನು ಬರೆದಾದ ಮೇಲೆ ಲಗಳೇರ ಮನೆತನ ಮತ್ತು ಪತ್ತಾರನ ಮನೆತನದ ನಡುವೆ ಸಾಕಷ್ಟು ಸಂಘರ್ಷಗಳಾದವು. ಎಷ್ಟೋ ಕಾಲ ಎರಡು ಮನೆತನಗಳ ನಡುವೆ ಹಗೆತನವಿತ್ತೆಂದು ಡಾ॥ ಚಂದ್ರಶೇಖರ ಕಂಬಾರರವರು ಊಹಿಸಿದ್ದಾರೆ. ಇತ್ತೀಚಿನ ಸಂದರ್ಭಗಳಲ್ಲಿ ನಾಟಕದ ಕರ್ತೃವಿನ ಬಗ್ಗೆ ಅನೇಕ ಚರ್ಚೆಗಳಾಗುತ್ತಿವೆ. ಕೆಲವು ವಿದ್ವಾಂಸರ ಪ್ರಕಾರ ದೋಟ್ಯಾಳ ವೀರಬಸಪ್ಪ ನಾಟಕದ ರಚನೆಕಾರ ಎನ್ನುವ ಅಂಶ ಬೆಳಕಿಗೆ ಬಂದಿದೆ. ಆತನು ಗದುಗಿನವನಾಗಿದ್ದರಿಂದ ನಾಟಕದ ಹಲವು ಪದ್ಯಗಳಲ್ಲಿ ಶಹಪೂರ ಪೇಟೆ ಬಸವಣ್ಣನ ಹೆಸರನ್ನು ಪ್ರಸ್ತಾಪಿಸಲಾಗಿದೆ. ಈ ರೂಪಕದ ಕಾಲಘಟ್ಟದಲ್ಲಿ ಬಂದಿರುವ ಇತರ ಸಣ್ಣಾಟಗಳಲ್ಲಿ ಸಂಗ್ಯಾ ಬಾಳ್ಯಾ ಕತೃವಿನ ಬಗ್ಗೆ ಸುಳಿವುಗಳು ಸಿಗುವುದಿಲ್ಲ. ಐತಿಹಾಸಿಕ ಆಧಾರಗಳ ಸಿಗುವತನಕ ಈ ನಾಟಕದ ಕತೃ ಮತ್ತು ಕಾರಣ ವಿಚಾರವನ್ನು ಒಪ್ಪುವುದು ಬಹಳ ಕಷ್ಟವಾಗುತ್ತದೆ.

ಸಂಗ್ಯಾ ಬಾಳ್ಯಾದ ಕರ್ತೃ, ಕಾರಣ ಘಟನೆಯ ಹಿನ್ನಲೆ ಇವುಗಳನ್ನೆಲ್ಲ ಪಕ್ಕಕ್ಕೆ ಸರಿಸಿ ರಂಗಭೂಮಿಯಲ್ಲಿ ಮನ ಸೆಳೆಯುವ ಹಾಡುಗಳು, ಮೈನವಿರೇಳಿಸುವ ಸನ್ನಿವೇಶಗಳು ಪಾತ್ರಸೃಷ್ಟಿ, ಸಂಭಾಷಣೆಯ ಶೈಲಿ ಇವೆಲ್ಲವು ಇದರ ವೈಶಿಷ್ಟ್ಯಗಳಾಗಿವೆ. ಜಾನಪದ ಸಣ್ಣಾಟಗಳ ಪಂಕ್ತಿಯಲ್ಲಿ ಇದು ಅತ್ಯಂತ ಶ್ರೇಷ್ಠವಾದುದು. ಇದು ಸಾಮಾಜಿಕ ವಸ್ತುವನ್ನೊಳಗೊಂಡ ವಾಸ್ತವಿಕ ಘಟನೆಯ ಮೇಲೆ ರೂಪಿತವಾಗಿರುವುದರಿಂದ ಇದರ ವಸ್ತು ಬಹಳ ಗಟ್ಟಿತನದಿಂದ

ಕೂಡಿರುವುದರಿಂದ ತುಂಬಾ ಜನಪ್ರೀಯತೆ ಗಳಿಸಿತು. ಅನೇಕ ನಿರ್ಬಂಧ ಹಾಕಿದರೂ ಕೂಡಾ ಎಷ್ಟೋ ವರ್ಷಗಳ ಕಾಲ ಗುಪ್ತವಾಗಿ ಪ್ರದರ್ಶನವಾಗುತ್ತಿತ್ತು.

'ಗಜವದನಾ ನಿಮ್ಮ ಧ್ಯಾನ ಮಾಡುವೆ ನಾವಾ......' ಎಂದು ವಿಘ್ನೇಶ್ವರನ ಸ್ತೋತ್ರದಿಂದ ಪ್ರಾರಂಭವಾಗುವ ಈ ಆಟ ಹಳ್ಳಿಯ ಸೊಗಡನ್ನು ಮನೋಜ್ಞವಾಗಿ ಚಿತ್ರಿಸುತ್ತದೆ. ೧೯೮೦ರಲ್ಲಿ ಪ್ರಕಟಗೊಂಡ ಡಾ॥ ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿಯವರು ಚಂಪೂ ಕಾವ್ಯದ ಶೈಲಿಯಲ್ಲಿ ಸಂಪಾದಿಸಿರುವ ಸಂಗ್ಯಾ ಬಾಳ್ಯಾ ೨೫ ದೃಶ್ಯಗಳನ್ನೊಳಗೊಂಡಿದೆ. ಪ್ರತಿಯೊಂದು ದೃಶ್ಯ ಪದ್ಯ ಮತ್ತು ಗದ್ಯಗಳಿಂದ ಕೂಡಿವೆ.

೧೯೮೧ರಲ್ಲಿ ಡಾ. ಚಂದ್ರಶೇಖರ ಕಂಬಾರರು ಬರೆದಿರುವ "ಸಂಗ್ಯಾ ಬಾಳ್ಯಾ ಅನ್ನಬೇಕೋ ನಾಡೊಳಗ" ಪ್ರತಿಕೃತಿಯಲ್ಲಿ ೧೬ ಅಂಕಗಳನ್ನು ಅಳವಡಿಸಲಾಗಿದೆ. ಗೆಳೆಯರಿಬ್ಬರ ಭೇಟ್ಟಿ, ಮಾರವಾಡಿಯ ಸಂಭಾಷಣೆ, ಈರ್ಯಾ ಬಳ್ಳಾರಿಗೆ ಹೋಗುವ ದೃಶ್ಯ, ಗಂಗಿ ಸರಗಿ ಕಳೆದುಕೊಂಡದ್ದು, ಸಂಗ್ಯಾ ಗಂಗಿಯ ರೂಪಲಾವಣ್ಯಕ್ಕೆ ಮನಸೋತದ್ದು, ಪರಮ್ಮನ ಕುಂಟಲತನ ಮತ್ತು ಈರ್ಯಾ ಸಂಗ್ಯಾನ ಕೊಲೆಮಡಿದ್ದು ಎಲ್ಲ ದೃಶ್ಯಗಳು ಸೊಗಸಾಗಿ ಮೂಡಿವೆ.

ಡಾ. ಎಂ.ಎಸ್. ಲಠ್ಠೆಯವರು ೧೯೯೧ರಲ್ಲಿ ಸಂಪಾದಿಸಿ ಪ್ರಕಟಿಸಿದ "ಸಂಗ್ಯಾ ಬಾಳ್ಯಾ" ಡಪ್ಪಿನಾಟದ ಶೈಲಿ ವಿಶಿಷ್ಟವಾದುದು. ೧೯೯೬ರಲ್ಲಿ ಡಾ. ಎಸ್.ಎಸ್. ಅಂಗಡಿಯವರು ಜಾನಪದ ರಂಗಭೂಮಿಯಲ್ಲಿ ಸಂಗ್ಯಾ ಬಾಳ್ಯಾ ನಾಟಕದ ಜನಪ್ರೀಯತೆ, ವೈವಿಧ್ಯತೆ, ವೈಶಿಷ್ಟತೆಗಳ ಕುರಿತು ಸಮಗ್ರ ಅಧ್ಯಯನದ ಕೈಗೊಂಡರು. ಅಲ್ಲಿನ ಪಾತ್ರಗಳ ಮನೋವಿಶ್ಲೇಷಣೆ, ಅದರ ಭಾಷೆ, ಶೈಲಿ, ಸಂಗೀತ ಮತ್ತು ನೃತ್ಯ, ಶಕುನಗಳ ಬಗೆಗಿರುವ ನಂಬಿಕೆಗಳು ಮತ್ತು ಹಿಂದೆ ಮಾಡಿರುವ ಅಧ್ಯಯನಗಳ ಸಮೀಕ್ಷೆಯ ಸಂಕ್ಷಿಪ್ತ ವಿವರಗಳಿಂದ ಕೂಡಿದ ಗ್ರಂಥವಿದು.

೨೦೦೫ರಲ್ಲಿ ರಚಿತಗೊಂಡ ಡಾ॥ ಎಂ.ಎಂ. ಕಲಬುರ್ಗಿಯವರ "ಖರೇ-ಖರೇ ಸಂಗ್ಯಾ ಬಾಳ್ಯಾ" ಮೂಲ ಸಂಗ್ಯಾ ಬಾಳ್ಯಾ ಸಣ್ಣಾಟಕ್ಕಿಂತ ವಸ್ತು, ನಿರೂಪಣೆಯಲ್ಲಿ ಭಿನ್ನವಾದುದು. ಸಂಗ್ಯಾ ಬಾಳ್ಯಾ ವಸ್ತು, ಪಾತ್ರ ಸಂಯೋಜನೆ, ನಿರ್ವಹಣೆಯಲ್ಲಿ ಸಂಪೂರ್ಣ ಭಿನ್ನವಾದುದು. ೧೯ ದೃಶ್ಯಗಳನ್ನೊಳಗೊಂಡಿದ್ದು ಪ್ರತಿಯೊಂದು ದೃಶ್ಯಗಳಲ್ಲಿಯೂ ಒಂದೊಂದು ಸನ್ನಿವೇಶಗಳನ್ನು ಪೋಣಿಸಿದ್ದಾರೆ. ಈರಪ್ಪನ ಮನೆಯಲ್ಲಾಗುವ ಸಂಭಾಷಣೆ, ಗಂಗಾ, ಪರಮ್ಮ, ಪತ್ತಾರ ಮನೆಗೆ ಒಡವೆ ಮಾಡಲು ಕೊಡಲು ಬಂದಾಗಿನ ಸನ್ನಿವೇಶ, ಹೀಗೆ ಇಡೀ ನಾಟಕವನ್ನು ದೃಶ್ಯಗಳಾಗಿ ವಿಂಗಡಿಸಿ ಕಥೆಯನ್ನು ಬಹಳ ಸೊಗಸಾಗಿ ಹೆಣೆದಿದ್ದಾರೆ.

## ಸಣ್ಣಾಟದ ಸ್ವರೂಪ :

ಸಂಗ್ಯಾ ಬಾಳ್ಯಾ ಇಬ್ಬರ ಜೀವದ ಗೆಳೆಯರ ಕಥೆ. ಅದು ಗಂಗಿಯ ಶೀಲದ ವೇದಿಕೆಯ ಮೇಲೆ ಪ್ರದರ್ಶಿತಗೊಳ್ಳುತ್ತದೆ. ಎಲ್ಲ ಕೃತಿಗಳಲ್ಲಿಯೂ ಬೈಲಹೊಂಗಲ, ಬೈಲವಾಡ, ಮರಡಿ ಬಸವಣ್ಣನ ಗುಡಿಯ ಪರಿಸರವನ್ನು ಬಳಸಿಕೊಳ್ಳಲಾಗಿದೆ. ಈ ಸಣ್ಣಾಟ ಬಹಿರಂಗದಲ್ಲಿ ಗೆಳೆಯರಿಬ್ಬರ ಆಪ್ತತೆ-ದ್ರೋಹಗಳ ಕಥೆಯಾಗಿದೆ. ಶ್ರೀಮಂತ ಸಂಗ್ಯಾ ಏನೂ ಇಲ್ಲದ ಪರಿಸ್ಥಿತಿಯಲ್ಲಿರುವ ಬಾಳ್ಯಾನಿಗೆ ಆಶ್ರಯ ನೀಡಿದ್ದು ಬಹುದೊಡ್ಡ ಉಪಕಾರ. ಬಸವಣ್ಣನ ಜಾತ್ರೆಯ ಸಂದರ್ಭದಲ್ಲಿ ಗಂಗಾನನ್ನು ನೋಡಿ ಸಂಗ್ಯಾ ಮೋಹಿತನಾಗಿ ದುರಂತಕ್ಕೆ ಎಡೆಮಾಡಿಕೊಡುವ ಪ್ರಸಂಗ ಹೃದಯವಿದ್ರಾವಕ ಘಟನೆಯಾಗಿದೆ.

ಈರಪ್ಪನ ಮನೆ ದೇವರು ಮರಡಿ ಬಸವಣ್ಣ ಬಹಳ ಸತ್ಯುಳ್ಳ ದೇವರು. ಬಸವಣ್ಣನ ಜಾತ್ರೆಯ ಸಮಯಕ್ಕೆ ಈರಪ್ಪನಿಗೆ ಬಳ್ಳಾರಿ ವ್ಯಾಪಾರಕ್ಕೆ ಪತ್ರ ಬಂದ ನಿಮಿತ್ತ ವ್ಯಾಪಾರಕ್ಕೆ ಹೊರಡಲು ಸಜ್ಜಾಗುತ್ತಾನೆ. ಆಗ ಗಂಗಾ ತನ್ನ ಒಂಟಿತನದ ಅಳಲನ್ನು ಗಂಡನ ಮುಂದೆ ಹೇಳಿಕೊಂಡಾಗ ಮೇಲ್ಮನಿ ಪರಮ್ಮನನ್ನು ಗಂಗಾನ

ಜೊತೆ ಇರಲು ವ್ಯವಸ್ಥೆ ಮಾಡಿ ಮರಡಿ ಬಸವಣ್ಣನಿಗೆ ಹಣ್ಣುಕಾಯಿ ತಪ್ಪದೇ ಮಾಡಿಸಲು ಹೇಳಿ ಬಳ್ಳಾರಿಯ ದಾರಿಗೆ ಮುಖಮಾಡುತ್ತಾನೆ. ಇಲ್ಲಿಯವರೆಗೂ ಒಂದು ಸರಳತೆಯಿಂದ ನಡೆದುಕೊಂಡ ಬಂದ ನಾಟಕ ಮರಡಿ ಬಸವಣ್ಣನ ಜಾತ್ರೆಯ ಸಂದರ್ಭದಿಂದ ಹೊಸ ತಿರುವನ್ನು ಪಡೆಯುತ್ತದೆ. ಹೊರಗಿನ ಬಿಸಿಲನ್ನೇ ಕಾಣದ ಗಂಗಾ ಮನೆಯ ಹೊಸ್ತಿಲನ್ನು ದಾಟಿದ್ದು ಇದೇ ಸಂದರ್ಭದಲ್ಲಿ.

ಪರಮ್ಮ ಮತ್ತು ಗಂಗಾ ದೇವಸ್ಥಾನಕ್ಕೆ ಬಂದಾಗ ದೇವಸ್ಥಾನದ ಪೂಜಾರಿ ಗಂಗಾನನ್ನು ವಕ್ರದೃಷ್ಟಿಯಿಂದ ನೋಡಿದ ಪ್ರಸಂಗ ಸಮಾಜದ ಕೆಟ್ಟ ವ್ಯವಸ್ಥೆಗೆ ಸಾಕ್ಷಿ. ಗಂಗಾ ಬಸವಣ್ಣನಿಗೆ ಪ್ರಾರ್ಥಿಸಿ ತನ್ನ ಮೋರೆಯನ್ನು ಹೇಳುವ ತಲ್ಲೀನತೆಯಲ್ಲಿದ್ದಾಗ ಸಂಗ್ಯಾ ಅವಳ ಅಪ್ರತಿಮ ಚೆಲುವಿಗೆ ಮರುಳಾಗಿ ಅವಳ ಕೊರಳಲ್ಲಿದ್ದ ಒಂದು ಸೇರು ಬಂಗಾರದಿಂದ ಈರಪ್ಪ ಪ್ರೀತಿಯಿಂದ ಮಾಡಿಸಿಕೊಟ್ಟ ಸರಗಿಯನ್ನು ಕದಿಯುತ್ತಾನೆ. ಅದರಿಂದ ಗೊಂದಲಕ್ಕೆ ಸಿಲುಕಿದ ಗಂಗಾನ ನಿಸ್ಸಹಾಯಕ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳಲು ಸಂಗ್ಯಾ ತನ್ನ ಸೋದರತ್ತೆಯಾದ ಪರಮ್ಮನ ಸಹಾಯ ಪಡೆದುಕೊಳ್ಳುತ್ತಾನೆ. ಊರಲ್ಲಿ ಕುಂಟಲತನಕ್ಕೆ ಹೆಸರಾದ ಪರಮ್ಮ ಗಂಗೆಯ ಮನಸ್ಸನ್ನು ಚಂಚಲಗೊಳಿಸುವಲ್ಲಿ ಯಶಸ್ವಿಯಾಗುತ್ತಾಳೆ.

ಮನೆತನದ ಮರ್ಯಾದೆಗೆ ಹೆದರಿ ಕಳೆದುಕೊಂಡ ಆಭರಣವನ್ನು ಮರಳಿ ಪಡೆಯಲು ಎಂಥ ಪರಿಸ್ಥಿತಿಗೂ ಸಿದ್ಧಳಾದ ಗಂಗಾ ತನ್ನ ಹೆಣ್ತನದ ತ್ಯಾಗದಿಂದ ಅದನ್ನು ಪಡೆದುಕೊಳ್ಳುತ್ತಾಳೆ. ಅವಳ ನಿಸ್ಸಹಾಯ ಸ್ಥಿತಿಯನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡ ಸಂಗ್ಯಾ ಅವಳ ಜೀವನ ದುರಂತದ ಹಾದಿಯತ್ತ ಸಾಗಲು ಪ್ರತ್ಯಕ್ಷ ಕಾರಣನಾಗುತ್ತಾನೆ. ಈ ಘಟನೆ ಡಾ.ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ ಸಂಪಾದಿಸಿದ ಬಯಲಾಟದಲ್ಲಿದೆ. ಬಳ್ಳಾರಿ ವ್ಯಾಪಾರಕ್ಕೆ ಹೋದ ಈರಪ್ಪನಿಗೆ ದುಸ್ವಪ್ನಗಳು ಮತ್ತು ಅಪಶಕುನಗಳು ಕಾಡಲು

ಪ್ರಾರಂಭಿಸುತ್ತವೆ. ವ್ಯಾಪಾರದಿಂದ ಮರಳಿ ಮನೆ ತಲುಪಿದಾಗ ಗಂಗಾನ ಮನಸ್ಥಿತಿ ಸಂಪೂರ್ಣವಾಗಿ ಬದಲಾಗಿರುವುದನ್ನು ಕಂಡು ದುಸ್ವಪ್ನಗಳು, ಅಪಶಕುನಗಳ ಸೂಚನೆ ನಿಜವೆನಿಸುತ್ತದೆ.

ಪೂರ್ವಾಪರಗಳನ್ನು ವಿಚಾರಿಸದೇ ಮನೆತನದ ಪ್ರತಿಷ್ಠೆಗೋಸ್ಕರ ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಟ್ಟು ಈರಪ್ಪ ತನ್ನ ತಮ್ಮಂದಿರೊಂದಿಗೆ ಸೇರಿ ಗಂಗಿಯನ್ನು ಹೀನಾಯವಾಗಿ ಶಿಕ್ಷಿಸಿ ತವರು ಮನೆಯಾದ ಬೈಲವಾಡಕ್ಕೆ ಕಳುಹಿಸುತ್ತಾರೆ. ಇತ್ತ ಸಂಗ್ಯಾನನ್ನು ಕಡಿದು ಹಾಕಲು ಸಂಚನ್ನು ನಡೆಸುತ್ತಾರೆ. ಇದಕ್ಕೆ ಬಲಿಪಶುವಾದವನೇ ಬಾಳ್ಯಾ, ಬಡವನ ಆಸೆ ದವಡೆಗೆ ಮೂಲ ಎಂಬಂತೆ ಆತನಿಗೆ ಹೊಲ, ಮನೆಯ, ಆಸೆ ತೋರಿಸಿ ಜೀವದ ಬೆದರಿಕೆ ಹಾಕಿ ಸಂಗ್ಯಾನನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಹೆದರಿಸುತ್ತಾರೆ. ಜೀವದ ಭಯಕ್ಕೆ ಬಾಳ್ಯಾ ಉಪಾಯದಿಂದ ಸಂಗ್ಯಾನನ್ನು ಬೈಲವಾಡ ವರ್ತಿಯ ಹಾದಿಯಲ್ಲಿರುವ ಕೆದಗಿ ಬಣಕ್ಕೆ ಕರೆದೊಯ್ಯುತ್ತಾನೆ. ಈರ್ಯಾ, ಬಸವಂತ, ಈರಪಕ್ಷಿ ಸಂಗ್ಯಾನ ಮೇಲೆ ದಾಳಿ ಮಾಡಿ ಕಡಿದು ಹಾಕುತ್ತಾರೆ. ಅಲ್ಲಿಗೆ ಅವರ ಸಿಟ್ಟು ಶಾಂತವಾಗಿ ಬ್ರಿಟೀಷ ಸರ್ಕಾರಕ್ಕೆ ತಾವು ಮಾಡಿದ ತಪ್ಪನ್ನು ಒಪ್ಪಿಕೊಂಡು ಶರಣಾಗುತ್ತಾರೆ. ಬ್ರಿಟೀಷ ಸರ್ಕಾರ ಅಸ್ತಿತ್ವದಲ್ಲಿದ್ದ ಕಾಲದಲ್ಲಿಯೇ ರಾಜಾರೋಷವಾಗಿ ಕೊಲೆ ಮಾಡುವ ಸ್ವಾತಂತ್ರ್ಯವನ್ನು ಹೊಂದಿದ ಸ್ಥಿತಿಯಾಗಿತ್ತು.

ಕೀರ್ತಿನಾಥ ಕುರ್ತಕೋಟಿ ಮತ್ತು ಡಾ. ಚಂದ್ರಶೇಖರ ಕಂಬಾರರ "ಸಂಗ್ಯಾ ಬಾಳ್ಯಾ" ಒಂದು ಗೀತರೂಪಕ ಡಾ. ಚಂದ್ರಶೇಖರ ಕಂಬಾರರ "ಸಂಗ್ಯಾ ಬಾಳ್ಯಾ ಅನ್ನಬೇಕೋ ನಾಡೋಳಗ" ಇದು ಗೀತರೂಪಕದ ಪುನಃಸೃಷ್ಟಿ ಡಾ. ಎಂ.ಎಸ್. ಲಠ್ಠೆಯವರ "ಸಂಗ್ಯಾ ಬಾಳ್ಯಾ" ಡಪ್ಪಿನಾಟದ ಗ್ರಂಥ ಸ್ವರೂಪ ಇದಲ್ಲದೆ ಸುಂದರ ಕೃಷ್ಣ ಅರಸ ನಿರ್ದೇಶನದ ಸಂಗ್ಯಾ ಬಾಳ್ಯಾ ಚಲನಚಿತ್ರ ಇದರ ಮತ್ತೊಂದು ಮಾತೃಕೆ ಇವೆಲ್ಲವುಗಳನ್ನು ಮುಂದಿಟ್ಟುಕೊಂಡು ಸಂಗ್ಯಾ ಬಾಳ್ಯಾ ಸಣ್ಣಾಟದ ಸ್ವರೂಪವನ್ನು ಗುರುತಿಸಬೇಕಾಗುತ್ತದೆ.

ಇವುಗಳಲ್ಲಿ ಕೆಲವು ಪಾಠ ಭಿನ್ನತೆಗಳು ಇದ್ದರೂ ಈ ಸಣ್ಣಾಟದ ಮೂಲ ಆಶಯ ಮಾತ್ರ ಒಂದೇ, ಇಲ್ಲಿಯ ಎಲ್ಲ ದೃಶ್ಯಗಳು ಪ್ರತೀಮಾತ್ಮಕವಾಗಿವೆ. ಜಾತ್ರೆ ಅಲ್ಲಿ ಸರಗಿಯನ್ನು ಕಳೆದುಕೊಳ್ಳುವುದು ಅದನ್ನು ಪಡೆದುಕೊಳ್ಳಲು ತನ್ನ ಬದುಕನ್ನೇ ಕಳೆದುಕೊಳ್ಳುವುದು ಮುಂತಾದ ವಿಚಾರಗಳನ್ನು ಚಿಂತನೆಗೊಡ್ಡಿದಾಗ ಒಂದು ಅದ್ಭುತ ಪ್ರತಿಮಾಲೋಕ ನಮ್ಮ ಮುಂದೆ ತೆರೆದುಕೊಳ್ಳುತ್ತದೆ.

ಕರ್ತೃ ಜಾತ್ರೆಯನ್ನು ಯೌವ್ವನದ ಹಂತಕ್ಕೆ ಹೋಲಿಸಿದ್ದಾನೆ. ಯೌವ್ವನ ಎಂದರೆ ಬದುಕಿನ ಪ್ರಜ್ಞೆಯನ್ನು ಕಳೆದುಕೊಳ್ಳುವ ಘಟ್ಟ. ಸ್ತ್ರೀಗೆ ಶೀಲವೇ ಆಭರಣ. ಸರಗಿ ಕಳೆದುಕೊಳ್ಳುವುದನ್ನು ಶೀಲವನ್ನು ಕಳೆದುಕೊಳ್ಳುವುದೆಂದು. ಮನುಷ್ಯ ತನ್ನ ದೌರ್ಬಲ್ಯಕ್ಕೆ ತುತ್ತಾಗುವುದು. ಜಾತ್ರೆಯಲ್ಲಿ ಸರಗಿ ಕಳೆದುಕೊಳ್ಳವುದೆಂದರೆ ಯೌವ್ವನದ ಹೊಸ್ತಿಲಲ್ಲಿದ್ದಾಗ ಮನಸ್ಸಿನ ದೌರ್ಬಲ್ಯಕ್ಕೆ ಒಳಗಾಗಿ ತನ್ನ ಶೀಲವನ್ನು ಕಳೆದುಕೊಳ್ಳುವ ಸನ್ನಿವೇಶಕ್ಕೆ ಈ ಸಣ್ಣಾಟದ ವಸ್ತುವನ್ನು ರೂಪಕಗೊಳಿಸಿರಬಹುದು. ಯೌವ್ವನದ ಜಾತ್ರೆಯಲ್ಲಿ ಮನುಷ್ಯನ ದೌರ್ಬಲ್ಯ ಪ್ರವಾಹದಲ್ಲಿ ಕೊಚ್ಚಿಹೋಗುವುದು. ಈ ಬದುಕಿನ ಮೂಲ ಅಮೂರ್ತ ತತ್ವಗಳಿಗೆ ಮೂರ್ತರೂಪ ಕೊಟ್ಟು ನಾಟ್ಯೀಕರಿಸಿದುದು ವಿಶೇಷವೆನಿಸುತ್ತದೆ.

ಮೂಲತಃ ಇದು ಬಹಿರಂಗದಲ್ಲಿ ಗೆಳೆಯರಿಬ್ಬರ ಸ್ನೇಹದ ಕಥೆಯಾದರು, ಅಂತರಂಗದಲ್ಲಿ ಒಂದು ಹೆಣ್ಣಿನ ಅವೈಚಾರಿಕ, ಹಾದರದ ದುರಂತವನ್ನು ದೃಶ್ಯೀಕರಿಸುವ ಪುರುಷ ನೆಲೆಯ ಸಂಯೋಜನೆಯಾಗಿದೆ.

೧೮೮೪ರಿಂದ ೯೦ರ ಅವಧಿಯಲ್ಲಿ ಫ್ಲೀಟರು ಸಂಗ್ರಹಿಸಿದ ಐದು ಲಾವಣಿಗಳಲ್ಲಿ "ಸಂಗ್ಯಾನ ಅಪರಾಧ ಮತ್ತು ಸಾವು" ಲಾವಣಿ ಇದ್ದು ಅದನ್ನು ಅಪ್ಪು ಎಂಬ ಲಾವಣಿಕಾರ ರಚಿಸಿದ್ದು ದೇಮಣ್ಣನೆಂಬ ಹಾಡುಗಾರ ತನ್ನ ಡಪ್ಪಿನ ಮೇಲೆ ಹಾಡಿದುದಾಗಿ ತಿಳಿದು ಬರುತ್ತದೆ. ಆದರೆ ಆ ಲಾವಣಿಯ ವಸ್ತು,

ಸಂಗ್ಯಾ ಬಾಳ್ಯಾ ಸಣ್ಣಾಟದ ವಸ್ತುವಿಗಿಂತ ಭಿನ್ನವಾದುದು. ಆ ವಸ್ತುವನ್ನು ಈ ವಸ್ತುವಿನೊಂದಿಗೆ ತಳಕು ಹಾಕಲಾಗದು.

## ಸಣ್ಣಾಟದ ಆಶಯ :

ಸಂಗ್ಯಾ ಬಾಳ್ಯಾ ಒಂದು ಹೆಣ್ಣಿನ ನಡತೆ, ಅನೈತಿಕತೆಗೆ ಒತ್ತುಕೊಟ್ಟು ರಚಿಸಿದ ನಾಟಕವಾಗಿದೆ. ಈ ನಾಟಕದಲ್ಲಿರುವ ಗಂಗಿಯ ಪಾತ್ರ ಸೃಷ್ಟಿಯನ್ನು ನೋಡಿದಾಗ ತಟ್ಟನೆ ನೆನಪಿಗೆ ಬರುವುದು ಕನ್ನಡ ಸಾಹಿತ್ಯದಲ್ಲಿ ತನ್ನತನವನ್ನು ಕಾಪಾಡಿಕೊಂಡು ಬಂದಿರುವ ಜನ್ನನ ಯಶೋಧರ ಚರಿತೆಯ ಅಮೃತಮತಿಯ ಪಾತ್ರ.

ಸಂಗ್ಯಾ ಬಾಳ್ಯಾ ಬಯಲಾಟ ಯಾವುದೇ ಚರ್ಚೆಗೂ ಒಳಪಡದೇ ಒಂದು ಸಾಮಾಜಿಕ ಮನರಂಜನಾ ನಾಟಕದಂತೆ ಪ್ರದರ್ಶಿಸಲ್ಪಡುತ್ತಿತ್ತು. ಆದರೆ ಸ್ತ್ರೀವಾದಿ ವಿಮರ್ಶೆ ಬಂದ ಮೇಲೆ ಮತ್ತೇ ಚರ್ಚೆಗೆ ಒಳಪಟ್ಟಿತು. ಗಂಗಾನ ತೇಜೋವಧೆ ಅತೀಯಾಗಿ ಮಾಡಿದ್ದರಿಂದ ಅದು ತರವಲ್ಲ ಅನ್ನುವ ವಿಮರ್ಶೆಗಳು ಬಂದವು. ಯಶೋಧರ ಚರಿತೆಯ ಅಮೃತಮತಿಯ ಪ್ರಸಂಗದಲ್ಲಿ ಅವಳದೇ ತಪ್ಪು ಅನ್ನುವ ಅಭಿಪ್ರಾಯ ಮೂಡಿದವು. ಆದರೆ ಇತ್ತೀಚಿನ ವಿಮರ್ಶೆಗಳಂತೆ ಎರಡರಲ್ಲೂ ತಪ್ಪಿಲ್ಲ. ಅದು ಮನುಷ್ಯ ಸಹಜ ದೌರ್ಬಲ್ಯ ವೆಂದು ಒಪ್ಪಿತಗೊಂಡಿವೆ.

# ಅಧ್ಯಾಯ – ೩

# ಪಠ್ಯ–ಪಠ್ಯೇತರ ಚರ್ಚೆಗಳು

# ಅಧ್ಯಾಯ – ೩

## ಪಠ್ಯ – ಪಠ್ಯೇತರ ಚರ್ಚೆಗಳು

ಸಂಗ್ಯಾಬಾಳ್ಯಾ ಸಣ್ಣಾಟದ ಪಠ್ಯಗಳಲ್ಲಿ ಏಕರೂಪತೆ ಇಲ್ಲ. ಈಗ ಸಧ್ಯ ನಮ್ಮ ಮುಂದೆ ನಾಲ್ಕು ಪಠ್ಯಗಳಿವೆ. ಈ ನಾಲ್ಕು ಪಠ್ಯಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಬಹುದು. ಡಾ. ಚಂದ್ರಶೇಖರ ಕಂಬಾರ ಹಾಗೂ ಕೀರ್ತಿನಾಥ ಕುರ್ತಕೋಟಿಯವರ 'ಸಂಗ್ಯಾಬಾಳ್ಯಾ' ಕಂಬಾರರ 'ಸಂಗ್ಯಾಬಾಳ್ಯಾ ಅನ್ನಬೇಕೋ ನಾಡೋಳಗ' ಹಾಗೂ ಡಾ. ಮಲ್ಲಿಕಾರ್ಜುನ ಲಠ್ಠೆಯವರ 'ಸಂಗ್ಯಾಬಾಳ್ಯಾ ಡಪ್ಪಿನಾಟ' ಒಂದು ಗುಂಪಿಗೆ ಸೇರಿದರೆ, ಡಾ. ಎಂ. ಎಂ. ಕಲಬುರ್ಗಿಯವರು ರಚಿಸಿರುವ 'ಖರೇ ಖರೇ ಸಂಗ್ಯಾಬಾಳ್ಯಾ' ನಾಟಕ ವಸ್ತುವಿನ ದೃಷ್ಟಿಯಿಂದ ಮತ್ತೊಂದು ಗುಂಪಿಗೆ ಸೇರುತ್ತದೆ.

ಚಂದ್ರಶೇಖರ ಕಂಬಾರ ಹಾಗೂ ಕೀರ್ತಿನಾಥ ಕುರ್ತಕೋಟಿ ಸಂಪಾದಿಸಿದ 'ಸಂಗ್ಯಾಬಾಳ್ಯಾ' ಜಾನಪದ ಗೀತರೂಪಕ ಎಂದು ಎಲ್ಲರಿಗೂ ಗೊತ್ತು. ಇದುವೇ ಈ ಸಣ್ಣಾಟದ ಮೊದಲ ಮುದ್ರಿತ ಪಠ್ಯ. ಇದನ್ನು ೧೯೬೬ರಲ್ಲಿ ಮನೋಹರ ಗ್ರಂಥಮಾಲೆ ಮೊದಲು ಮುದ್ರಿಸಿತು. ಇದಕ್ಕೆ ಕೀರ್ತಿನಾಥ ಕುರ್ತಕೋಟಿಯವರು ಪ್ರಸ್ತಾವಣೆ ಬರೆದಿದ್ದರೇ ಅದಕ್ಕೂ ಆರಂಭದಲ್ಲಿ ಮಜಕೂರ ಎಂಬ ಶೀರ್ಷಿಕೆಯಡಿಯಲ್ಲಿ ಚಂದ್ರಶೇಖರ ಕಂಬಾರರವರು ಅದರ ಕತ್ತೃ ವಿಚಾರದ ಕುರಿತು ಪ್ರಸ್ತಾಪಿಸಿದ್ದಾರೆ.

ಕಂಬಾರರು ತಾವು ಕೈಗೊಂಡ ಕ್ಷೇತ್ರಕಾರ್ಯದ ಅಭ್ಯಾಸದಿಂದ ಬೈಲವಾಡದ ಪತ್ತಾರ ಮಾಸ್ತರ ಈ ಕೃತಿಯ ಕತ್ತೃ ಆಗಿರಬಹುದೆಂದು ಅಭಿಪ್ರಾಯ ಪಟ್ಟಿರುವರು. ಅಲ್ಲಿಯ ಪ್ರತಿಯೊಂದು ಹಾಡಿನ ಕೊನೆಯಲ್ಲಿ ಗದಗಿನ ಶಾಹಪೂರದ ಬಸವಣ್ಣ ದೇವರ ಉಲ್ಲೇಖ ಬರುವುದರಿಂದ ಸಂಗ್ಯಾ ಬಾಳ್ಯಾ ಸಣ್ಣಾಟದ ಕರ್ತೃ ಗದುಗಿನವನಾಗಿರಬೇಕೆಂಬ ಊಹೆ ಮೂಡಿತು. ಆದರೆ ಅವರು

ಜನರ ಅಭಿಪ್ರಾಯಗಳನ್ನು ಆಧರಿಸಿ ಇದನ್ನು ಬರೆದವನು "ಬೈಲವಾಡದ ಪತ್ತಾರ ಆತ ಕನ್ನಡ ಪ್ರಾಥಮಿಕ ಶಾಲೆಯ ಶಿಕ್ಷಕನಾಗಿರಬಹುದೆಂಬ ಊಹೆಯನ್ನು ಹರಿಬಿಟ್ಟರು." ಆತ ಮೂಲತಃ ಗದುಗಿನವನಾಗಿದ್ದು ಅಲ್ಲಿಯ ಶಹಪೂರ ಓಣಿಯ ಶಂಕರಲಿಂಗ ಬಸವಣ್ಣನ ಭಕ್ತ. ಅನಂತರ ಆತ ಬೈಲಹೊಂಗಲದ ಬಳಿಯ ಬೈಲವಾಡಕ್ಕೆ ಬಂದು ನೆಲೆಸಿರಬಹುದೆಂದು ಹೇಳಿದರು. ಇದರಿಂದ ಸಂಗ್ಯಾ ಬಾಳ್ಯಾ ಪಠ್ಯ ಪಠ್ಯೇತರ ಚರ್ಚೆ ಆರಂಭಗೊಂಡಿತು.

ಈ ಮೊದಲು ಈ ಸಣ್ಣಾಟ ಉತ್ತರ ಕರ್ನಾಟಕದಾದ್ಯಂತ ಪ್ರಸಿದ್ಧಿ ಪಡೆದು ಕೆಲವು ಊರುಗಳಲ್ಲಿ ಒಂದೇ ವರ್ಷದಲ್ಲಿ ಹದಿನೈದರಿಂದ ಇಪ್ಪತ್ತರಷ್ಟು ಸ್ಥಳ ಪ್ರಯೋಗಗೊಳ್ಳುತ್ತಿತ್ತು. ಕಂಬಾರರು ಹೇಳುವಂತೆ ೧೯೨೦ ರಿಂದ ೧೯೫೦ ರವರೆಗಿನ ೩೦ ವರ್ಷಗಳ ಆ ಅವಧಿ ಸಂಗ್ಯಾ ಬಾಳ್ಯಾ ಸಣ್ಣಾಟದ ವಸಂತಕಾಲ. ಅದರ ವಸ್ತು, ಪಾತ್ರಗಳು, ಆಶಯ, ಹಾಡುಗಳ ವೈವಿಧ್ಯತೆ. ಮೊದಲಾದ ಅಂಶಗಳು ಜಾನಪದ ವಿದ್ವಾಂಸರ ಗಮನ ಸೆಳೆದವು. ಹೆಚ್ಚಿನ ಆಸಕ್ತಿ ತಳೆದು ಆ ದೆಸೆಯಲ್ಲಿ ಅಧ್ಯಯನವನ್ನು ಆರಂಭಿಸಿದರು.

ಡಾ. ಚಂದ್ರಶೇಖರ ಕಂಬಾರರ 'ಸಂಗ್ಯಾ ಬಾಳ್ಯಾ ಅನ್ನಬೇಕೋ ನಾಡೊಳಗ' ಈ ಸಣ್ಣಾಟದ ದ್ವಿತೀಯ ಮುದ್ರಿತ ಪಠ್ಯ. ಇದನ್ನು ಮೈಸೂರಿನ ನೆಲಮನೆ ಪ್ರಕಾಶನ ೧೯೭೫ರಲ್ಲಿ ಪ್ರಕಟಿಸಿದೆ. ಇದು ಕಂಬಾರರು ಹೇಳುವಂತೆ 'ಮೂಲಕೃತಿಯ ಬಯಲಾಟದ ಅಳವಡಿಕೆ'. ಇಲ್ಲಿ ಅವರು ಮೂಲ ಕೃತಿಯ ಪ್ರತಿಯೊಂದು ಅಂಶವನ್ನು ಪುನಃ ಸೃಷ್ಟಿಸಿರುವರು. ಮೂಲ ಕಥೆ ಹಾಗೂ ಪಾತ್ರಗಳಲ್ಲಿ ಬದಲಾವಣೆ ಮಾಡಿ ಈ ವಸ್ತುವಿನ ಮೂಲಕ ತಾವು ಹೇಳಬೇಕಾದದ್ದನ್ನು ಹೇಳಿಕೊಂಡಿರುವುದಾಗಿ ಪಠ್ಯದ ಆರಂಭದಲ್ಲಿಯೇ ಸ್ಪಷ್ಟಪಡಿಸಿದ್ದಾರೆ. ಒಂದರ್ಥದಲ್ಲಿ ಈ ಪಠ್ಯ ಕಂಬಾರರ ಸೃಷ್ಟಿಯೇ ವಸ್ತು ಮಾತ್ರ ಸಣ್ಣಾಟದ್ದು. ಮೂಲ ಗೀತರೂಪಕ ಇಲ್ಲಿ ಸಂಗೀತ ಪ್ರಧಾನವಾದ ದೃಶ್ಯರೂಪಕವಾಗಿ ಮಾರ್ಪಾಟುಗೊಂಡಿದೆ. ಮೂಲ ಪದ್ಯಗಳ ಅರ್ಥವನ್ನು

ಗದ್ಯದೊಂದಿಗೆ ಸಮೀಕರಿಸಿದ್ದು ಈ ಪಠ್ಯದ ಮತ್ತೊಂದು ವಿಶೇಷ. ಸಂಗ್ಯಾಬಾಳ್ಯಾ ಸಣ್ಣಾಟದ ಪ್ರದರ್ಶನ ಇದೇ ರೀತಿ ಇರುತ್ತಿತ್ತು. ಪ್ರತಿಯೊಂದು ತಂಡದವರು ಅಲ್ಲಿಯ ಹಾಡುಗಳನ್ನು ಮುಂದಿಟ್ಟುಕೊಂಡು ತಮಗೆ ತೋಚಿದ ರೀತಿಯಲ್ಲಿ ಅದರ ಆಶಯವನ್ನು ತಮ್ಮ ಗದ್ಯ ಸಂಭಾಷಣೆಗೆ ಪುನಃ ಸೃಷ್ಟಿಸಿಕೊಳ್ಳುತ್ತಿದ್ದರು. ಅಂತಹ ಪುನಃ ಸೃಷ್ಟಿಗಳಲ್ಲಿ ಕಂಬಾರರ 'ಸಂಗ್ಯಾಬಾಳ್ಯಾ ಅನ್ನಬೇಕೋ ನಾಡೊಳಗ' ಒಂದು. ಈಗಲೂ ಹುಡುಕಿದರೆ ಇಂಥ ಹತ್ತೆಂಟು ಪಠ್ಯಗಳು ಸಿಗುತ್ತವೆ.

ಡಾ. ಮಲ್ಲಿಕಾರ್ಜುನ ಲಠ್ಠೆಯವರು ಸಂಪಾದಿಸಿದ 'ಸಂಗ್ಯಾಬಾಳ್ಯಾ ಡಪ್ಪಿನಾಟ' ಪ್ರಸ್ತುತ ಸಣ್ಣಾಟದ ಇನ್ನೇ ಮುದ್ರಿತ ಪಠ್ಯ. ಇದು ಕಲಬುರ್ಗಿಯ ಗ್ರಿನೋಬಲ್ಸ್ ಪ್ರಕಾಶನದ ಪ್ರಕಟನೆ. ಪ್ರಕಟಗೊಂಡ ವರ್ಷ ೧೯೯೧. ಜಾನಪದ ರಂಗಭೂಮಿಯ ಕುರಿತು ಸುದೀರ್ಘ ಪ್ರಸ್ತಾವಣೆಯನ್ನು ಒಳಗೊಂಡಿದೆ. ಸಣ್ಣಾಟದಲ್ಲಿ ಎರಡು ಪ್ರಕಾರಗಳನ್ನು ಗುರುತಿಸಿರುವ ಲಠ್ಠೆಯವರು ಒಂದು ಡಪ್ಪಿನೊಂದಿಗೆ ನಡೆಯುವ ಆಟ, ಮತ್ತೊಂದು ತಬಲಾ, ಪೇಟಿ, ವಿಶಿಷ್ಟ ಹಾಡುಗಾರಿಕೆಯಿಂದ ಕೂಡಿದ ಆಟ ಎಂದಿದ್ದಾರೆ. ಸಂಗ್ಯಾಬಾಳ್ಯಾ ಡಪ್ಪಿನಾಟ ಇಲ್ಲಿ ಡಪ್ಪು ಪ್ರಮುಖ ವಾದ್ಯ. ಆದ್ದರಿಂದ ಅವರು ಡಪ್ಪಿನಾಟ ಎಂಬ ಶೀರ್ಷಿಕೆಯಡಿಯಲ್ಲಿಯೇ ಪಠ್ಯವನ್ನು ಸಂಕಲಿಸಿದ್ದಾರೆ. ಪಠ್ಯದ ಆಶಯ, ವಸ್ತು, ಪಾತ್ರಗಳು, ಹಾಡುಗಾರಿಕೆ ಕುರಿತು ಪ್ರತ್ಯೇಕವಾಗಿ ಚರ್ಚಿಸುವುದರೊಂದಿಗೆ ಕೃತಿಯ ಕರ್ತೃವಿನ ಕುರಿತು ಕೆಲವು ಮಹತ್ವದ ವಿವರಗಳನ್ನು ದಾಖಲಿಸಿರುವರು. ಅವರು ಹೇಳಿರುವ ವಿಚಾರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

"ಸಂಗ್ಯಾಬಾಳ್ಯಾ" ಕೃತಿಯನ್ನು ರಚಿಸಿದವನು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬೈಲವಾಡ ಗ್ರಾಮದ ರಾಯಪ್ಪ. ಈತನ ಮೂಲ ಊರು ಗದುಗಿನ ಶಾಪೂರ ಪೇಟೆ. ತನ್ನ ಸಂಬಂಧಿಕರಿಗೆ ವಾರಸುದಾರರು ಇಲ್ಲದ್ದರಿಂದ ತಾಯಿಯ ತವರು ಮನೆಯಾದ ಈ ಬೈಲವಾಡ ಗ್ರಾಮದಲ್ಲಿ

ಬಂದು ವಾಸ ಮಾಡಿದವನಾಗಿದ್ದಾನೆ. ಈತನ ಮನೆತನದ ಉದ್ಯೋಗ ಪತ್ತಾರಿಕೆ. ರಾಯಪ್ಪ ಹುಟ್ಟು ಕಲಾಕಾರ. ಬೆಳ್ಳಿ ಬಂಗಾರದ ಕೆಲಸದಲ್ಲಿ ಪಳಗಿದವನಾಗಿದ್ದು ಹುಟ್ಟು ಪ್ರತಿಭಾವಂತ ಆಗಿದ್ದನು. ೪-೫ ನೇಯ ಈಯತ್ತೆವರೆಗೆ ಓದಿದ್ದ ಈತನು ಸ್ವತಃ ಬಯಲಾಟದಲ್ಲಿ ಪಾತ್ರ ಹಾಕುತ್ತಿದ್ದನು. ಹಾಗೆಯೇ ಸ್ವತಃ ಪದಗಳನ್ನು ರಚಿಸಿ ಸಣ್ಣಾಟಗಳನ್ನು ಬರೆದಿದ್ದಾನೆ. ಹುಟ್ಟು ಹಾಡುಗಾರನಾಗಿದ್ದ ರಾಯಪ್ಪನು ಪದವಿಟ್ಟರೆ ತೀರಿತು ಅದು ಜನಪದ ಗೀತವಾಗಿ ಕಂಗೊಳಿಸುತ್ತಿತ್ತು. ಆಟ ಕಲಿಸುತ್ತಿದ್ದುದರಿಂದ ರಾಯಪ್ಪನಿಗೆ ಮಾಸ್ತರ ಎಂದು ಕರೆಯುತ್ತಿದ್ದರು."[೧]

ಆತ ಇದಲ್ಲದೇ ಮಾಲಿಂಗಶೆಟ್ಟಿ ಮತ್ತು ಪುಂಡಲೀಕ ಎಂಬ ಮತ್ತೇರಡು ಸಣ್ಣಾಟಗಳು ಹಾಗೂ ನೂರಾರು ಲಾವಣಿ, ಭಜನೆ, ಜೋಗುಳ ಪದ ಮುಂತಾದವುಗಳನ್ನು ರಚಿಸಿದ್ದಾಗಿ ಹೇಳಿ ಆ ಹಸ್ತಪ್ರತಿಗಳನ್ನು ತಾವು ನೋಡಿರುವುದಾಗಿ ಲಠ್ಠೆ ಹೇಳಿರುವರು. ಡಾ. ಲಠ್ಠೆಯವರು ಕವಿಯ ಕುರಿತು ನೀಡಿರುವ ಈ ವಿವರಗಳು ಪರ್‍ಯೇತರ ಚರ್ಚೆಗೆ ಗ್ರಾಸವಾದವು. "ಕವಿ ರಾಯಪ್ಪ ಬದುಕಿದ್ದ ಕಾಲ ಇತ್ತೀಚಿನದು ಕ್ರಿ.ಶ.೧೮೬೦ರಿಂದ ೧೯೫೦ರ ಅವಧಿಯಲ್ಲಿ ಬಾಳಿರಬೇಕು. ತಾನು ಬದುಕಿದ್ದಾಗ ಬೈಲವಾಡದ 'ಗಂಗಾ'ನ ಕಥೆಯನ್ನೆಲ್ಲ ಅವರಿವರ ಬಾಯಿಂದ ಕೇಳಿ ಅವಳ ಬದುಕಿನ ಕೆಲ ಘಟನೆಗಳನ್ನು ಆಯ್ದುಕೊಂಡು ಈ ರೂಪಕ ತಯಾರಿಸಿದ್ದಾನೆ. ಗಂಗಾ ಲಗಳೇರ ವೀರಭದ್ರನ ಹೆಂಡತಿಯಾಗಿದ್ದಳು. ಯಾವದೋ ಕಾರಣದಿಂದ ಆ ಲಗಳೇರ ಮನೆತನದ ಮೇಲೆ ರಾಯಪ್ಪನದು ಸಿಟ್ಟು, ಅದರ ಸೇಡು ತೀರಿಸಿಕೊಳ್ಳಲು ಈ ಸಂಗ್ಯಾ ಬಾಳ್ಯಾ ಕಥೆಯನ್ನು ರಚಿಸಿದನೆಂದೂ, ಇದು ಸತ್ಯದಿಂದ ಕೂಡಿದ ಘಟನೆಯೆಂದೂ ಜನವಂದತಿ."[೨]

---

೧. ಡಾ.ಮಲ್ಲಿಕಾರ್ಜುನ ಶಿ. ಲಠ್ಠೆ(ತೀ) ಸಂಗ್ಯಾ ಬಾಳ್ಯಾ ಡಪ್ಪಿನಾಟ ಪುಟ - ೧೩
೨. ಡಾ.ಮಲ್ಲಿಕಾರ್ಜುನ ಶಿ. ಲಠ್ಠೆ(ತೀ) ಸಂಗ್ಯಾ ಬಾಳ್ಯಾ ಡಪ್ಪಿನಾಟ ಪುಟ - ೧೪

ಲಕ್ಕೆಯವರು ನಾಟಕ ಪ್ರದರ್ಶನ ವಿಚಾರವಾಗಿ ಹೇಳುವ ಮಾತುಗಳು ಕೂಡಾ ಉಲ್ಲೇಖನೀಯ "ಸಂಗ್ಯಾ ಬಾಳ್ಯಾ ಆಟವನ್ನು ಆಡದಂತೆ ಲಗಳೇರ ಮನೆತನದ ಇರಪಕ್ಷಿ, ಬಸವಂತರು ಸರಕಾರದಿಂದ ಆರ್ಡರ್ ತಂದಿದ್ದರಂತೆ. ಅದೂ ಅಲ್ಲದೆ ಸಂಗ್ಯಾ ಈರ್ಯಾನ ಪಾತ್ರ ಹಾಕುವರಲ್ಲಿ ಸಹಜವಾಗಿಯೇ ಈರ್ಷೆ ಬೆಳೆದು ನಿಜಕ್ಕೂ ಹಂದರದಲ್ಲಿಯೇ ಕೊಲೆ ಆಗುತ್ತಿದ್ದವಂತೆ. ಆದುದರಿಂದ ಸರಕಾರ ಇದನ್ನು ಆಡದಂತೆ ಬಂದು ಮಾಡಿದ್ದರಂತೆ. ಕೆಲ ವರುಷಗಳಾದ ತರುವಾಯ ಈ ಆಟ ಇಂದು ಊರೂರಿಗೆ, ಬೀದಿ ಬೀದಿಗೂ ಪ್ರದರ್ಶಿತ ವಾಗುತ್ತಿದೆ." [೩]

ಬಹುಶಃ ಈ ಎಲ್ಲ ವಿಚಾರಗಳು ಪಠ್ಯ ಮತ್ತು ಪಠ್ಯೇತರ ಚರ್ಚೆಗೆ ಅವಕಾಶವನ್ನು ಒದಗಿಸಿದವೆಂದು ಖಚಿತವಾಗಿ ಹೇಳಬಹುದು.

ಮೇಲಿನ ಮೂರು ಪಠ್ಯಗಳು ಹುಟ್ಟು ಹಾಕಿದ ಪಠ್ಯ ಪಠ್ಯೇತರ ಚರ್ಚೆಗಳನ್ನು ಸ್ಥೂಲವಾಗಿ ಹೀಗೆ ವರ್ಗೀಕರಿಸಬಹುದಾಗಿದೆ.

## ೧. ಪಠ್ಯ ಚರ್ಚೆ :

I. ವಸ್ತು ವಿಚಾರ

II. ಪಾತ್ರಗಳ ವಿಚಾರ ಅಥವಾ ಚರ್ಚೆ

III. ವಸ್ತುವಿನ ಚಾರಿತ್ರಿಕ ನಿಷ್ಕರ್ಷೆ

---

೩. ಡಾ. ಮಲ್ಲಿಕಾರ್ಜುನ ಶಿ. ಲಕ್ಕೆ(ತೀ) ಸಂಗ್ಯಾ ಬಾಳ್ಯಾ ಡಪ್ಪಿನಾಟ ಪುಟ – ೧೫

## ೩. ಪಠ್ಯೇತರ ಚರ್ಚೆಗಳು :

I. ಕರ್ತೃ ವಿಚಾರ

II. ಕರ್ತೃವಿಗೆ ಸಂಬಂಧಿಸಿದ ಚಾರಿತ್ರಿಕ ಹಿನ್ನೆಲೆ

III. ಬಯಲಾಟ ರಚನೆಯ ಹಿಂದಿನ ಉದ್ದೀಷ್ಟ

IV. ಬಯಲಾಟದ ಪರಿಣಾಮಗಳು

V. ಇತರ ವಿಚಾರಗಳು

ನಾಲ್ಕು ಪಠ್ಯಗಳಲ್ಲಿ ವಸ್ತು ದೃಷ್ಟಿಯಿಂದ ಮತ್ತೊಂದು ಗುಂಪಿಗೆ ಸೇರಿದ ಡಾ. ಎಂ.ಎಂ.ಕಲಬುರ್ಗಿಯವರ 'ಖರೇ-ಖರೇ ಸಂಗ್ಯಾ ಬಾಳ್ಯಾ' ಬಳ್ಳಾರಿಯ ತೀಹಿಯಾ ಪ್ರಕಾಶನ ೨೦೦೫ರಲ್ಲಿ ಪ್ರಕಟಿಸಿತು.

ಜಾನಪದ ರಂಗಕ್ಕೆ ಸೇರಿದ ಮೌಖಿಕ ಪರಂಪರೆಯಿಂದ ಬಂದ ಸಂಗ್ಯಾ ಬಾಳ್ಯಾ ಕಾಲಕಾಲಕ್ಕೆ ಅನೇಕ ಆಯಾಮಗಳನ್ನು ಪಡೆಯುತ್ತ ಕನ್ನಡ ಜನಪದರ ಮನಸ್ಸಿನ ಮೇಲೆ ರಾರಾಜಿಸಿದೆ. ಡಾ. ಕಲಬುರ್ಗಿಯವರ 'ಖರೇ ಖರೇ ಸಂಗ್ಯಾಬಾಳ್ಯಾ' ಸತ್ಯದ ಬೀಡು ಹಿಡಿದು ಹೊರಟ ಸಂಶೋಧಕರ ರಂಗಕೃತಿಯಾಗಿದೆ. ನೂರೈವತ್ತು ವರ್ಷಗಳ ಹಿಂದೆ ನಡೆದಿದೆ ಎನ್ನಲಾದ ಘಟನೆಯ ಮೇಲೆ ಹೆಣೆದ ಇಲ್ಲಿಯವರೆಗಿನ ಸಣ್ಣಾಟ, ನಾಟಕಗಳ ಮುಖಾ ಮುಖಿಯೆಂಬಂತೆ ಈ ಕೃತಿ ರಚನೆಯಾಗಿದೆ. ಡಾ. ಕಲಬುರ್ಗಿಯವರು ಮೂಲತಃ ಸಂಶೋಧಕರಾಗಿರುವುದರಿಂದ ಅವರ ಹೆಚ್ಚಿನ ಒಲವು ಸತ್ಯದ ಕಡೆಗೇ. ಗಂಗಿಯ ವಿಷಯದಲ್ಲಿ ಆದಂತ ಅಪಚಾರ, ಅನ್ಯಾಯ, ವಿರೋಧಿಸಿ ಆ ಪಾತ್ರಕ್ಕೆ ನ್ಯಾಯವನ್ನು ದೊರಕಿಸಿಕೊಟ್ಟ ಕೃತಿಯಾಗಿ 'ಖರೇ ಖರೇ ಸಂಗ್ಯಾಬಾಳ್ಯಾ' ರಚಿತಗೊಂಡಿದೆ.

ಸಂಗ್ಯಾಬಾಳ್ಯಾ ನಿಜವಾದ ಕಥೆಯಲ್ಲ. ಗಂಗಿಯನ್ನು ಮೋಹಿಸಿ ವಿಫಲನಾದ ಪತ್ತಾರ ಮಾಸ್ತರನ ವಿಕೃತ ಮನಸ್ಸು ಸಂಗ್ಯಾನೊಂದಿಗೆ ಅವಳ ಸಂಬಂಧ ಕಲ್ಪಿಸಿ, ನಿಜವೆನ್ನುವಂತೆ ತಂತ್ರಗಳನ್ನು ಸೃಷ್ಟಿಸಿ ಅವಳ ಮಾನಹಾನಿ ಮಾಡಿದ್ದಾನೆ ಎನ್ನುವ ಅಭಿಪ್ರಾಯವನ್ನು ಡಾ.ಕಲಬುರ್ಗಿಯವರು ಮುಂದಿಟ್ಟಿದ್ದಾರೆ.

ಈಗಾಗಲೇ ಪ್ರಚಾರದಲ್ಲಿರುವ ಪತ್ತಾರ ಮಾಸ್ತರ ಬರೆದ ಸಂಗ್ಯಾಬಾಳ್ಯಾದ ಕೆಲವು ಪದ್ಯಗಳನ್ನು ಎರವಲು ಪಡೆದು ತಮ್ಮ ಕೃತಿಯಲ್ಲಿ ಅಳವಡಿಸಿಕೊಂಡು ಸಂಶೋಧನಾತ್ಮಕ, ಸೃಜನಾತ್ಮಕವಾದ ಕೃತಿಯನ್ನು ಹೆಣೆದಿದ್ದಾರೆ. 'ಖರೇ ಖರೇ ಸಂಗ್ಯಾಬಾಳ್ಯಾ' ನಾಟಕ ೧೯ ದೃಶ್ಯಗಳನ್ನು ಒಳಗೊಂಡಿದೆ. ಇದರ ಪಾತ್ರಗಳ ವಿಶ್ಲೇಷಣೆ ಭಿನ್ನವಾಗಿದೆ. ಸಂಗ್ಯಾ ಲಗಳೇರ ಮನೆತನಕ್ಕೆ ಮೊದಲಿನಿಂದಲೂ ಒಳ್ಳೆಯ ನೆಂಟಸ್ಥಿಕೆಯನ್ನು ಬೆಳೆಸಿಕೊಂಡು ಬಂದಂತವನು. ಈ ನೆಂಟಸ್ಥಿಕೆಯನ್ನು ಪತ್ತಾರ ಮಾಸ್ತರ ತನ್ನ ತಂತ್ರದಿಂದ ವೈರತ್ವಕ್ಕೆ ತಿರುಗುವಂತೆ ಬಲೆ ಹೆಣೆದು ತನ್ನ ಸೇಡನ್ನು ತೀರಿಸಿಕೊಂಡಿದ್ದಾನೆ.

ಮುದುಕಪ್ಪನಿಂದ ನಿಜವಾದ ಕಥೆ ಬಯಲಿಗೆ ಬಂದಿದೆ. ಮುದಕಪ್ಪನ ಮೂಲಕ ಕರ್ತೃ ಸತ್ಯವಾದ ವಿಚಾರವನ್ನು ತಿಳಿಸಿದ್ದಾರೆ. ಹೀಗೆ ಇಲ್ಲಿ ಬರುವ ಪಾತ್ರಗಳು, ಶೈಲಿ, ವಸ್ತು, ಆಶಯ ಸಂಪೂರ್ಣವಾಗಿ ಭಿನ್ನತೆಯನ್ನು ಸೃಷ್ಟಿಸಿದ ಮತ್ತು ವಿವಾದಕ್ಕೆ, ವಿಮರ್ಶಾ ಲೋಕಕ್ಕೆ ಸವಾಲನ್ನೊಡ್ಡಿದ ಕೃತಿಯಾಗಿದೆ. ಇದು ಒಂದು ಸಂಶೋಧನಾತ್ಮಕ ಕೃತಿಯಾಗಿರುವುದರಿಂದ ಸತ್ಯಕ್ಕೆ ಸಮೀಪವಾದ ಕೃತಿಯೆಂದು ಉಲ್ಲೇಖಿಸಲು ಸೂಕ್ತವಾಗಿದೆ.

"ಮಾನವಂತರು ಮಾರಿ ಎತ್ತಧಾಂಗ
ಬರಿಯಬ್ಯಾಡ್ರಿ ತೆಗಳಿ ।
ಮಾನಗೇಡಿಗಳು ಮೆರೆಯುವ ಹಾಂಗ
ಬರಿಯಬ್ಯಾಡ್ರಿ ಹೊಗಳಿ ॥

ಬದುಕಿಸಿದರು ನೀವ್ ಭಂಡರ, ಅವರು
ಮುಂದ ಸಾಯತಾರ ।
ಸತ್ತು ಹೊಡೆದರೂ ಸತ್ಯವಂತರು
ಸತ್ತು ಬದಕತಾರ ॥

ಕೆಡಸಬ್ಯಾಡರಿ ಕಾಗದ ಗರತಿಯ
ಮಿಂಡ ಮಸಿಯ ಕೆಳಗ ।
ತೊಳೆಯಬ್ಯಾಡರಿ ವಿಷದ ಲೇಖನಿ
ಕುಡಿವ ನೀರಿನೊಳಗ ॥" ೪

ಈ ಪದ್ಯ 'ಖರೇ ಖರೇ ಸಂಗ್ಯಾಬಾಳ್ಯಾ' ಕೃತಿಗೆ ಪೂರಕವಾಗಿದೆ.

ಈ ಕೃತಿ ಪ್ರಕಟಗೊಂಡ ನಂತರ ೨೦೦೫ ಮೇ ೧೪ರಂದು ಈ ಸಣ್ಣಾಟವನ್ನು ರಂಗದ ಮೇಲೆ ಪ್ರಥಮ ಸಲ ಯಶಸ್ವಿಯಾಗಿ ಪ್ರಯೋಗಿಸಿದ ಕೀರ್ತಿ ಧಾರವಾಡದ "ಜಾನಪದ ಸಂಶೋಧನ ಸಂಸ್ಥೆ"ಯ ಶ್ರೀ ಬಸಲಿಂಗಯ್ಯ ಹಿರೇಮಠ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ ಹಾಗೂ ಎಲ್ಲ ಕಲಾವಿದರು, ರಂಗಕರ್ಮಿಗಳಿಗೂ ಸಲ್ಲುತ್ತದೆ.

## ಪಠ್ಯೇತರ ಚರ್ಚೆಗಳು :

ನಾಲ್ಕು ಪಠ್ಯಗಳ ಚರ್ಚೆಗಳಾದ ನಂತರ ಪಠ್ಯೇತರವಾದ ಕೆಲವು ಚರ್ಚೆಗಳಾದವು. ಸಣ್ಣಾಟದ ವಸ್ತು . ಆಶಯ, ಪಾತ್ರಗಳು, ಸನ್ನಿವೇಶಗಳ ಮೇಲೆ ಅನೇಕ ವಿದ್ವಾಂಸರು ಭಿನ್ನಾಭಿಪ್ರಾಯಗಳನ್ನು ಲೇಖನದ ಸ್ವರೂಪದಲ್ಲಿ ರಚಿಸಿದರು ಮತ್ತು ಅವೆಲ್ಲವು ಚರ್ಚೆಗೊಳಪಟ್ಟವು.

---

೪. ಡಾ. ಎಂ. ಎಂ. ಕಲಬುರ್ಗಿ(ಲೇ) 'ಖರೇ ಖರೇ ಸಂಗ್ಯಾಬಾಳ್ಯಾ' ಪುಟ – ೨

ಸಂಗ್ಯಾಬಾಳ್ಯಾದ ಬಗೆಗೆ ಬಂದ ಮೊದಲ ಲೇಖನ ಎಂ. ಬಿ. ಕೊಟ್ರಶೆಟ್ಟಿಯವರ 'ಸಂಗ್ಯಾಬಾಳ್ಯಾ' ಜಾನಪದ ಸಾಹಿತ್ಯ ದರ್ಶನ ಭಾಗ-೩ ಆಗಿದೆ. ಜಾನಪದ ರಂಗಭೂಮಿಯಲ್ಲಿ ಸಾಮಾಜಿಕ ವಸ್ತುವನ್ನು ಆಯ್ದುಕೊಂಡು ರಂಗಭೂಮಿಯನ್ನು ಪ್ರವೇಶಿಸಿದ ದಾಸರಾಟ, ರಾಧಾನಾಟಗಳ ಸ್ವರೂಪ ಮತ್ತು ಸಂಗ್ಯಾಬಾಳ್ಯಾ ಸ್ವರೂಪಕ್ಕೆ ಇರುವ ಸಾಮ್ಯತೆಗಳನ್ನು ಗುರುತಿಸಿದ್ದಾರೆ. ಪ್ರಣಯ ಶೃಂಗಾರಗಳ ಸಾಮಾಜಿಕ ವಸ್ತುವನ್ನಾಧರಿಸಿದ ರೂಪಾಸಿಂಗ, ಮುಕುಂದ, ಗೋವಿಂದ, ಕಡ್ಲಿಮಟ್ಟಿ ಕಾಶಿಬಾಯಿ ಈ ಎಲ್ಲ ಸಣ್ಣಾಟಗಳ ಸಾಲಿನಲ್ಲಿ ಸಂಗ್ಯಾಬಾಳ್ಯಾ ಅತ್ಯಂತ ಶ್ರೇಷ್ಠವಾದುದು ಎಂಬುದರ ಬಗ್ಗೆ ಸಂಶಯಗಳೇ ಇಲ್ಲ. ಈ ರೂಪಕದ ಕಥಾ ವಸ್ತುವಿನ ಸ್ವರೂಪವನ್ನು ವಿವರಿಸಿ ಅಲ್ಲಿಯ ಕಲೆಗಾರಿಕೆಯನ್ನು ಎತ್ತಿ ತೋರಿಸಿ ನೈತಿಕವಾದ ವಾತಾವರಣವನ್ನು ನಿರ್ಮಿಸುವ ಉದ್ದೇಶವನ್ನು ಹೊಂದಿದ್ದಾರೆ. ಈ ರೂಪಕದಲ್ಲಿ ಕಂಡು ಬರುವ ಸಾಹಿತ್ಯಕ ಅಂಶವನ್ನು ಜಾನಪದ ಪ್ರಜ್ಞೆಯನ್ನು, ಗ್ರಾಮೀಣ ಭಾಷೆಯ ಸೊಗಡನ್ನು ಅದರ ವಿಶೇಷತೆಯನ್ನು ಹೇಳಿದ್ದಾರೆ. ನಶಿಸಿಹೋಗುತ್ತಿರುವ ಜಾನಪದ ಕಲೆಯನ್ನು ವೃತಿಯಾಗಿ ಪರಿವರ್ತಿಸಿ ಪುನರುಜ್ಜೀವನಗೊಳಿಸಬೇಕೆನ್ನುವ ಲೇಖಕರ ಕಳವಳಿಯನ್ನು, ವಿಚಾರವನ್ನು ಮೆಚ್ಚಬೇಕು. ಸಂಗ್ಯಾಬಾಳ್ಯಾದ ಮೇಲೆ ಬರೆದಿರುವ ಈ ಕೃತಿ ಒಂದು ಉಪಯುಕ್ತ ಲೇಖನವಾಗಿದೆ.

ಉತ್ತರ ಕರ್ನಾಟಕದ ಬಯಲಾಟಗಳು ಎಂಬ ಶೀರ್ಷಿಕೆಯಡಿಯಲ್ಲಿ ಡಾ. ಬಸವರಾಜ ಮಲಶೆಟ್ಟಿಯವರು ಡಪ್ಪಿನಾಟಗಳನ್ನು ಐದು ರೀತಿಯಾಗಿ ವರ್ಗೀಕರಿಸಿ, ಸಂಗ್ಯಾ ಬಾಳ್ಯಾ ಸಣ್ಣಾಟವನ್ನು ಸಾಮಾಜಿಕ ಸಣ್ಣಾಟಗಳ ಗುಂಪಿಗೆ ಸೇರಿಸಿರುವುದು ಉಚಿತವಾಗಿದೆ. ಈ ಗೀತರೂಪಕದ ಬಗ್ಗೆ ಅಧ್ಯಯನ ಮಾಡುತ್ತಾ ಇದರ ಕತ್ತು ಬೈಲವಾಡ ಪತ್ತಾರ ಮಾಸ್ತರ ಇತನ ವಂಶಜರು ಗದುಗಿನವರೆಂದು ಆ ಮೇಲೆ ಬೈಲವಾಡಕ್ಕೆ ಬಂದು ನೆಲೆಸಿದರು ಎಂಬ ಡಾ. ಕಂಬಾರರ ಅಭಿಪ್ರಾಯವನ್ನು ಮಲ್ಲಶೆಟ್ಟಿಯವರು ಒಪ್ಪಿರುವುದರಿಂದ ಈ ವಿಚಾರ ಅವರ ಅಧ್ಯಯನದ ವ್ಯಾಪ್ತಿಗೆ ಸೇರುತ್ತದೆ. ಪತ್ತಾರ ಮಾಸ್ತರ ಗಂಗಿಯ ಮೇಲೆ ಮನಸ್ಸು

ಮಾಡಿ ಒಲಿಸಿಕೊಳ್ಳಲು ವಿಫಲನಾದ ಪ್ರಯುಕ್ತ ಆ ಸೇಡನ್ನು ತೀರಿಸಿಕೊಳ್ಳಲು ಈ ಸಣ್ಣಾಟವನ್ನು ರಚಿಸಿದ ಎಂಬ ಖಚಿತವಾದ ಎಂಬ ಖಚಿತವಾದ ಐತಿಹಾಸಿಕ ಆಧಾರಗಳು ಸಿಗುವತನಕ ಒಪ್ಪುವುದು ಕಷ್ಟವಾಗಿದೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ. ನಾಟಕದಲ್ಲಿ ಬರುವ ಪಾತ್ರವನ್ನು ವಿಮರ್ಶಿಸಿದ್ದಾರೆ.

ಸಂಗ್ಯಾ ಬಾಳ್ಯಾ ಕಥೆಯಲ್ಲಾ ತದ್ರೂಪ ಘಟನೆಯೇ ಆಗಿದೆ ಎಂಬ ಕಂಬಾರರ ಅಭಿಪ್ರಾಯವನ್ನು ಮಲಶೆಟ್ಟಿಯವರು ಖಂಡಿಸಿದ್ದಾರೆ. ಡಾ.ಕಂಬಾರರು ಕಲಾತ್ಮಕ ಸ್ಪರ್ಶವನ್ನು ಕೊಟ್ಟು ಸುಂದರ ಬಯಲಾಟವನ್ನಾಗಿ ಹೆಣೆದಿದ್ದಾರೆ ಎಂದಿದ್ದಾರೆ. ಸಂಗ್ಯಾಬಾಳ್ಯಾ ಮರಡಿ ಬಸವಣ್ಣನ ಜಾತ್ರೆಗೆ ಬರುವುದು, ಪಗಡಿ ಆಡುವಾಗ ಗಂಗಿಯನ್ನು ನೋಡುವುದು, ಗಂಗಿಯ ಸರಗಿ ಎಲ್ಲರನ್ನು ಬಿಟ್ಟು ಸಂಗ್ಯಾನಿಗೆ ಸಿಗುವುದು ಎಲ್ಲವೂ ಆಕಸ್ಮಿಕವಾಗಿದೆ. ಕವಿ ಉದ್ದೇಶ ಪೂರ್ವಕವಾಗಿ ಹೆಣೆದಿದ್ದಾರೆ. ಇದರಲ್ಲಿ ಯಾವ ಅನುಮಾನಗಳಿಲ್ಲ ಎಂದಿದ್ದಾರೆ.

ಸಂಗ್ಯಾ ಗಂಗಿಯರ ಪ್ರಣಯೋನ್ಮಾದವನ್ನು ಪ್ರೇಕ್ಷಕರಿಗೆ ತೋರಿಸುವುದು ಲೇಖಕರ ಉದ್ದೇಶವಾಗಿದೇ, ಈ ಘಟನೆಯಿಂದ ಸಮಾಜದ ಮೇಲೆ ಯಾವ ರೀತಿಯ ಪರಿಣಾಮ ಬೀರುವುದು. ಎಂಬುದನ್ನು ತೋರಿಸಬೇಕೆಂದಿದ್ದಾರೆ. ಸಮಕಾಲೀನ ಡಪ್ಪಿನಾಟಗಳೊಂದಿಗೆ ಸಂಗ್ಯಾ ಬಾಳ್ಯಾ ಹೋಲಿಸಿದಾಗ ಧೋರಣೆ, ಧಾಟಿ, ಮಾತುಗಾರಿಕೆಗಳಲ್ಲಿ ಕಂಡು ಬರುವ ಕೆಲವು ವೈಶಿಷ್ಟವನ್ನು ತಮ್ಮ ಲೇಖನದಲ್ಲಿ ಹೇಳಿರುವುದು ಸೂಕ್ತವಾಗಿದೆ. ಅಲ್ಲದೇ ಕೆಲವು ಉಪಯುಕ್ತವಾದ ವಿವರಗಳನ್ನು ತಮ್ಮ ಉತ್ತರ ಕರ್ನಾಟಕದ ಬಯಲಾಟಗಳು ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಇದನ್ನು ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯ ೧೯೮೩ರಲ್ಲಿ ಪ್ರಕಟಿಸಿದ್ದಾರೆ.

ಡಾ. ಮಲ್ಲಶೆಟ್ಟಿಯವರ ಅಭಿಪ್ರಾಯಕ್ಕೆ ಮೆರಗುಕೊಡುವಂತೆ ರಚಿಸಿದ ಖಂಡೋಬಾರವರ 'ಸಂಗ್ಯಾ ಬಾಳ್ಯಾ' ಒಂದು ವಿವೇಚನೆ ಎಂಬ ಲೇಖನದಲ್ಲಿ

ಸಣ್ಣಾಟಗಳು ಸಾಮಾಜಿಕ ವಸ್ತುವನ್ನಾಧರಿಸಿ ಪ್ರಚಾರಕ್ಕೆ ಬಂದ ಬಗೆಯನ್ನು ತಿಳಿಸಿ ಭಾಷೆ, ವಸ್ತು, ಸನ್ನಿವೇಶಗಳ ದೃಷ್ಟಿಯಿಂದ ಸಂಗ್ಯಾ ಬಾಳ್ಯಾ ಇತರ ಸಣ್ಣಾಟಗಳಿಗಿಂತ ಯಾವ ರೀತಿಯಾಗಿ ವಿಶಿಷ್ಟ ಪೂರ್ಣವಾಗಿದೆ. ಎಂಬುದನ್ನು ಹೇಳಿದುದು ಔಚಿತ್ಯ ಪೂರ್ಣವಾಗಿದೆ. ಖಂಡೋಬಾರವರು ಕೂಡಾ ಪತ್ತಾರ ಗಂಗಿಯನ್ನು ಮೋಹಿಸಿದ್ದ ಅವಳು ಒಲಿಯದ ಕಾರಣ ಸೇಡು ತಿರಿಸಿಕೊಳ್ಳುವ ಉದ್ದೇಶದಿಂದ ಈ ಕೃತಿಯನ್ನು ರಚಿಸಿದನೆಂದು ಹೇಳಿದ್ದಾರೆ. ರೂಪಕದ ಘಟನೆಯ ಬಗ್ಗೆ ಹೇಳುವಾಗ ಸಂಗ್ಯಾ ಬಾಳ್ಯಾ ಸ್ನೇಹಕ್ಕಿಂತ ಸಂಗ್ಯಾ ಗಂಗಿಯರ ಉನ್ಮತ್ತ ಪ್ರಯಣಕ್ಕೆ ಒತ್ತುಕೊಡಲಾಗಿದೆ. ಸಾಮಾಜಿಕ ಚೌಕಟನ್ನು ಮೀರಿದ ಸಂಗ್ಯಾ ಕೊಲೆಯ ಬಗ್ಗೆ ಜನರಿಗೆ ಅನುಕಂಪವಿಲ್ಲ. ಸಾಮಾಜಿಕ ಮೌಲ್ಯಗಳ ಚೌಕಟ್ಟಿನಲ್ಲಿ ಕಾರ್ಯ ಸಾಧಿಸಿದ ಈರ್ಯಾನ ಸಾವಿನ ಬಗ್ಗೆ ಜನಪದರು ಸಹಾನುಭೂತಿ ತೋರಿದ್ದಾರೆ. ಜನಪದರು ಸಾಮಾಜಿಕ ಮೌಲ್ಯಕ್ಕೆ ಹೆಚ್ಚಿನ ಮನ್ನಣೆ ನೀಡಿರುವುದು ಇದಕ್ಕೆ ಕಾರಣವಾಗಿದೆ. ಖಂಡೋಬಾರವರ ಈ ವಿಚಾರ ಗಮನಾರ್ಹವಾಗಿದೆ. ಅಲ್ಲಿ ನಡೆಯುವ ಅನಿರೀಕ್ಷಿತ ಕೆಲವು ಘಟನೆಯನ್ನು ತಮ್ಮ ಕೃತಿಯಲ್ಲಿ ವಿವೇಚಿಸಿದ್ದಾರೆ.

೧೯೯೪ರಲ್ಲಿ ಪ್ರಕಟಗೊಂಡ ವೀರಣ್ಣ ದಂಡೆಯವರು 'ಸಂಗ್ಯಾ ಬಾಳ್ಯಾ ಸಣ್ಣಾಟ–ಗಂಗಿಯ ದುರಂತ ಕಥೆ' ಎಂಬ ಮೌಲಿಕ ಲೇಖನವನ್ನು ಬರೆದಿದ್ದಾರೆ. ಇಲ್ಲಿರುವ ಕ್ರಿಯೆ ಮತ್ತು ಪಾತ್ರಗಳ ಸಂಬಂಧವನ್ನು ರೇಖಾಚಿತ್ರದ ಸಹಾಯದಿಂದ ಹೇಳಿದ್ದಾರೆ. ಇಲ್ಲಿಯ ಪಾತ್ರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಿದ್ದಾರೆ. ೧. ಸಂಗ್ಯಾನ ಗುಂಪು ೨. ಈರ್ಯಾನ ಗುಂಪು.

ಸಂಗ್ಯಾನ ಗುಂಪಿನಲ್ಲಿ ಬಾಳ್ಯಾ ಪರಮ್ಮ ಸೇರಿದರೆ, ಈರ್ಯಾನ ಗುಂಪಿನಲ್ಲಿ ಆತನ ಸಹೋದರರಾದ ಇರಪಕ್ಷಿ, ಬಸವಂತ ಸೇರುತ್ತಾರೆ. ಪರಮ್ಮ ಗಂಗಿಯ ಜೊತೆಗಿದ್ದರು ತಾತ್ವಿಕವಾಗಿ ಸಂಗ್ಯಾನ ಗುಂಪಿಗೆ ಸೇರುತ್ತಾಳೆ. ಸಂಗ್ಯಾ ಬಾಳ್ಯಾ ಎಂಬ ಗಂಡಸರಿಬ್ಬರ ಹೆಸರನ್ನು ಹೊತ್ತಿರುವ ಈ ಸಣ್ಣಾಟದ ವ್ಯವಹಾರಗಳೆಲ್ಲ

ಹೆಂಗಸಾದ ಗಂಗಿಯ ಸುತ್ತಲೇ ಹಬ್ಬಿಕೊಂಡಿರುವುದರಿಂದ ಗಂಗಿ ಸಣ್ಣಾಟದ ಕೇಂದ್ರವಾಗಿದ್ದಾಳೆ. ಸಂಗ್ಯಾ ಬಾಳ್ಯಾ ಪರಮ್ಮ ಹಾಕಿರುವ ಜಾಲದಲ್ಲಿ ಗಂಗಿ ಸಿಕ್ಕು ಹಾಕಿಕೊಂಡು ನರಳಾಡುತ್ತಿರುವ ದೃಶ್ಯಗಳನ್ನು ಲೇಖಕರು (ದಂಡೆಯವರು) ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ.

ಸ್ತ್ರೀವಾದಿ ದೃಷ್ಟಿಯಿಂದ ಕಥೆಯನ್ನು ಪುರುಷ ಪ್ರಧಾನ ಸಮಾಜ ಹೆಣ್ಣನ್ನು ನಡೆಸಿಕೊಂಡ ರೀತಿ ಪ್ರಧಾನ ಸಮಾಜ ಹೆಣ್ಣನ್ನು ನಡೆಸಿಕೊಂಡ ರೀತಿ ಅಮಾನವೀಯವೆನಿಸುತ್ತದೆ. ಆಕೆಗೆ ಆವರಿಸಿಕೊಳ್ಳುವ ಎಲ್ಲ ದುರಂತಗಳ ನಡುವೆ ಸ್ತ್ರೀ ಶೋಷಣೆಯ ಸಂಕೇತವಾಗಿ ದುರಂತ ನಾಯಕಿಯಾಗಿ ಬೆಳೆದು ನಿಲ್ಲುತ್ತಾಳೆ ಈ ಕಥೆ ಶೃಂಗಾರದ ಪದರಿನಲ್ಲಿ ಕಟ್ಟಿಕೊಟ್ಟ ದುರಂತದ ಮುಟೆಯಾಗಿದೆ ಎಂದು ದಂಡೆಯವರು ಕರೆದಿರುವುದು ಸಮಂಜಸವಾಗಿದೆ. ಗಂಗಿಯನ್ನುಳಿದಂತೆ ಎಲ್ಲ ಪಾತ್ರಗಳನ್ನು ಲಘುವಾಗಿ ಚಿತ್ರಿಸಿದ್ದಾರೆ. ಎಲ್ಲ ಪಾತ್ರಗಳನ್ನು ಸಾಮಾಜಿಕ ನೆಲೆಯಲ್ಲಿ ನಿಂತು ಆಲೋಚಿಸಿದರೆ ಚೆನ್ನಾಗಿರುತ್ತಿತ್ತೇನೋ..... ಒಟ್ಟಿನಲ್ಲಿ ದಂಡೆಯವರ ಈ ಲೇಖನ ಉಪಯುಕ್ತ ವಿವರಗಳನ್ನೊಳಗೊಂಡ ಮೌಲಿಕ ಲೇಖನವಾಗಿದೆ.

೧೯೯೫ ರಲ್ಲಿ ಪ್ರಕಟಗೊಂಡ ಕೆ. ಶಶಿಕಾಂತರವರ 'ಸಂಗ್ಯಾ ಬಾಳ್ಯಾ ಒಂದು ಸಾಮಾಜಿಕ ಚಿಂತನೆ ಎಂಬ ಲೇಖನ ಹೊಸ ದೃಷ್ಟಿಕೋನದಿಂದ ಕೂಡಿದೆ. ಇದುವರೆಗೆ ಚರ್ಚೆಗೊಳಗಾದ ಲೇಖನಗಳಿಗಿಂತ ಭಿನ್ನತೆಯನ್ನು ಸೃಷ್ಟಿಸಿದೆ. "ಈ ಸಣ್ಣಾಟದ ಎಲ್ಲ ಪಾತ್ರಗಳನ್ನು ಸಾಮಾಜಿಕ ನೆಲೆಯಲ್ಲಿ ನಿಂತು ವಿಚಾರಿಸಿ, ಪ್ರತಿಯೊಂದು ಪತ್ರವು ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ದುರಂತ ಘಟನೆಗೆ ಕಾರಣವಾಗಿವೆ ಎಂದಿದ್ದಾರೆ. ದಂಡೆ ಮತ್ತು ಇತರ ಲೇಖಕರು ಈರ್ರ್ಯಾ ವ್ಯಾಪಾರಕ್ಕೆ ಹೋಗುವಾಗ ಪರಮ್ಮಳನ್ನು ಗಂಗಿಯ ಜೊತೆ ಬಿಟ್ಟು ಹೋದದ್ದು ತಪ್ಪೆಂದು ಹೇಳಿದರೆ ಕೆ.ಶಶಿಕಾಂತರು ಬೇಜವಾಬ್ದಾರಿಯುಳ್ಳ ತಮ್ಮಂದಿರನ್ನು ಬಿಟ್ಟು ಹೋದದ್ದು ಈ ಘಟನೆ ನಡೆಯಲು ಕಾರಣ ಎಂದಿದ್ದಾರೆ. ಹೀಗೆ ಪ್ರತಿಯೊಂದು

[illegible]

[illegible]

[illegible]

ಘಟನೆಯನ್ನು ಸನ್ನಿವೇಶವನ್ನು ಭಿನ್ನವಾಗಿಯೇ ಪ್ರಸ್ತುತ ಪಡಿಸುತ್ತಾ ನಡೆಯುತ್ತಾರೆ.

ಗಂಗಿ ಹೆಣ್ತನಕ್ಕಾಗಿ ಅಲ್ಲದೇ ತಾಯ್ತನಕ್ಕಾಗಿ ಹಂಬಲಿಸಿದವಳು. ಸಂಗ್ಯಾನ ಗಂಗಿಯರ ಸಂಬಂಧ ಹಾದರವಲ್ಲ. ಹಾದರಕ್ಕಿಂತಲೂ ಭಿನ್ನವಾದ ಬಲಿಯುವಿಕೆಯಾಗಿದೆ. ನೈತಿಕ ಎಳೆಗಿಂತಲೂ ಮನಸ್ಸಿನ ಇಚ್ಛೆಯೇ ಇದರಲ್ಲಿ ಮುಖ್ಯವಾಗುತ್ತದೆ. ಇದರಿಂದಾಗಿ ಗಂಗಿಯನ್ನು ಯಾವುದೇ ಕಾರಣಕ್ಕೂ ಆರೋಪಿಯಾಗಿಸಲು ಸಾಧ್ಯವಿಲ್ಲ ಎಂದಿದ್ದಾರೆ.

"ಪರಮ್ಮ ಗಂಗಿಯ ದುರಂತ ಸ್ಥಿತಿಗೆ ನೇರವಾಗಿ ಕಾರಣವಾಗುತ್ತಾಳೆ ಎಂಬುದರ ಬಗ್ಗೆ ಅನುಮಾನವಿಲ್ಲ. ಇದಕ್ಕೆ ಶಶಿಕಾಂತರವರು ಊಹಿಸುವಂತೆ ಈಕೆಯಿಂದ ಪರಮ್ಮನನ್ನು ದ್ರೋಹವೆಸಗಲು ಕಾರಣ ಸಂಗ್ಯಾ ಒಡ್ಡಿದ ಹಣದ ಆಮಿಷಗಿಂತಲೂ ಯಾವುದೇ ಸೇಡಿನ ಕಾರಣವಿರಬಹುದೆನಿಸುತ್ತದೆ. ಈರ್ಯಾ ಪರಮ್ಮಳನ್ನು ತನ್ನ ವಿಷಯ ಲಂಪಟತನಕ್ಕೆ ಉಪಯೋಗಿಸಿಕೊಳ್ಳುತ್ತಿರುವಾಗ ಆಕೆಗೆ ಏನೋ ಅನ್ಯಾಯವಾಗಿ ಅದರ ಸೇಡಿಗಾಗಿಯೇ ಆಕೆ ಸಮಯ ಸಾಧಿಸಿ ಈರ್ಯಾನನ್ನು ಅವಮಾನಗೊಳಿಸಲು ಅಮಾಯಕಳು, ಅಸಹಾಯಕಳೂ ಆದ ಗಂಗಿಯನ್ನು ಈ ದುಃಖಸ್ಥಿತಿಗೆ ತಳ್ಳಿರಬೇಕೆನಿಸುತ್ತದೆ." [೫]

ಇಷ್ಟಲ್ಲದೆ ಬಾಳ್ಯಾ ಸಹ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಈ ಕೃತ್ಯದಲ್ಲಿ ಭಾಗಿಯಾಗಿರುವನು ಒಂದು ವೇಳೆ ಸಂಗ್ಯಾ ಬದುಕಿದ್ದರೆ ಅವನಲ್ಲಿ ಇಂತಹ ದುರ್ಬುದ್ಧಿ ಬಲಿತು ಅಮಾಯಕಳಾದ ಗಂಗಿಯಂತಹ ಎಷ್ಟೋ ಗರತಿಯರನ್ನು ಹಾಳು ಮಾಡುವ ಸಂಭವವನ್ನು ತಡೆದಿದ್ದಾನೆ ಎಂಬ ಶಶಿಕಾಂತರ ಅಭಿಪ್ರಾಯ

---

೫. ಎಸ್. ಎಸ್. ಅಂಗಡಿ(ಲೇ) ಸಂಗ್ಯಾಬಾಳ್ಯಾ ಗೀತರೂಪಕದ ಅಧ್ಯಯನ ಪುಟ-೭೨

ವನ್ನು ತಳ್ಳಿಹಾಕುವಂತಿಲ್ಲ. ಇವೆಲ್ಲ ಮುಂದಾಲೋಚನೆಗಳಿಂದ ಬಾಳ್ಯಾ ಸಂಗ್ಯಾನನ್ನು ಅಪಾಯಕ್ಕೆ ಸಿಲುಕಿಸಿರಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಕೆ.ಶಶಿಕಾಂತ ಮತ್ತು ಸಬರದರವರು ಸಾಮಾಜಿಕ ಹಿನ್ನೆಲೆ, ಗಮನದಲ್ಲಿಟ್ಟು ಕೊಂಡು ಸಂಗ್ಯಾ ಬಾಳ್ಯಾ ಸಣ್ಣಾಟವನ್ನು ಪರಿಶೀಲಿಸಿ ವಿವರಿಸಿ ವಿಚಾರ ಪೂರ್ಣವಾದ ಅಂಶಗಳನ್ನು ಹೇಳಿದ್ದಾರೆ. ಮೊತ್ತ ಮೊದಲ ಬಾರಿಗೆ ಹೊಸ ಅಂಶಗಳನ್ನು ಪ್ರತಿಪಾದಿಸಿದ ಲೇಖನ ಇವರದಾಗಿದೆ.

ಶ್ರೀ ಪ್ರಭುಸ್ವಾಮಿಮಠ ಅವರು "ಅಪರೂಪದ ಗೀತ ನಾಟಕ" ಎಂಬ ಶೀರ್ಷಿಕೆಯಡಿಯಲ್ಲಿ ನಾಟಕದ ವಸ್ತು, ಪರಿಸರ, ರಂಗ ಸಂಪ್ರದಾಯ ಕಥಾ ಪ್ರವಾಹ, ಸನ್ನಿವೇಶಗಳು ಎಂದು ಭಾಗಗಳನ್ನಾಗಿ ಮಾಡಿ ನಾಟಕದ ಒಟ್ಟು ಕ್ರಿಯೆಯನ್ನು ಸರಳಾನುವಾದದ ರೂಪದಲ್ಲಿ ಹೇಳಿದ್ದಾರೆ. ಹೊರತು ಅಲ್ಲಿ ಬರುವ ಪಾತ್ರ ಮತ್ತು ಘಟನೆಗಳನ್ನು ವಿಮರ್ಶೆಗೆ ಎತ್ತಿಕೊಂಡಿಲ್ಲ.

ಸಂಗ್ಯಾಬಾಳ್ಯಾದ ಮೇಲೆ ಬಂದಿರುವ ಎಲ್ಲ ಪತ್ಯೇತರ ಲೇಖನಗಳನ್ನು ಪರಿಶೀಲಿಸಿದಾಗ ವೀರಣ್ಣ ದಂಡೆ ಮತ್ತು ಕೆ. ಶಶಿಕಾಂತರ ಬರಹಗಳು ಹೊಸ ದೃಷ್ಟಿಕೋನದಿಂದ ಕೂಡಿವೆ. ಇನ್ನುಳಿದವು ಅಧ್ಯಯನಕ್ಕೆ ಉಪಯುಕ್ತವಾದ ವಿವರಗಳನ್ನು ಕೊಡುತ್ತವೆ. ಈ ಎಲ್ಲ ಲೇಖನಗಳು ಸಣ್ಣಾಟದ ಘಟನೆ, ಪಾತ್ರ, ಶೈಲಿ, ಆಶಯ ಮುಂತಾದ ವಿಚಾರಗಳ ಕುರಿತು ಚರ್ಚಿಸಿದರೆ ಪ್ರೊ.ಈರಣ್ಣ ಚನ್ನಪ್ಪನವರ ಬರೆದ "ಗದುಗಿನ ಸಂಗ್ಯಾಬಾಳ್ಯಾ" ಸಣ್ಣಾಟದ ಕರ್ತೃವಿನ ಕುರಿತು ಹೊಸ ಅಲೆಯನ್ನು ಸೃಷ್ಟಿಸಿದೆ.

ಇಲ್ಲಿಯವರೆಗೆ ಬಂದ ಲೇಖನಗಳಲ್ಲಿ ಸಣ್ಣಾಟದ ಕರ್ತೃ ರಾಯಪ್ಪ ಪತ್ತಾರ ಮಾಸ್ತರ ಎಂದು ಸ್ಪಷ್ಟವಾಗಿದೆ. ಆದರೆ ಈರಣ್ಣ ಚನ್ನಪ್ಪನವರು ತಮ್ಮ ಲೇಖನದಲ್ಲಿ ದೋಟ್ಯಾಳ ವೀರಬಸಪ್ಪ ಎಂದು ಉಲ್ಲೇಖಿಸಿದ್ದಾರೆ. ಈತನು ಗದುಗಿನ ಶಹಪೂರ ಪೇಟೆಯವನಾದ ಕಾರಣ ಪ್ರತಿಯೊಂದು ಪದ್ಯದ

ಅಂತ್ಯದಲ್ಲಿಯೂ "ಗದುಗಿನ ಶಹಪೂರಾ। ಶಂಕರಲಿಂಗ ದೇವರಾ। ನಾವು ಹೋಗಿ ಮಾಡತೇವಿ ನಮಸ್ಕಾರ" ಎಂದಿರುವುದರಿಂದ ಈ ಸಣ್ಣಾಟವನ್ನು ಗದುಗಿನ ಶಹಪೂರ ಪೇಟ ನಿವಾಸಿಯಾದ ದೋಟ್ಯಾಳ ವೀರಬಸಪ್ಪ ರಚಿಸಿದ್ದಾನೆ, ರಾಯಪ್ಪ ಪತ್ತಾರ ಎನ್ನುವುದು ಸತ್ಯಕ್ಕೆ ದೂರವಾದ ಅಂಶ ಎಂದು ಹೇಳಿದ್ದಾರೆ.

"ಈ ಸಂಗ್ಯಾಬಾಳ್ಯಾ ಕಥೆಯನ್ನು ಬರೆದವರು ಶ್ರೀ ವೀರಬಸಪ್ಪ ದೋಟ್ಯಾಳ ಎಂದು ಡಾ. ವ್ಹಿ. ಶಿವಾನಂದ ಅವರು ಅಭಿಪ್ರಾಯಪಟ್ಟಿದ್ದಾರೆ ಎಂದು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಇವರ ಮನೆ ಚೆನ್ನಬಸವಣ್ಣ ದೇವರ ಗುಡಿ ಹತ್ತಿರ ಇರುತ್ತದೆ. ಈಗ ದೋಟ್ಯಾಳರ ಎರಡು ಮನೆಗಳು ಶಹಪೂರ ಪೇಟೆ ಯಲ್ಲಿವೆ. ಅಲ್ಲಿ ದೋಟ್ಯಾಳ ವೀರಬಸಪ್ಪನ ಮೊಮ್ಮಕ್ಕಳು ವಾಸವಾಗಿದ್ದಾರೆ. ವೀರಬಸಪ್ಪ ಗಿಲೀಟಿನ ಸಾಮಾನು ವ್ಯಾಪಾರ ಮಾಡುತ್ತಿದ್ದ. ಒಂದೊಂದು ಊರಲ್ಲಿ ತಿಂಗಳಾನುಗಟ್ಟಲೇ ಆಯಾ ಊರಲ್ಲಿ ಇದ್ದು ವ್ಯಾಪಾರ ಮಾಡುತ್ತಿದ್ದರು. ಗಿಲೀಟಿನ ಸಾಮಾನುಗಳನ್ನು ಮಾರುತ್ತಿದ್ದರು. ವೀರಬಸಪ್ಪ ದೋಟ್ಯಾಳ ೧೮೬೯ ರಲ್ಲಿ ಬೈಲಹೊಂಗಲ ಮತ್ತು ಬೈಲವಾಡದ ಕೇದಿಗಿ ಬನದ ಹಳ್ಳದ ದಂಡೆಯ ಮೇಲೆ ಸಂಗ್ಯಾನ ಕೊಲೆ ಆಗುತ್ತದೆ. ಆಗ ಕೊಲೆಯ ಭೀಕರತೆ ಮತ್ತು ಕಥೆ ಯನ್ನು ಕಣ್ಣಾರೆ ಕಂಡು ವೀರಬಸಪ್ಪನಲ್ಲಿ ಭಾವನೆಗಳು ತಲ್ಲಣಿಸಿ ಸಂಗ್ಯಾಬಾಳ್ಯಾ ಕಥೆ ಬರೆದನು. ಆಗ ಆತನು ಕೇವಲ ೨೦ ವರ್ಷದ ತರುಣನಾಗಿದ್ದನು. ಆ ಕೊಲೆ ನಡೆದಾಗ ಆತ ಬೈಲವಾಡದಲ್ಲಿಯೇ ಇದ್ದಿರ ಬಹುದು. ೧೮೬೯ರ ನಾಗರ ಪಂಚಮಿ ಸುಮಾರಿಗೆ ಸಂಗ್ಯಾನ ಕೊಲೆಯಾಗುತ್ತದೆ. ಆ ಕೊಲೆ ಆದ ದೃಶ್ಯವನ್ನು ಬೈಲಹೊಂಗಲದ ಸುತ್ತಮುತ್ತಲಿನ ಜನರು ತಂಡೋಪತಂಡವಾಗಿ ನೋಡಲು ಬಂದಿರಬಹುದು. ಆ ಕೊಲೆಯು ಮಾವಿನ ಗಿಡ ಮತ್ತು ಬಾರಿಗಿಡದ ಹತ್ತಿರ ಆಗಿತ್ತು. ದೋಟ್ಯಾಳ ವೀರಬಸಪ್ಪನೂ ಆ ಕೊಲೆಯನ್ನು ಕಂಡು ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಹರಿಬಿಟ್ಟಿದ್ದಾನೆ ಮತ್ತು ಜನಪದ ನಾಟಕವನ್ನು ಹೆಣೆದಿದ್ದಾನೆ." [೬]

---

೬. ಪ್ರೊ. ಈರಣ್ಣ ಚನ್ನಪ್ಪನವರ(ಲೇ) ಬಣಗಾರ (ನಾಗರೀಕ) ಸಮಾಜ ಮತ್ತು ಸಂಸ್ಕೃತಿ ಗದುಗಿನ ಸಂಗ್ಯಾಬಾಳ್ಯಾ ಪುಟ - ೩೧.

“ಬೈಲವಾಡ ಬೈಲಹೊಂಗಲದಿಂದ ೬ ಕಿ.ಮೀ. ದೂರ ಇರುವ ಊರು. ಬೈಲಹೊಂಗಲ ಸಂಗ್ಯಾ ಮತ್ತು ಬಾಳ್ಯಾನ ಊರು. ಸಂಗ್ಯಾ ಗಂಗಾಳಲ್ಲಿ ಅನುರಕ್ತನಾದ. ಈ ವಿಷಯ ಈರಪ್ಪನಿಗೆ ತಿಳಿದು ಕುಪಿತನಾಗಿ ಸಂಗ್ಯಾನನ್ನು ರಾತ್ರಿ ೧.೦೦ರ ಸುಮಾರಿಗೆ ವರ್ತಿ ಹಳ್ಳದ ದಂಡೆಯ ಮೇಲೆ ಕ್ಯಾದಗಿ ಮಳೆಯಲ್ಲಿ ಮಾವಿನ ಗಿಡ ಮತ್ತು ಬೋರೆ ಗಿಡದ ಹತ್ತಿರ ಈರಣ್ಣ ಸಂಗ್ಯಾನ ಕೊಲೆ ಮಾಡುತ್ತಾನೆ. ಈ ಭೀಕರ ಕೊಲೆಯೇ “ಸಂಗ್ಯಾಬಾಳ್ಯಾ” ರಚಿಸಲು ಮೂಲ ಕಾರಣವಾಗಿದೆಯೆಂದು ಹೇಳಬಹುದು.”[೭]

ಈ ಎಲ್ಲ ಮೂಲಗಳನ್ನಿಟ್ಟುಕೊಂಡು ಸಣ್ಣಾಟವನ್ನು ರಚಿಸಿದವರು ದೋಟ್ಯಾಳ ವೀರಬಸಪ್ಪ ಎಂದು ಚನ್ನಪ್ಪನವರು ಅಭಿಪ್ರಾಯಪಡುತ್ತಾರೆ. ಸಣ್ಣಾಟ ಆಡುವ ಶೈಲಿ ಕಾಲಕಾಲಕ್ಕೆ ಸ್ಥಳದಿಂದ ಸ್ಥಳಕ್ಕೆ ಸ್ವಲ್ಪ ಬದಲಾವಣೆ ಕಂಡರೂ ಕೂಡಾ ಕರ್ತೃ ಮಾತ್ರ ರಾಯಪ್ಪ ಮಾಸ್ತರನೇ ಆಗಿದ್ದನು. ಆದರೆ ಚನ್ನಪ್ಪನವರ ಅಭಿಪ್ರಾಯ, ಅನಿಸಿಕೆಗಳನ್ನು ಗಮನಿಸಿದರೆ ತೀವ್ರ ವಿರೋಧಕ್ಕೆ ಒಡ್ಡುವ ವಿಷಯವನ್ನು ಅರುಹಿದ್ದಾರೆ. ಸಣ್ಣಾಟದ ನಿಜವಾದ ಕತ್ತೃ ದೋಟ್ಯಾಳ ವೀರಬಸಪ್ಪನಾಗಿದ್ದಾನೆ. ರಾಯಪ್ಪ ಪತ್ತಾರ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ಎಂದು ಖಡಾಖಂಡಿತವಾಗಿ ವ್ಯಕ್ತಪಡಿಸಿದ್ದಾರೆ.

“ಕನ್ನಡ ಜಾನಪದ ಸಾಹಿತ್ಯದಲ್ಲಿ ಉತ್ತರ ಕರ್ನಾಟಕದ ಬಯಲಾಟಗಳು ಬಹು ಪ್ರಸಿದ್ಧಿಯನ್ನು ಹೊಂದಿದ್ದವು. ಅವುಗಳಲ್ಲಿ ಅತ್ಯಂತ ಮುಕುಟ ಪ್ರಾಯವಾಗಿದ್ದು “ಸಂಗ್ಯಾಬಾಳ್ಯಾ”. “ಸಂಗ್ಯಾಬಾಳ್ಯಾ” ಬಯಲಾಟವನ್ನು ಬರೆದ ಕವಿ ಗದುಗಿನ ಗಂಡುಮೆಟ್ಟಿನ ಶಹಪೂರ ಪೇಟೆಯ ನಿವಾಸಿ ದೋಟ್ಯಾಳ ವೀರಬಸಪ್ಪ. ಈಗ ನೂರಾ ಅರವತ್ತು ವರ್ಷಗಳ ಹಿಂದೆ ಜನಿಸಿದ ಈ ಕವಿ

---

೭. ಪ್ರೊ.ಈರಣ್ಣ ಚನ್ನಪ್ಪನವರ(ಲೇ) ಬಣಗಾರ(ನಾಗರೀಕ) ಸಮಾಜ ಮತ್ತು ಸಂಸ್ಕೃತಿ ಗದುಗಿನ ಸಂಗ್ಯಾಬಾಳ್ಯಾ ಪುಟ–೩೩.

ಗದುಗಿನ ಶಂಕರ ದೇವರ ಗುಡಿಯಲ್ಲಿ ಕುಳಿತು ಈ ಬಯಲಾಟವನ್ನು ಬರೆದಿದ್ದಾನೆ. ಇದನ್ನು ಶ್ರೀ ಕೀರ್ತಿನಾಥ ಕುರ್ತಕೋಟಿ ಮತ್ತು ಡಾ.ಚಂದ್ರಶೇಖರ ಕಂಬಾರರು ಪ್ರಕಟಿಸಿರುವರು. ಅವರು "ಸಂಗ್ಯಾಬಾಳ್ಯಾ" ನಾಟಕವನ್ನು ಬೈಲಹೊಂಗಲ ಪತ್ತಾರ ಬರೆದಿರುವರು ಎಂದು ತಿಳಿಸಿರುತ್ತಾರೆ. ಇದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ವೀರಬಸಪ್ಪ ಶಹಪೂರ ಪೇಟೆ ಓಣಿಯವನು. ಅವನು ತನ್ನ ಅಂತ್ಯ ಪದಗಳಲ್ಲಿ ತನ್ನ ಇಷ್ಟ ದೇವರಾದ ಶಹಪೂರ ಪೇಟೆಯ ಶಂಕರಲಿಂಗನನ್ನು ಸ್ತುತಿಸಿರುವುದೇ ಇದಕ್ಕೆ ಸಾಕ್ಷಿಯಾಗಿದೆ." [೮]

ಈ ವಿಷಯವಸ್ತು ತೀವ್ರ ವಿರೋಧ, ಚರ್ಚೆಗೆ ಆಸ್ಪದದಾಯಕವಾಗಿದೆ. ಉತ್ತರ ಕರ್ನಾಟಕದಲ್ಲಿಯೇ ಅತ್ಯಂತ ಜನಪ್ರಸಿದ್ಧವಾದ ಒಂದು ಸಣ್ಣಾಟವಾಗಿದೆ. ಇದರ ವಿಷಯವಸ್ತುವಿನ ಬಗ್ಗೆ ಲೇಖಕರಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ ರಚನೆಕಾರ ಮಾತ್ರ ಒಬ್ಬನೇ ಆಗಿದ್ದನು. ಚನ್ನಪ್ಪನವರ ಪ್ರಕಾರ ರಚನೆಕಾರನೇ ಬೇರೆಯಾಗಿದ್ದಾನೆ. ಈ ರೀತಿಯಾದ ಲೇಖನಗಳು ಚರ್ಚೆಗೆ ತೀವ್ರ ವಿರೋಧವನ್ನು ಒಡ್ಡುತ್ತವೆ. ಖಚಿತವಾದ ಐತಿಹಾಸಿಕ ಆಧಾರಗಳು ಸಿಗುವತನಕ ಕರ್ತೃವಿನ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ.

೨೦೦೫ರಲ್ಲಿ ಈ ಸಣ್ಣಾಟದ ಮೇಲೆ ಅನೇಕ ವಿದ್ವಾಂಸರ ವಿಮರ್ಶಾ ಲೇಖನಗಳು ಪ್ರಕಟಗೊಂಡವು. ಡಾ. ಚಂದ್ರಶೇಖರ ಕಂಬಾರ ಮತ್ತು ಡಾ. ಎಂ. ಎಂ. ಕಲಬುರ್ಗಿಯವರ ಕೃತಿಗಳ ವಸ್ತುಗಳನ್ನು ಇಟ್ಟುಕೊಂಡು ಅನೇಕ ಚರ್ಚೆಗಳನ್ನು ಹುಟ್ಟುಹಾಕಿದರು. ನೂರು ನೂರೈವತ್ತು ವರ್ಷಗಳಿಂದ ಜನಪ್ರಿಯತೆಯ ಶಿಖರದಲ್ಲೇ ಇರುವ ಸಂಗ್ಯಾಬಾಳ್ಯಾ ಸಣ್ಣಾಟ ಸತ್ಯ ಮತ್ತು

---

೮. ಪ್ರೊ.ಈರಣ್ಣ ಚನ್ನಪ್ಪನವರ(ಲೇ) ಬಣಗಾರ(ನಾಗರೀಕ) ಸಮಾಜ ಮತ್ತು ಸಂಸ್ಕೃತಿ ಗದುಗಿನ ಸಂಗ್ಯಾಬಾಳ್ಯಾ ಪುಟ-೩೫.

ಸುಳ್ಳಿನ ಚರ್ಚೆಗೆ ವೇದಿಕೆಯಾಯಿತು. ಬೈಲಹೊಂಗಲ ಪ್ರದೇಶದಲ್ಲಿ ಒಂದೂವರೆ ಶತಮಾನಕ್ಕಿಂತ ಹಿಂದೆ ಘಟಿಸಿದ ಪ್ರಕರಣ ಮೌಖಿಕ ಸಣ್ಣಾಟವಾಗಿ ಜನಪ್ರಿಯವಾಗಿತ್ತು. ಡಾ. ಚಂದ್ರಶೇಖರ ಕಂಬಾರರು ಅದಕ್ಕೆ ಅಕ್ಷರರೂಪ ಕೊಟ್ಟು ರಂಗಭೂಮಿಯ ಚೌಕಟ್ಟಿನೊಳಗೆ ತಂದು ಯಶಸ್ವಿಯಾದರು. ಕಂಬಾರರ ಕೃತಿ ಹಾಗೂ ನಾಟಕವಾಗಿ ಸಾವಿರಾರು ಪ್ರದರ್ಶನ ಕಂಡು ಜನಪ್ರಿಯ ಕನ್ನಡ ನಾಟಕಗಳಲ್ಲಿ ಒಂದೆಂಬ ಹಿರಿಮೆ ಪಡೆದುಕೊಂಡಿದೆ.

ಚರ್ಚೆಗೆ ಕಾವನ್ನು ಕೊಟ್ಟಿರುವ ಡಾ. ಕಲಬುರ್ಗಿಯವರ ಖರೇ ಖರೇ ಸಂಗ್ಯಾ–ಬಾಳ್ಯಾ ಕಂಬಾರರ ಕೃತಿಗೆ ಕೊಟ್ಟ ಉತ್ತರ ಎಂಬ ಚರ್ಚೆಗಳಾದವು. ಒಂದು ವಸ್ತುವನ್ನು ಸೃಜನಶೀಲ ಲೇಖಕ ಬೇರೆ ಬೇರೆ ವ್ಯಾಖ್ಯಾನಕ್ಕೆ ಒಳಪಡಿಸಿ ಬರೆಯಲು ಅವಕಾಶ ಇದೆ. ಕಲಬುರ್ಗಿಯವರು ಕಂಬಾರರ ಕೃತಿಯತ್ತ ನೇರವಾಗಿ ಬೆರಳು ತೋರದೇ ನೂರೈವತ್ತು ವರ್ಷಗಳ ಹಿಂದೆ ಸುಳ್ಳನ್ನು ಸತ್ಯ ಎಂದು ಬಿಂಬಿಸುವ ಪ್ರಯತ್ನ ನಡೆದಿದೆ ಎನ್ನುತ್ತಿದೆ ಕಲಬುರ್ಗಿಯವರ ಖರೇ ಖರೇ ಸಂಗ್ಯಾಬಾಳ್ಯಾ ನಾಟಕ.

"ಕಲಬುರ್ಗಿಯವರ ಸಂಶೋಧನೆಯ ಪ್ರಕಾರ ಗಂಗಿ ಗೌರವಸ್ಥ ಮನೆತನದ ಗೃಹಿಣಿ. ಆಕೆ ಚಿನ್ನದ ಒಡವೆ ಮಾಡಿಸಿಕೊಳ್ಳಲು ಪತ್ತಾರನಲ್ಲಿಗೆ ಹೋದಾಗ ಆತ ಆಕೆಯ ಮೇಲೆ ಕಣ್ಣು ಹಾಕುತ್ತಾನೆ. ಆದರೆ ಗಂಗಿ ಅದನ್ನು ತಿರಸ್ಕರಿಸುತ್ತಾಳೆ. ನಿರಾಶನಾದ ಪತ್ತಾರ ಖಳನಾಯಕನಾಗುತ್ತಾನೆ. ಸಂಗ್ಯಾ ನೊಂದಿಗೆ ಆಕೆಯ ಅನೈತಿಕ ಸಂಬಂಧ ಕಲ್ಪಿಸಿ ಗಂಗಿಯ ಗಂಡನಲ್ಲಿ ವಿಷಬೀಜ ಊರುತ್ತಾನೆ. ಗಂಗಿಯ ಗಂಡ ಈರಪ್ಪಾ ಹಾಗೂ ಮೈದುನರು ಜೈಲಿನಿಂದ ಹೊರಬರುವ ಹೊತ್ತಿಗೆ ಅವರಿಗೆ ಸತ್ಯದ ಮನವರಿಕೆ ಆಗಿರುತ್ತದೆ. ಆದರೆ ದುರಂತ ನಡೆದುಹೋಗಿರುತ್ತದೆ. ಸಾಕಷ್ಟು ಅನಾಹುತವೂ ಆಗಿರುತ್ತದೆ. ಈ ನಡುವಿನ ಅವಧಿಯಲ್ಲಿ ಪತ್ತಾರ ಸಂಗ್ಯಾಬಾಳ್ಯಾ ರಚಿಸಿ ಲಗಳಿ ಮನೆತನದ ಮರ್ಯಾದೆ ಯನ್ನು ಹರಾಜು ಹಾಕಿರುತ್ತಾನೆ ಎನ್ನುತ್ತದೆ ಖರೇ ಖರೇ ಸಂಗ್ಯಾಬಾಳ್ಯಾ ನಾಟಕ.

ಪ್ರತಿಷ್ಠಿತ ಕುಟುಂಬದ ಒಡತಿಯೊಬ್ಬರ ಖಾಸಗಿ ಬದುಕನ್ನು ಸಾರ್ವತ್ರಿಕಗೊಳಿಸಿ ಆಕೆಯ 'ಶೀಲ' ಕುರಿತು ಅಪಪ್ರಚಾರಕ್ಕೆ ಮುಂದಾದ "ಸಂಗ್ಯಾಬಾಳ್ಯಾ" ತೇಜೋವಧೆಗಾಗಿಯೇ ಹೆಣೆಯಲಾದ ಸುಳ್ಳು ಸೃಷ್ಟಿ ಎಂಬ ವಾದವನ್ನು ಮಂಡಿಸಲಾಗಿದೆ."[೧]

ನೂರೈವತ್ತು ವರ್ಷಗಳ ಹಿಂದೆ ನಡೆದ ಸತ್ಯ ಘಟನೆ ಆಗಿರುವುದರಿಂದ ಬೈಲಹೊಂಗಲ ವ್ಯಾಪ್ತಿಯೊಳಗೆ ಬರುವ ಯಾವ ಸ್ಥಳಗಳಲ್ಲಿಯೂ ಈ ಆಟ ಆಡಲು ನಿರ್ಬಂಧಿಸಲಾಗಿದೆ. ಈ ಪ್ರಕರಣ ಇಡೀ ಬೈಲಹೊಂಗಲದ ಮರ್ಯಾದೆಯ ಪ್ರಶ್ನೆಯಾಗಿದ್ದರಿಂದ ಯಾರು ಅದನ್ನು ಆಡುವುದಿಲ್ಲ. ಆಡಿಸುವುದೂ ಇಲ್ಲ. ಇದನ್ನು ಗಮನಿಸಿದರೆ ಕಲಬುರ್ಗಿಯವರ ಸಂಶೋಧನೆ ಒಂದಿಷ್ಟು ನೆಲೆಗಟ್ಟು ದೊರೆತಂತಾಗುತ್ತದೆ. ಹಾಗಂತ ಈ ಒಂದೇ ಆಧಾರ ಇಟ್ಟುಕೊಂಡು ಸತ್ಯ ಎಂದು ಹೇಳುವುದು ಕಷ್ಟವಾಗುತ್ತದೆ. ಏಕೆಂದರೆ ಕಥೆ, ನಾಟಕ, ಕಾದಂಬರಿ ಇವೆಲ್ಲ ಸ್ವಲ್ಪ ಸತ್ಯ ಮತ್ತು ಸ್ವಲ್ಪ ಕಲ್ಪನೆಗಳೊಂದಿಗೆ ಬೆಳೆಯುತ್ತದೆ. ಅವೆಲ್ಲವುಗಳನ್ನು ಸಾಹಿತ್ಯ ಕೃತಿಯಾಗಿ ಒಪ್ಪಿಕೊಳ್ಳಬಹುದೇ ಹೊರತು ಇತಿಹಾಸವಾಗಿಯಲ್ಲ. ಮುಂದೊಂದು ದಿನ ಮತ್ತೊಬ್ಬ ಸಂಶೋಧಕ ಈ ಸಣ್ಣಾಟದ ಮತ್ತಷ್ಟು ಪುರಾವೆಗಳನ್ನು ಮಂಡಿಸಿ ಕಲಬುರ್ಗಿಯವರ ವಾದವನ್ನು ತಳ್ಳಿಹಾಕಲೂಬಹುದು. ಹೀಗೆ ಒಬ್ಬರ ಮೇಲೆ ಒಬ್ಬರು ಕೆಸರು ಎರಚುವ ಆಟವಾಗುತ್ತದೆ. ಹೊರತು ಸತ್ಯ, ಸುಳ್ಳಿನ, ನಿಷ್ಕರ್ಷ ಆಗಲಾರದು, ಸಾಹಿತ್ಯ ಕೃತಿಗಳನ್ನು ಸಾಹಿತ್ಯವಾಗಿಯೇ ಒಪ್ಪಿಕೊಳ್ಳುವುದೊಂದೇ ಈ ಸಮಸ್ಯೆಗೆ ವಾದಕ್ಕೆ ಪರಿಹಾರ ಎಂದು ಎಂ.ಕೆ. ಭಾಸ್ಕರವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿ ಚರ್ಚಿಸಿದ್ದಾರೆ.

---

೧. ಎಂ.ಕೆ. ಭಾಸ್ಕರರಾವ್(ಲೇ) ಸಾಪ್ತಾಹಿಕ ಪುರವಣಿ ಪ್ರಜಾವಾಣಿ ಪತ್ರಿಕೆ ಭಾನುವಾರ ೧೯ ಜೂನ್ ೨೦೦೫

ಪುಟ–೩

ಇದಾದ ಕೆಲವು ದಿನಗಳ ನಂತರ ಬಂದ ಚಂದ್ರಕಾಂತ ಕುಸನೂರರ ಲೇಖನ ಕೂಡಾ "ಖರೆ ಕಥಾ ವಸ್ತುವಿನ ಎಳೆದಾಟ" ಎಂಬ ಶೀರ್ಷಿಕೆ ಯಡಿಯಲ್ಲಿ ಈ ಸಣ್ಣಾಟದ ಕೆಲವು ಅಂಶಗಳನ್ನು ಚರ್ಚಿಸಿದ್ದಾರೆ ಪತ್ತಾರ ಮಾಸ್ತರನ ದುಷ್ಟ ಬುದ್ಧಿಯಿಂದಲೇ ಈ ದುರಂತ ಸಂಭವಿಸಿತು. ಈ ಬುದ್ದಿಯೇ ನಂತರದ ದಿನಗಳಲ್ಲಿ ಪತ್ತಾರ ಮಾಸ್ತರನ ಲೇಖನಿಯಿಂದ ಇಂಥದೊಂದು ಸಣ್ಣಾಟ ಬರೆಯುವಂತೆ ಮಾಡಿತು. ಈ ಕಥಾವಸ್ತುವನ್ನೇ ಎತ್ತಿಕೊಂಡು ಸಂಗ್ಯಾ-ಬಾಳ್ಯಾ ಸಣ್ಣಾಟವನ್ನು ಬರೆದು ರಂಗದ ಮೇಲೆ ಪ್ರದರ್ಶಿಸಿ ಜನಪ್ರಿಯ ಗೊಳಿಸಿದರು. ಪತ್ತಾರ ಮಾಸ್ತರ ಮತ್ತು ಖ್ಯಾತ ಲೇಖಕರು ಮಾಡಿದ ಅಪಚಾರದಿಂದ ಸಜ್ಜನರ ಮೇಲೆ ಶಾಬ್ದಿಕ ಹಲ್ಲೆ ನಡೆಯಿತೆಂದು ಕಲಬುರ್ಗಿ ಯವರ ವಾದವಾಗಿದೆ. "ಅಕ್ಷರ ಜಗತ್ತಿನ ದುಷ್ಟ ವ್ಯಕ್ತಿಗಳಿಂದ ಇಂಥ ಸೃಷ್ಟಿ ಅಸಹಜವೇನಲ್ಲ ಎಂದೂ ಡಾ. ಕಲಬುರ್ಗಿಯವರು ಹೇಳುತ್ತಾರೆ. ಅಂದರೆ ಅಕ್ಷರ ಜಗತ್ತಿನಲ್ಲಿ ದುಷ್ಟ ಮತ್ತು ಶಿಷ್ಟ ವ್ಯಕ್ತಿಗಳಿರುತ್ತಾರೆಂದು ಖಚಿತವಾಯಿತು."[೨] ಇದರಲ್ಲಿ ದುಷ್ಟರ್‍ಯಾರು, ಶಿಷ್ಟರ್‍ಯಾರು ಎಂದು ಸಮಾಜ ತೀರ್ಮಾನ ಮಾಡುವ ವಿಷಯವೆಂದು ಸಾಧಿಸಬಹುದೆಂದಿದ್ದಾರೆ.

ಸಂಗ್ಯಾ-ಬಾಳ್ಯಾ ಸಣ್ಣಾಟದಂತ ಹತ್ತಾರು ಘಟನೆಗಳು ದಿನನಿತ್ಯ ನಡೆಯುತ್ತಲೇ ಇರುತ್ತದೆ. ಯಾವುದೇ ವ್ಯಕ್ತಿಯನ್ನು ಗುರಿ ಮಾಡುವ ಉದ್ದೇಶಕ್ಕೆ ಸಾಹಿತ್ಯದ ಆಶ್ರಯ ಪಡೆದದ್ದು ತಪ್ಪಾಗುತ್ತದೆ ಪತ್ತಾರ ಮಾಡಿದ ತಪ್ಪು ಇದೆ. ಪತ್ತಾರ ಮಾಸ್ತರ ಖಳನಾಯಕನೆಂದು ಸಾಭೀತು ಪಡಿಸಲಿಕ್ಕೆ ಡಾ. ಕಲಬುರ್ಗಿಯವರು ತಮ್ಮ "ಅರಿಕೆ"ಯಲ್ಲಿ ಒಂದಿಷ್ಟು ಸಾಕ್ಷಿ ಪುರಾವೆಗಳನ್ನು ಒದಗಿಸಬಹುದಿತ್ತು ಒಂದು ನಿರ್ದಿಷ್ಟವಾದ ಉದ್ದೇಶದಿಂದ ಸಣ್ಣಾಟ ಬರೆದಿದ್ದಕ್ಕಾಗಿ ಕೃತಿಯ ಕಲಾತ್ಮಕತೆ ಭಾಷೆ, ದೃಶ್ಯ ಬಂಧ, ತಂತ್ರಾಲಯ ಇತ್ಯಾದಿಗಳ ಬಗ್ಗೆ

---

೨. ಚಂದ್ರಕಾಂತ ಕುಸನೂರ(ಲೇ) ಸಂಯುಕ್ತ ಕರ್ನಾಟಕ ದಿನಪತ್ರಿಕೆ ೨೪ ಜುಲೈ ೨೦೦೫.

ಚರ್ಚಿಸಬಹುದಾಗಿತ್ತು ಪಾತ್ರ ಪೋಷಣೆಯ ದೃಷ್ಟಿಯಿಂದ ನೋಡಿದಾಗ ಬಹುತೇಕ ಪಾತ್ರಗಳು ಮುಕ್ಕಾಗಿವೆ. ಪತ್ತಾರ ಮಾಸ್ತರ ಹೆಜ್ಜೆ ಹೆಜ್ಜೆಗೂ ತಾನು 'ವಿಲ್ಲನ್' ಎಂದು ತನ್ನ ಮಾತಿನಿಂದಲೇ ಸಿದ್ದ ಮಾಡಿಕೊಳ್ಳುತ್ತಾನೆ. ಕಾಮುಕ ವ್ಯಕ್ತಿಯ ಚಾಣಾಕ್ಷತನವನ್ನು ತನ್ನ ಮಾತಿನಿಂದ ಕಳೆದುಕೊಳ್ಳುತ್ತಾನೆ. "ಚಹಾಕಪ್ಪು" "ಎಲಿಚಂಚಿ" ಪುರಾವೆಗಳಂತೆ ಬರುತ್ತವೆ. ಘಟನೆ ನಡೆದ ಕಾಲಾವಧಿ ೧೮೪೦ ಎಂದು ಮಲಶೆಟ್ಟಿಯವರು ಅಭಿಪ್ರಾಯ ಪಡುತ್ತಾರೆ.

ಎಲೆ ತಿನ್ನುವವರಿಗೆ ಚಂಚಿ ಸದಾ ಸಂಗಾತಿಯಾಗಿರುತ್ತದೆ. ಸಂಗ್ಯಾನ ಎಲೆಚಂಚಿ ಪರಮ್ಮನ ಕೈಗೆ ಸಿಕ್ಕ ಮೇಲೆ ಅದನ್ನು ಸಂಗ್ಯಾ ಹುಡುಕಲಿಲ್ಲವೇ? ಎನ್ನುವ ಅಂಶ ಗಮನಾರ್ಹವಾಗಿದೆ ಪತ್ತಾರ ಛೇಡಿಸಿದ ವಿಷಯ ಗಂಗಾ ಗಂಡನ ಎದುರಿಗೆ ಯಾಕೆ ಹೇಳಲಿಲ್ಲ? ಎನ್ನುವ ಅನೇಕ ಸಂದೇಹಾಸ್ಪದ ಜಾಗಗಳು ಈ ಕೃತಿಯಲ್ಲಿ ಉಳಿದುಕೊಂಡು ಬಿಟ್ಟಿವೆ.

ಪ್ರಸ್ತುತ ನಾಟಕದಲ್ಲಿ ಭಾಗವತ ಸಣ್ಣಾಟ ಪ್ರಾರಂಭ ಮಾಡಿದಾಗ ಮುದುಕನೊಬ್ಬ ಬಂದು ಆಟ ಆಡದಂತೆ ತಡೆದು ಖರೇ ಖರೇ ಸಂಗ್ಯಾ–ಬಾಳ್ಯಾ ಯಾವುದೆಂದು ಹೇಳುತ್ತಾನೆ. ಅವನ ಹೇಳಿಕೆಯೇ ಕಲಬುರ್ಗಿಯವರ ಕೃತಿಯಾಗುತ್ತದೆ ಎಂದು ಚಂದ್ರಕಾಂತ ಕುಸನೂರ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಂಗ್ಯಾ–ಬಾಳ್ಯಾ ಸಣ್ಣಾಟವು ಸಂಧಿಗ್ಧತೆಯಲ್ಲಿ ಸಿಲುಕಿ ಸಂಶಯದ ಸುಳಿಯಲ್ಲಿ ಗಿರಕಿ ಹೊಡೆಯತೊಡಗಿದೆ. ಶತಶತಮಾನಗಳು ಗತಿಸಿಹೋದ ಮೇಲೆ ಸಾಹಿತಿಗಳ ಹಲವು ವ್ಯಾಮೋಹಗಳಿಂದ ನೈಜ ಘಟನೆಗಳು ಮರೆಮಾಚಿ ಮತ್ತೊಂದು ರೂಪ ತಳೆದಿದೆ. ಇಂತಹ ಪರಿಸ್ಥಿತಿಯಲ್ಲಿ ಮುಂದಿನ ಪೀಳಿಗೆ ಸಂದಿಗ್ಧತೆಯಲ್ಲಿ ಸಿಲುಕಿ ಯಾವುದೇ ನಿಜ, ಯಾವುದು ಸುಳ್ಳು ಎಂಬ ತೊಳಲಾಟದಲ್ಲಿ ಬೀಳುತ್ತಾರೆ ಹಳ್ಳಿ ಹಳ್ಳಿಗಳಲ್ಲಿ ಪ್ರದರ್ಶಿಸಲಾಗುತ್ತಿರುವ ಈ ನಾಟಕ

ಅನೈತಿಕತೆಯ ಆಧಾರದಿಂದ ಕೂಡಿರುವುದರಿಂದ ಯುವ ಪೀಳಿಗೆಗೆ ತರಬೇತಿ ಕೊಟ್ಟಂತಾಗುತ್ತದೆ ಎಂದು ಹುಬ್ಬಳ್ಳಿಯ ಎಂ.ಡಿ. ಗೋಗೇರಿ ಅಭಿಪ್ರಾಯ ಪಟ್ಟಿದ್ದಾರೆ ಡಾ. ಬಸವರಾಜ ಮಲಶೆಟ್ಟಿಯವರು ಬರೆದ ಸಂಗ್ಯಾ ಬಾಳ್ಯಾ ಸುತ್ತ .......... ಲೇಖನದಲ್ಲಿ ಆಗಿನ ಕಾಲ ಪ್ರಜ್ಞೆಯ ವಾಸ್ತವ ವ್ಯಕ್ತಿಗಳ ಸ್ವಭಾವ ಚಿತ್ರಣ ವನ್ನು ನೀಡಲಾಗಿದೆ. ಒಂದು ಕಥಾ ವಸ್ತುವನ್ನು ತನ್ನ ದೃಷ್ಟಿಕೋನಕ್ಕೆ ತಕ್ಕಂತೆ ಸ್ವತಂತ್ರವಾಗಿ ನಿರೂಪಿಸುವ ಸ್ವಾತಂತ್ರ, ಸೃಜನಶೀಲ ಲೇಖಕರಿಗೆ ಇರುತ್ತದೆ ಎಂದಿದ್ದಾರೆ ಬೆಳಗಾವಿ ಜಿಲ್ಲೆ, ಶಿಂದೊಳ್ಳಿಯ ಬಸವಂತ ಬಾ. ಬಡಿಗೇರ.

ಉತ್ತರ ಕರ್ನಾಟಕದ ಕಲಾಪ್ರದರ್ಶನಗಳಲ್ಲಿ ಸಂಗ್ಯಾ ಬಾಳ್ಯಾ ಸಣ್ಣಾಟವು ಒಂದು "ಸುಮಾರು ೧೨೫ ವರ್ಷಗಳ ಹಿಂದೆ ರೂಪ ತಳೆದ ಈ ಸಣ್ಣಾಟದ ಸಾವಿರಾರು ರಂಗ ಪ್ರದರ್ಶನಗಳು ನಾಡಿನುದ್ದಕ್ಕೂ ನಡೆದಿವೆ. ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳ ಜನತೆಯ ನಾಲಗೆಯಲ್ಲಿ ಒಂದು ಗೀತ ಕಾವ್ಯವಾಗಿ ಉಳಿದುಕೊಂಡು ಬಂದ ಸಂಗ್ಯಾ ಬಾಳ್ಯಾ, ಹಬ್ಬ-ಹರಿದಿನಗಳಲ್ಲಿ ಪ್ರದರ್ಶಿತಗೊಂಡು ಜನಪದ ಮನದಲ್ಲಿ ಮುದ ತುಂಬಿದೆ. ಗ್ರಾಮೀಣ ಬದುಕಿನಲ್ಲಿ ಹಾಸು ಹೊಕ್ಕಾಗಿ ಬೆಳೆದಿದೆ"[೩] ಕಲಬುರ್ಗಿಯವರು "ಖರೇ ಖರೇ ಸಂಗ್ಯಾ-ಬಾಳ್ಯಾ" ಬರೆದು ಹಸ್ತಪ್ರತಿ ರೂಪದಲ್ಲಿರುವಾಗಲೇ ರಂಗ ತಾಲೀಮು ನಡೆಸಿದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಡಾ. ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಖರೇ ಖರೇ ಸಂಗ್ಯಾ-ಬಾಳ್ಯಾ ಅರಳಿಕೊಂಡಾಗ ಕೆಲವರಿಗೆ ಅಚ್ಚರಿ, ಆತಂಕ, ನೀನಾಸಂ, ತಿರುಗಾಟ'ದ ಸಂಗ್ಯಾ ಬಾಳ್ಯಾ ಕಂಡವರಿದ್ದಾರೆ. ಸುಂದರಕೃಷ್ಣ ಅರಸ್ ಅವರ ನಿರ್ದೇಶನದ ಸಂಗ್ಯಾ-ಬಾಳ್ಯ ಸಿನೆಮಾ ನೋಡಿದವರಿದ್ದಾರೆ. ಡಾ. ಚಂದ್ರಶೇಖರ ಕಂಬಾರರ ಸಂಗ್ಯಾ-ಬಾಳ್ಯಾ ಕೃತಿಯ ರಂಗ ಪ್ರಯೋಗಗಳಿಗೆ ಮನಸೋತವರಿದ್ದಾರೆ. ಇವೆಲ್ಲ ಕೃತಿಗಳಿಗೆ

---

೩. ಆರೂರು ಲಕ್ಷ್ಮಣ ಶೇಟ್(ಲೇ) ಸಂಯುಕ್ತ ಕರ್ನಾಟಕ ದಿನಪತ್ರಿಕೆ.

ವಿರುದ್ಧವಾದ ಕೃತಿಯಾಗಿ ಖರೇ ಖರೇ ಸಂಗ್ಯಾ–ಬಾಳ್ಯಾ ರಚಿಸಿದ್ದಾರೆ. ಗಂಗಿಗೆ ಪತಿವೃತೆಯ ಪಟ್ಟಕಟ್ಟಿರುವ ಡಾ. ಎಂ. ಎಂ. ಕಲಬುರ್ಗಿಯವರು ಆ ಮೂಲಕ ಸ್ತ್ರೀಪರ ನಿಲುವು ತಳೆದಿದ್ದಾರೆ ಎಂದು ಆರೂರು ಲಕ್ಷ್ಮಣ ಶೇಟ್‌ರ ಲೇಖನದಲ್ಲಿ ಸ್ಪಷ್ಟವಾಗಿದೆ.

ಡಾ. ಮಲಶೆಟ್ಟಿಯವರ 'ಉತ್ತರ ಕರ್ನಾಟಕದ ಬಯಲಾಟಗಳು' ಎಂಬ ಸಂಶೋಧನಾ ಪ್ರಬಂಧದ ವಿಷಯ ವಸ್ತುವನ್ನು ಸಿದ್ದಲಿಂಗ ದೇಸಾಯಿ ಚರ್ಚಿಸಿದ್ದಾರೆ. ಗಂಗಿಗೂ ಪತ್ತಾರನಿಗೂ ಇರುವ ವೈಯಕ್ತಿಕ ದ್ವೇಷವೇ ಆ ಆಟ ಬರೆಯುದಕ್ಕೆ ಮೂಲ ಕಾರಣ ಎಂದು ಸಂಗ್ಯಾನ ಕೊಲೆಯ ಆರೋಪಕ್ಕೆ ಒಳಗಾಗಿ ಈರ್‍ಯಾ ಗಲ್ಲಿಗೇರುತ್ತಾನೆ. ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿದ ಇರಪಕ್ಷಿ, ಬಸವಂತ ಜೀವ ಉಳಿಸಿಕೊಳ್ಳುತ್ತಾರೆ ಹೀಗೆ ಅನೇಕ ವಿಷಯಗಳನ್ನು ಡಾ. ಎಚ್. ಚಂದ್ರಶೇಖರ ಚರ್ಚಿಸಿದ್ದಾರೆ. ಪ್ರಣಯ, ಹಾದರ, ಪ್ರತಿಷ್ಠೆ, ಸೇಡು ಇವು ಮಾನವ ಸಹಜ ಪ್ರವೃತ್ತಿಗಳು ಎಂದಿದ್ದಾರೆ ಮಲಶೆಟ್ಟಿಯವರು ಆದರೆ ಸಂಗ್ಯಾ–ಬಾಳ್ಯಾ, ಗಂಗಿ ಮಾನವ ಸಹಜ ಪ್ರವೃತ್ತಿಗೆ ಒಳಗಾಗಿ ಹಾದರ ಮಾಡಿಲ್ಲವೆಂದಿದ್ದಾರೆ. ಏಕೆಂದರೆ ಪರಮ್ಮನು ಪ್ರಲೋಭನೆಗೆ ಒಳಗಾಗಿ ಗಂಗಿಯ ಮನಸ್ಸನ್ನು ಚಂಚಲಗೊಳಿಸಿದ್ದಕ್ಕೆ ಗಂಗಿ ಹಾದರದ ಹರಲಿ ಹೊರಬೇಕಾಯಿತು. ಹೀಗೆ ಸಂಗ್ಯಾ–ಬಾಳ್ಯಾ ಕೃತಿಯನ್ನು ಹಾದರದ ಕಥೆಯೆಂದು ಅರ್ಥೈಸುವ ಬದಲು ಪ್ರಲೋಭನೆಗೆ ಒಳಗಾದ ವಿಶ್ವಾಸ ದ್ರೋಹಿಗಳ ಕಥೆ ಎಂದು ಅರ್ಥೈಸಿದ್ದರೆ ಸೂಕ್ತ ಎಂದಿದ್ದಾರೆ ಬಾಚಿಗೊಂಡನ ಹಳ್ಳಿಯ ಹುರಕಡ್ಲಿ ಶಿವಕುಮಾರ.

ಹೀಗೆ ಸಂಗ್ಯಾ–ಬಾಳ್ಯಾ ಪತ್ಯೇತರ ಚರ್ಚೆಗಳು ಪತ್ರಿಕೆಗಳಲ್ಲಿ ಬಂದ ವಿವಾದಾಸ್ಪದ ಚರ್ಚೆಗಳು ಕೂಡಾ ಮುಖ್ಯವೆನಿಸಿವೆ.

## ಅಧ್ಯಾಯ – ೪

# ಚಾರಿತ್ರಿಕ ಸತ್ಯ-ಸಾಹಿತ್ಯಿಕ ತಥ್ಯ

# ಅಧ್ಯಾಯ – ೪

## ಚಾರಿತ್ರಿಕ ಸತ್ಯ–ಸಾಹಿತ್ಯಿಕ ತಥ್ಯ

ಚರಿತ್ರೆಯನ್ನು ಸಾಹಿತ್ಯವಾಗಿ ಪುನರ್ ರೂಪಿಸುವಾಗ ಕೆಲವು ಎಚ್ಚರಿಕೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ಚಾರಿತ್ರಿಕ ಘಟನೆ ಯಥಾವತ್ತಾಗಿ ಸಾಹಿತ್ಯ ಕೃತಿಯಾಗಿ ಮೈದಳೆಯುವಲ್ಲಿ ಅದನ್ನು ತಪ್ಪದೇ ಸಾಧಾರಣೀಕರಣಗೊಳಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಅಪಾಯ ಎದುರಾಗುವ ಸಂಭವ ಹೆಚ್ಚು. ಭರತನ ನಾಟ್ಯ ಶಾಸ್ತ್ರದಲ್ಲಿ ಇದಕ್ಕೊಂದು ಉತ್ತಮ ನಿದರ್ಶನವಿದೆ. ಅಲ್ಲಿ ದೇವತೆಗಳು ಅಮೃತ ಮಂಥನದ ವಸ್ತುವನ್ನಿಟ್ಟುಕೊಂಡು ನಾಟಕವಾಡುತ್ತಾರಂತೆ. ಆ ನಾಟಕ ನೋಡುತ್ತಿದ್ದ ದಾನವರು ಅದನ್ನು ಪ್ರತಿಭಟಿಸುತ್ತಾರೆ. ಇದರ ಅರ್ಥ ಒಂದು ಚಾರಿತ್ರಿಕ ಘಟನೆಯನ್ನು ಸಾಧಾರಣೀಕರಣಗೊಳಿಸದೇ ಸಾಹಿತ್ಯ ಕೃತಿಯಾಗಿ ರೂಪಿಸುವುದು ಸಾಧುವಲ್ಲ ಎಂಬುದು ಇದಕ್ಕೆ ಇನ್ನೊಂದು ಉದಾಹರಣೆ "ಸಂಗ್ಯಾ–ಬಾಳ್ಯಾ".

ಸಂಗ್ಯಾ–ಬಾಳ್ಯಾ ನಾಟಕದ ವಸ್ತು ಉತ್ತರ ಕರ್ನಾಟಕದ ಪ್ರತಿಯೊಬ್ಬರಿಗೂ ಗೊತ್ತು. ಅದು ಬೈಲಹೊಂಗಲದಲ್ಲಿ ಜರುಗಿದ ಒಂದು ಸಣ್ಣ ಘಟನೆ. ಅಲ್ಲಿಯ ಶ್ರೀಮಂತ ಮತ್ತು ವ್ಯಾಪಾರಿ ಮನೆತನದ ವಿವಾಹಿತ ಮಹಿಳೆ ಅನೈತಿಕ ಪ್ರಣಯಕ್ಕೆ ಸೋತು ಎರಡು ಕುಟುಂಬಗಳ ವಿಘಟನೆಗೆ ಕಾರಣವಾಗುವ ಘಟನೆ. ಈ ಘಟನೆಯನ್ನೇ ವಸ್ತುವಾಗಿಟ್ಟುಕೊಂಡು ಆ ಸಣ್ಣಾಟ ರಚಿತಗೊಂಡಿದೆ. ಅಲ್ಲಿಯ ಜನ ಈಗಲೂ ಆ ಘಟನೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುತ್ತಾರೆ. ಗಂಗಾ, ಇರಪಾಕ್ಷಿ, ಬಸವಂತ, ಸಂಗ್ಯಾ, ಬಾಳ್ಯಾ, ಪರಮ್ಮ ಆ ಪರಿಸರದ ಜೀವಂತ ಪಾತ್ರಗಳು. ಡಾ.ಮಲಶೆಟ್ಟಿ ತಮ್ಮ ಒಂದು ಲೇಖನದಲ್ಲಿ ತಿಳಿಸಿದಂತೆ ಗಂಗಾನನ್ನು ಪ್ರತ್ಯಕ್ಷವಾಗಿ ಕಂಡವರು ಇತ್ತೀಚಿನವರೆಗೂ ಇದ್ದರಂತೆ. ಒಟ್ಟಿನಲ್ಲಿ ಅದೊಂದು ಸತ್ಯ ಘಟನೆ ಎಂಬಲ್ಲಿ ಸಂದೇಹವಿಲ್ಲ. ಆದರೆ ಆ ಸತ್ಯ ಘಟನೆಯನ್ನು ಸಣ್ಣಾಟಕ್ಕೆ

ಒಗ್ಗಿಸಿದ ರೀತಿ ಆಕ್ಷೇಪಾರ್ಹ. ಅದರ ಔಚಿತ್ಯ ಮತ್ತು ಸಾರ್ಥಕತೆಯನ್ನು ಪ್ರಶ್ನಿಸಬೇಕಾಗುತ್ತದೆ. ಈ ಚರ್ಚೆಯನ್ನು ಸಾಹಿತ್ಯ ವೇದಿಕೆಗೆ ತಂದವರು ಡಾ. ಎಂ. ಎಂ. ಕಲಬುರ್ಗಿಯವರು. ಅವರ ಖರೇ ಖರೇ ಸಂಗ್ಯಾ ಬಾಳ್ಯಾ ಒಂದು ವಿಶಿಷ್ಟ ಚರ್ಚೆಯನ್ನು ಹುಟ್ಟುಹಾಕಿತು.

ಡಾ. ಎಂ. ಎಂ. ಕಲಬುರ್ಗಿಯವರ 'ಖರೇ ಖರೇ ಸಂಗ್ಯಾ ಬಾಳ್ಯಾ' ಮೂಲ ಸಂಗ್ಯಾ ಬಾಳ್ಯಾ ಆಶಯಕ್ಕೆ ಸಂಪೂರ್ಣ ಭಿನ್ನವಾದುದು. ಅಲ್ಲಿ ಅವರು ಅದರ ಕರ್ತೃ ಪತ್ತಾರ ಮಾಸ್ತರನ ನಾಟಕ ರಚನೆಯ ಔಚಿತ್ಯವನ್ನು ಪ್ರಶ್ನಿಸುತ್ತಾರೆ. ಎಲ್ಲಿ ಮೂಲ ಸಂಗ್ಯಾ ಬಾಳ್ಯಾ ಆಟ ಮುಗಿಯುತ್ತದೆಯೋ ಅಲ್ಲಿಂದಲೇ ಡಾ.ಎಂ. ಎಂ. ಕಲಬುರ್ಗಿಯವರ ನಾಟಕ ಆರಂಭವಾಗುತ್ತದೆ. ಮುದುಕನೊಬ್ಬ ಬಂದು ಮೂಲ ನಾಟಕದ ಆಶಯವನ್ನು ಆಕ್ಷೇಪಿಸುತ್ತಾನೆ. ಅದೊಂದು ಸಾಹಿತ್ಯಕ ದೌಷ್ಟ್ಯವೆಂದು ಆಪಾದಿಸುತ್ತಾನೆ. ಡಾ. ಕಲಬುರ್ಗಿಯವರ ನಾಟಕ ಸಾಹಿತ್ಯಕ ಅಪರಾಧವನ್ನು ಸಾದ್ಯಂತವಾಗಿ ಪರಿಶೀಲಿಸುತ್ತದೆ. ಮೂಲ ಲೇಖಕ ಆ ಕೃತಿ ರಚನೆಯ ಮೂಲಕ ಸಾಹಿತ್ಯಿಕ ತಥ್ಯಕ್ಕೆ ದ್ರೋಹ ಎಸಗಿರುವುದನ್ನು ಅಮೂಲಾಗ್ರವಾಗಿ ವಿಮರ್ಶಿಸುತ್ತದೆ. ಜೊತೆಗೆ ವಿಮರ್ಶಾವಲಯದಲ್ಲಿ ಹೊಸದೊಂದು ಚಿಂತನೆಯನ್ನು ಆರಂಭಿಸುತ್ತದೆ.

ಡಾ. ಕಲಬುರ್ಗಿಯವರ ಪ್ರಶ್ನೆ ಇರುವುದು ವಸ್ತುವಿನಲ್ಲಲ್ಲ. ಅದನ್ನು ಪ್ರಸ್ತುತಪಡಿಸುವ ಉದ್ದೇಶದಲ್ಲಿ ನಾಟಕಕಾರನಿಗೆ ನಿಜವಾದ ಕಳಕಳಿ ಇಲ್ಲದಿರು ವುದನ್ನು ಅವರು ಅನಾವರಣಗೊಳಿಸುತ್ತಾರೆ. ಅದಕ್ಕಾಗಿ ತಮ್ಮದೇ ಒಂದು ಕತೆ ಕಟ್ಟಿ ತಮ್ಮ ನಿಲುವನ್ನು ಮತ್ತೆ ಮತ್ತೆ ಸಮರ್ಥಿಸಿಕೊಳ್ಳುತ್ತಾರೆ. ಡಾ. ಕಲಬುರ್ಗಿಯವರ ನಾಟಕ ಹಲವು ಪ್ರದರ್ಶನಗಳನ್ನು ಕಂಡಿತು. ಸಾಂಸ್ಕೃತಿಕ ವಲಯದಲ್ಲಿ ಬಿಸಿ ಬಿಸಿ ಚರ್ಚೆಯನ್ನು ಸೃಷ್ಟಿಸಿತು. ಅವರು ಆ ನಾಟಕದ ಮುನ್ನುಡಿಯಲ್ಲಿ ಹೇಳಿದ ಕೆಲವು ಮಾತುಗಳು ನಿಜವೆನಿಸುತ್ತವೆ.

ಹೀಗಾಗಿ 'ಸಂಗ್ಯಾ ಬಾಳ್ಯಾ' ನಾಟಕದ ಚಾರಿತ್ರಿಕ ವಸ್ತುವಿನಲ್ಲಿ ಸಾಹಿತ್ಯಿಕ ತಥ್ಯವನ್ನು ಹುಡುಕಲು ಪ್ರೇರಣೆ ನೀಡಿತು.

ಈ ಮೊದಲು ಪ್ರಸ್ತಾಪಿಸಿದಂತೆ ಆ ಆಟದಲ್ಲಿಯ ಎಲ್ಲಾ ಪಾತ್ರಗಳು ಚಾರಿತ್ರಿಕ ವ್ಯಕ್ತಿಗಳು ವಿಶೇಷವಾಗಿ ಲಗಳೇರ ಗಂಗಾ ಯಾವುದೇ ಕ್ಷಣದಲ್ಲಿ ಮಾನಸಿಕ ದೌರ್ಬಲ್ಯಗಳಿಂದಾಗಿ ದಾರಿ ತಪ್ಪಿರಬಹುದು. ಇದು ಈ ರೀತಿ ಘಟನೆಗಳು ಸಮಾಜದಲ್ಲಿ ಸಾಮಾನ್ಯವಾಗಿ ಘಟಿಸುತ್ತವೆ. ಆದರೆ ಅದನ್ನೇ ತೆಗೆದುಕೊಂಡು ನ ಭೂತೋ.....ನ ಭವಿಷ್ಯತಿ........ಎಂಬಂತೆ ವೈಭವೀಕರಿಸಿ ಒಂದು ಹೆಣ್ಣಿನ ಮಾನವನ್ನು ಅಟ್ಟಕ್ಕೆ ತಂದು ಹರಾಜು ಹಾಕುವುದು ಖಂಡಿತ ಸಾಧುವಲ್ಲ. ಆದರೆ ಇದರ ಹಿಂದಿನ ಕತ್ರುವಿನ ಉದ್ದೇಶ ಮಾತ್ರ ತಿಳಿಯದು. ಡಾ.ಕಲಬುರ್ಗಿಯವರು ಕಲ್ಪಿಸಿಕೊಂಡಂತೆ ಪತ್ತಾರ ಮಾಸ್ತರ ಗಂಗಾಳಿಗೆ ಸೋತಿರುವುದು. ಅವಳು ಅವನನ್ನು ನಿರಾಕರಿಸಿದುದು, ಅವಳ ಮೇಲೆ ಸೇಡು ತೀರಿಸಿಕೊಳ್ಳಲು ಆತ ಇಂಥ ಕಲ್ಪನೆ ಹೊಸೆದು ನಾಟಕ ಸೃಷ್ಟಿಸಿದುದು ಚಾರಿತ್ರಿಕ ಸತ್ಯವಾಗಿರಲಿಕ್ಕಿಲ್ಲ. ಇದರಲ್ಲಿಯ ಬಹುಪಾಲು ಅಂಶಗಳು ಕಲಬುರ್ಗಿಯವರ ಕಲ್ಪನೆಗಳು ಆದರೆ ಕಲಬುರ್ಗಿಯವರು ಚರ್ಚೆಗೆ ಎಳೆತರುವ ವಿಷಯ ಮಾತ್ರ ಚಿಂತನಾರ್ಹವಾದುದು. ಮಲ್ಲಿಕಾರ್ಜುನ ಲಠ್ಠೆಯವರೂ ಕೂಡ ಈ ಕೃತಿ ರಚನೆಯ ಹಿಂದಿನ ಕರ್ತೃವಿನ ದುರುದ್ದೇಶದ ಕುರಿತು ಸಂದೇಹ ವ್ಯಕ್ತಪಡಿಸುತ್ತಾರೆ. "ಯಾವುದೋ ಕಾರಣದಿಂದ ಆ ಲಗಳೇರ ಮನೆತನದ ಮೇಲೆ ರಾಯಪ್ಪನದು ಸಿಟ್ಟು. ಅದರ ಸೇಡು ತೀರಿಸಿಕೊಳ್ಳಲು ಈ ಸಂಗ್ಯಾ ಬಾಳ್ಯಾ ಕಥೆಯನ್ನು ರಚಿಸಿದನೆಂದೂ, ಇದು ಸತ್ಯದಿಂದ ಕೂಡಿದ ಘಟನೆಯೆಂದೂ ಜನವದಂತಿ".[೧]

---

೧. ಮಲ್ಲಿಕಾರ್ಜುನ ಶಿ. ಲಠ್ಠೆ (ಲೇ.) ಸಂಗ್ಯಾ ಬಾಳ್ಯಾ ಡಪ್ಪಿನಾಟ ಪುಟ–೧೫

"ಸಂಗ್ಯಾ ಬಾಳ್ಯಾ ಆಟವನ್ನು ಆಡದಂತೆ ಲಗಳೇರ ಮನೆತನದ ಇರಪಕ್ಷಿ, ಬಸವಂತರು ಸರಕಾರದಿಂದ ಆರ್ಡರ ತಂದಿದ್ದರಂತೆ. ಅದೂ ಅಲ್ಲದೇ ಸಂಗ್ಯಾ ಈರ್ಯಾನ ಪಾತ್ರ ಹಾಕುವದರಲ್ಲಿ ಸಹಜವಾಗಿಯೇ ಈರ್ಷೆ ಬೆಳೆದು ನಿಜಕ್ಕೂ ಹಂದರದಲ್ಲಿಯೇ ಕೊಲೆ ಆಗುತ್ತಿದ್ದವಂತೆ. ಆದುದರಿಂದ ಸರಕಾರ ಇದನ್ನು ಆಡದಂತೆ ಬಂದು ಮಾಡಿದ್ದರಂತೆ. ಕೆಲವರುಷಗಳಾದ ತರುವಾಯ ಈ ಆಟ ಇಂದು ಊರೂರಿಗೆ, ಬೀದಿ ಬೀದಿಗೂ ಪ್ರದರ್ಶಿತವಾಗುತ್ತಿದೆ"[೨]

ಪ್ರಪ್ರಥಮವಾಗಿ ಇದನ್ನು ಸಂಪಾದಿಸಿದ ಕಂಬಾರರು ಈ ಮಜಕೂರವನ್ನು ಪ್ರಸ್ತಾಪಿಸದೇ ಬಿಟ್ಟಿಲ್ಲ. "ಈ ಪತ್ತಾರ ಮನೆತನಕ್ಕೂ ಲಗಳೇರ ಮನೆತನಕ್ಕೂ ಬಹಳ ಮೊದಲಿನಿಂದ ವೈರವಿದ್ದು ಲಗಳೇರ ಮನೆಯಲ್ಲಿ ಈ ಘಟನೆ ಜರುಗುವುದೊಂದೇ ತಡ, ಅದನ್ನು ಬಯಲಾಟವಾಗಿ ಬರೆದು ಮೊದಲು ಬೈಲವಾಡದಲ್ಲಿ (ಕೆಲವರ ಪ್ರಕಾರ ಕಿತ್ತೂರ ಬಳಿಯ ಅವರಾದಿಯಲ್ಲಿ) ಆಡಿದರು. ಇದು ಗೊತ್ತಾಗಿ ಫಾಶೀ ಶಿಕ್ಷೆಯಿಂದ ಉಳಿದು ಬಂದ ಇರಪಕ್ಷಿ, ಬಸವಂತ ಇವರಿಬ್ಬರೂ ಪತ್ತಾರ ಮಾಸ್ತರನ ವಿರುದ್ಧ ಮಾನಹಾನಿ ಖಟ್ಲೆ ಹಾಕಿದರು. ಸರಕಾರದವರು ಕೂಡಲೇ ಆಟದ ಪ್ರಯೋಗಗಳನ್ನು ನಿಲ್ಲಿಸಿದರು. ಕವಿ ತನ್ನ ವಿಷಯವಾಗಿ ಹೇಳಿಕೊಳ್ಳದಿರುವುದಕ್ಕೆ ಇದೂ ಕಾರಣವಾಗಿರಲೂಬಹುದು. ಸರಕಾರದವರು ಎಷ್ಟು ನಿರ್ಬಂಧಿಸಿದರೂ ಆಟದ ಪ್ರಚಾರ ಮಾತ್ರ ನಿಲ್ಲಲಿಲ್ಲ"[೩] ಎಂದಿರುವರು. ಈ ಜನವದಂತಿಯನ್ನು ಕೀರ್ತಿನಾಥ ಕುರ್ತಕೋಟಿಯವರು ಒಪ್ಪುವುದಿಲ್ಲ. ಅವರು ಆ ಎಲ್ಲ ಊಹಾಪೋಹಗಳನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತಾರೆ. "ಬೈಲವಾಡದಲ್ಲಿ ನಡೆದಿರುವ ನೈಜವಾದ ಘಟನೆಯೊಂದನ್ನು ಆಧಾರವಾಗಿಟ್ಟುಕೊಂಡು ಈ ನಾಟಕದ ಕಥೆ ಹುಟ್ಟಿ ಬಂದಿದೆ. ಅದೇ ಕಾರಣ

---

೨. ಮಲ್ಲಿಕಾರ್ಜುನ ಶಿ. ಲಠ್ಠೆ (ಲೇ.) ಸಂಗ್ಯಾ ಬಾಳ್ಯಾ ಡಪ್ಪಿನಾಟ ಪುಟ–೧೫

೩. ಡಾ. ಚಂದ್ರಶೇಖರ ಕಂಬಾರ, ಕೀರ್ತಿನಾಥ ಕುರ್ತಕೋಟಿ (ಲೇ.) ಸಂಗ್ಯಾ ಬಾಳ್ಯಾ ಪುಟ – vi

ವಾಗಿ ಈ ನಾಟಕ ಲೋಕಪ್ರಿಯತೆಯನ್ನು ಪಡೆಯಿತು. ಬ್ರಿಟಿಷ್ ಸರಕಾರದ ಅವಕೃಪೆಗೂ ಪಾತ್ರವಾಗಿ ಕೆಲವೊಂದು ಊರುಗಳಲ್ಲಿ ಈ ನಾಟಕದ ಪ್ರದರ್ಶನವೂ ನಿರ್ಬಂಧನೆಗೆ ಒಳಗಾಗಿತ್ತು. ಆದರೆ ಬೈಲವಾಡದಲ್ಲಿ ನಡೆದ ಘಟನೆಗೂ ಈ ನಾಟಕಕ್ಕೂ ಕೇವಲ ಕಾರ್ಯಕಾರಣ ಸಂಬಂಧ ಮಾತ್ರ ಇದೆ. ಈ ನಾಟಕವನ್ನು ಬರೆದು ಸಮಾಜದಲ್ಲಿಯ ಕುಂದುಕೊರತೆಗಳನ್ನು ತೋರಿಸುವ ಉದ್ದೇಶ ಕವಿಯದಲ್ಲ. ಅಂದರೆ ವಾಸ್ತವತೆ ಈ ನಾಟಕದ ಸಾಮಗ್ರಿಯಾಗಿದೆಯೇ ಹೊರತು ಅದು ನಾಟಕದ ಉದ್ದೇಶಕ್ಕೆ ಬೇರೆ ಬಣ್ಣವನ್ನು ಕೊಟ್ಟಿಲ್ಲ. ನಮ್ಮ ಜಾನಪದ ಕಾವ್ಯದಂತೆ ಇದೂ ಕೂಡ ನಿರುದ್ದಿಶ್ಯ ರಸಸೃಷ್ಟಿಯನ್ನುಂಟು ಮಾಡುವ ಒಂದು ಕೃತಿಯಾಗಿದೆ. ಕತೆಯ ಸಾಮಗ್ರಿ ಸಮಕಾಲೀನವಾಗಿ, ಹೊಸದಾಗಿದ್ದರೂ ಅದರ ಅಭಿವ್ಯಕ್ತಿ ಮಾತ್ರ ಹಳೆಯದೆ. ಈ ಕೃತಿಗೂ 'ಕೃಷ್ಣ ಪಾರಿಜಾತ'ದಂತ ಪೌರಾಣಿಕ ರೂಪಕಕ್ಕೂ ಸ್ವರೂಪದಲ್ಲಿ ಯಾವದೇ ವ್ಯತ್ಯಾಸವಿಲ್ಲ"[೪]

'ಸಂಗ್ಯಾಬಾಳ್ಯಾ' ಆಟ ಪ್ರದರ್ಶಿತಗೊಳ್ಳುವಾಗಲೇ ಗಂಗಿ ಬದುಕಿದ್ದಳಂತೆ. ಡಾ. ಮಲಶೆಟ್ಟಿಯವರು ತಮ್ಮ ಮಹಾಪ್ರಬಂಧದಲ್ಲಿ ಇದು ದುರುದ್ದೇಶದಿಂದ ರಚಿತಗೊಂಡ ಕೃತಿಯೆಂದು ಹೇಳಿದ್ದಾರೆ. "ಕವಿ ಈ ಆಟವನ್ನು ರಚಿಸಲು ಕಾರಣವಾದ ಸಂಗತಿಯೊಂದು ಜನಜನಿತವಾಗಿದೆ. ಗಂಗಿಯ ಮೇಲೆ ಕವಿ ಮನಸ್ಸಿಟ್ಟಿದ್ದನಂತೆ. ಅವಳನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿ ವಿಫಲನಾದ. ಇದು ಸಾಧ್ಯವೂ ಇರಬಹುದು. ಗಂಗಿಯ ತವರೂರು ಮತ್ತು ಕವಿಯ ವಾಸಸ್ಥಳ ಎರಡೂ ಬೈಲವಾಡ. ಗಂಗಿ ಅವನ ಕೈಗೆ ದಕ್ಕದೆ ಈರ್‍ಯಾನನ್ನು ಮದುವೆಯಾಗಿ ಬೈಲಹೊಂಗಲದ ಲಗಳೇರ ಮನೆತನ ಸೇರಿದಳು. ಈ ಅಪಮಾನ ಅತೃಪ್ತಿ ಕವಿಯ ಮನಸ್ಸಿನಲ್ಲಿ ಇದ್ದೇ ಇತ್ತು ......"[೫]

---

೪. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ(ಲೇ) ಸಂಗ್ಯಾಬಾಳ್ಯಾ ಪುಟ viii

೫. ಸಿದ್ದಲಿಂಗ ದೇಸಾಯಿ (ಲೇ) ಪ್ರಜಾವಾಣಿ ದಿನಪತ್ರಿಕೆ.

ಯಾವುದೇ ಒಂದು ಕೃತಿ ಅತಿಯಾದ ಜನಪ್ರೀಯತೆ ಸಾಧಿಸಿದಾಗ ಇಂಥ ವದಂತಿಗಳು ಹುಟ್ಟುವುದು ಸಾಮಾನ್ಯ. ಕಾಳಿದಾಸನ ಕುರಿತು ದಂತಕಥೆಗಳು ಹುಟ್ಟಿದಂತೆ. ಅದೇನೇ ಇರಲಿ, ಸಾಹಿತ್ಯ ಕೃತಿಯಾಗಿ ಅದು ಒಂದು ಚಾರಿತ್ರಿಕ ಸತ್ಯವನ್ನು ಹೇಳುವಲ್ಲಿ ಯಶಸ್ಸು ಪಡೆದಿದೆಯೆ ಎಂಬ ಅಂಶವನ್ನು ಪರಾಮರ್ಶಿಸಲೇಬೇಕಾಗುತ್ತದೆ.

ಡಾ.ಕಲಬುರ್ಗಿಯವರು ಮಲಶೆಟ್ಟಿಯವರ ಮಾತುಗಳನ್ನೇ ಆಧಾರ ವಾಗಿಟ್ಟುಕೊಂಡು ಖರೇ ಖರೇ ರೂಪಿಸಿದ್ದಾರೆ. ಇವುಗಳಲ್ಲಿ ಖರೇ ಯಾರದು ಸುಳ್ಳು ಯಾರದು ಎಂದು ನಿಷ್ಕರ್ಷಿಸುವುದು ಸುಲಭವಲ್ಲ. ಆದರೆ ಕಲಬುರ್ಗಿಯವರ ಸಾಮಾಜಿಕ ಕಾಳಜಿಯನ್ನು ಪ್ರಶ್ನಿಸಲಾಗದು. ಡಾ ವ್ಹಿ. ಎಸ್. ಮಾಳಿಯವರು ಹೇಳುವಂತೆ ಡಾ. ಎಂ. ಎಂ. ಕಲಬುರ್ಗಿಯವರು ರಚಿಸಿರುವ ಈ ಕೃತಿ ಪತ್ತಾರ ಮಾಸ್ತರನಿಗೆ ಮುಖಾಮುಖಿಯಾಗಿ ಚಾರಿತ್ರಿಕ ಚರ್ಚೆಗೆ ಆಹ್ವಾನ ನೀಡಿದೆ. "ಸಂಗ್ಯಾಬಾಳ್ಯಾ ಆಟವಾಡಿಸುವ ಭಾಗವತನನ್ನು ಪ್ರೇಕ್ಷಕರ ಮಧ್ಯದಿಂದ ಎದ್ದು ಬರುವ ಮುದುಕನೊಬ್ಬ ಮೊದಲ ದೃಶ್ಯದಲ್ಲಿಯೇ ತಡೆಯುತ್ತಾನೆ. 'ಇದು ಆಟ ಅಲ್ಲ ದುಷ್ಟ ಸಾಹಿತಿಯ ಕೆಟ್ಟ ಕೃತಿ' ಎಂದು ಜರೆದು ಸಾಹಿತ್ಯದ ಹೆಸರಿನೊಳಗ ದುರ್ಜನರನ್ನು ಹೊಗಳೂದು, ಸಜ್ಜನರನ್ನು ತೆಗಳೂದು ಮಾಡಬಾರದು. ಹಾಂಗ ಮಾಡಿದರ ಅದು ಕವಿ ಸೃಷ್ಟಿ ಅಲ್ಲ, ಕಪಿ ಚೇಷ್ಟೆ.. ಅವರ ಬಾಯಿಂದ ಬಂದುದು ಸಾಹಿತ್ಯ ಅಲ್ಲ, –ಉಗುಳು' ಎನ್ನುತ್ತ –

ಮಾನವಂತರು ಮಾರಿ ಎತ್ತಧಾಂಗ
ಬರಿಯ ಬ್ಯಾಡ್ರಿ ತೆಗಳಿ ।
ಮಾನಗೇಡಿಗಳು ಮೆರೆಯುವ ಹಾಂಗ
ಬರಿಯ ಬ್ಯಾಡ್ರಿ ಹೊಗಳಿ ॥

ಎಂದು ಎಚ್ಚರಿಸುವನು. ಮಾನವಂತರ ಮಾನ ಹಾಡು ಮಾಡಿದ ಪತ್ತಾರ ಮಾಸ್ತರನ ಕನಸಿನ ಕಥೆ ಹೇಳಿ. 'ಖರೇ ಖರೇ ಸಂಗ್ಯಾಬಾಳ್ಯಾ' ಸೃಷ್ಟಿಸಿ ಕೊಡುತ್ತಾನೆ. ಪತ್ತಾರ ಮಾಸ್ತರನ ಆಟ ನಿಂತಲ್ಲಿಂದ ಕಲಬುರ್ಗಿಯವರ ಆಟ ಆರಂಭವಾಗುತ್ತದೆ.

ಸತ್ಯ-ನ್ಯಾಯ-ಶೀಲ-ಚಾರಿತ್ರ್ಯಗಳಿಗೆ ಹೆಸರಾದ ಬೈಲಹೊಂಗಲದ ಲಗಳಿ ಮನೆತನದ ಚಿತ್ರದೊಂದಿಗೆ 'ಖರೇ ಖರೇ ಸಂಗ್ಯಾಬಾಳ್ಯಾ' ಸಣ್ಣಾಟದ ದೃಶ್ಯಗಳು ಬಿಚ್ಚಿಕೊಳ್ಳುತ್ತವೆ. ಬಂಗಾರದಂಥ ಗರತಿ ಗಂಗವ್ವನನ್ನು ನೋಡಿ ಮೋಹಗೊಳ್ಳುವ ಪತ್ತಾರ ಮಾಸ್ತರನು ಪರವ್ವನ ಮೂಲಕ ಅವಳನ್ನು ವಶಮಾಡಿಕೊಳ್ಳಲು ತಂತ್ರ ರೂಪಿಸಿದ. ಸಂಗಣ್ಣ ಲಗಳಿ ಈರಪ್ಪನ ಖಾಸಾಗೆಳೆಯ. ಈರಪ್ಪ ಬಳ್ಳಾರಿಗೆ ವ್ಯಾಪಾರಕ್ಕೆ ಹೋಗುವಾಗ ಸಂಗಣ್ಣನಿಗೆ 'ಸಣ್ಣ ಹುಡುಗರು ಇರುವ ನಮ್ಮ ಮನಿ ಕಡೆ ಸ್ವಲ್ಪ ನೆದರ ಇರಲಿ' ಎಂದಿದ್ದ. ಅದಕ್ಕೆ ಸಂಗಣ್ಣ "ನಿನ್ನ ಮನಿ ಬ್ಯಾರೆ ಅಲ್ಲ. ನನ್ನ ಮನಿ ಬ್ಯಾರೆ ಅಲ್ಲ. ಎಂದು ಸತ್ತೆಯಿಂದ ಹೇಳುವ ಮಾತು ಹಲವು ಪ್ರಸಂಗಗಳಲ್ಲಿ ಬೇರೆ ಬೇರೆಯಾಗಿ ಧ್ವನಿಸಿ ರಂಗ ಕೃತಿಯ ಜೀವಾಳವಾಗುತ್ತದೆ.

ಬಂಗಾರದ ಆಶೆಯ ಬಲೆಗೆ ಬಿದ್ದ ಪರವ್ವ ಮಾಸ್ತರನ ಆಟದ ದಾಳವಾದಳು. ತನಗೊಲಿಯದ ಗರತಿ ಗಂಗವ್ವನನ್ನು 'ಹಾದರದ ಗಂಗಿ' ಯಾಗಿಸಿ ಪತ್ತಾರ ಆಟ ರೂಪಿಸಿದ. 'ನಿನ್ನ ಮನಿ ನನ್ನ ಮನಿ ಬ್ಯಾರೆ ಅಲ್ಲ' ಎಂದು ಈರಪ್ಪನಿಗೆ ಹೇಳಿದ್ದ ಸಂಗಣ್ಣ ಗಂಗಿ ಕಥೆಗೆ ಖಳನಾಯಕನಾಗಿ ಅಟ್ಟಕ್ಕೆ ಬಂದ. "ಸುಳ್ಳು ಸುದ್ದಿ ಹುಟ್ಟಸ್ಯಾರ ನನ್ನ ಸುತ್ತ ! ಗಂಗಾ ನನ್ನ ತಂಗಿ ದೇವರ್ಗಿಗೊತ್ತ" ಎಂದು ಸಂಗಣ್ಣ ಮರಡಿ ಬಸವಣ್ಣನ ಆಣೆ ಮಾಡಿ ಹೇಳಿದರೂ ಈರಪ್ಪನಿಗೆ 'ಖರೇ' ಅನ್ನಿಸಲಿಲ್ಲ. ಪತ್ತಾರ ಮಾಸ್ತರ ಅಂಥಾ ಕೈಚಳಕ ಮಾಡಿದ್ದ. ಕಲ್ಪನೆಯನ್ನು ಖರೇಗೊಳಿಸುವ ತಾಕತ್ತು ಅವನಲ್ಲಿದ್ದುದರಿಂದಲೇ ಆತ ಆಟಗಾರನಾಗಿ ಮೆರೆದಿದ್ದ. ನಿರಪರಾಧಿ ಸಂಗಣ್ಣನ ಕೊಲೆಗೆ ಅಸಲು ಕಾರಣ ರಾಯಪ್ಪ ಪತ್ತಾರ ಮಾಸ್ತರನ 'ಸುಳ್ಳು' ಆಟ. ಈರಪ್ಪನ ಮರಣ ದಂಡನೆಗೂ

ಬಸವಂತ, ಇರಪಾಕ್ಷಿ ಕ್ರೈಸ್ತ ಧರ್ಮ ಸ್ವೀಕರಿಸಿ ಊರು ಬಿಟ್ಟು ಹೋಗುವುದಕ್ಕೂ, ಗಂಗಾ ಮಾನಗೇಡಿಯಾಗಿ ಬೀದಿಪಾಲಾಗಿ ಅಲೆಯುವುದಕ್ಕೂ, ಬಾಳ್ಯಾ ಪಾಪ ಪ್ರಜ್ಞೆಯಿಂದ ಬಳಲುವುದಕ್ಕೂ ಪತ್ತಾರನ ವಿಕೃತ ಮನಸ್ಸಿನ ಸುಳ್ಳು ಆಟವೇ ಕಾರಣ. ಅದಕ್ಕಾಗಿಯೇ ಡಾ. ಕಲಬುರ್ಗಿ ಆ ಸುಳ್ಳನ್ನು ಪ್ರತಿಭಟಿಸಲೆಂದೇ ತಮ್ಮ ಆಟಕ್ಕೆ 'ಖರೇ ಖರೇ ಸಂಗ್ಯಾ ಬಾಳ್ಯಾ' ಎಂದಿರುವುದು. "ಜೀವಂತ ಪತ್ತಾರನ ಕಾಟಕ್ಕಿಂತ ಸತ್ತ ಪತ್ತಾರನ ಕಾಟಕ್ಕೆ ಗಂಗಾ ಸತ್ತು ಹೋದಳು. ಸತ್ತ ಪತ್ತಾರನ ಆಟ ಗಂಗಾನನ್ನು ಮಾನಗೇಡಿ ಮಾಡಿ, ಆಟದ ರೂಪದಲ್ಲಿ ಅಟ್ಟಕ್ಕೆ ತಂದು ಅವಳ ವಿಗ್ರಹ ಭಂಜನೆಯನ್ನು ನಿರಂತರವಾಗಿ ಮುಂದುವರೆಸಿತು. ದುಷ್ಟ ಮನಸ್ಸಿನ ಲೆಕ್ಕಣಿಕೆಯ ಅಪಾಯಕಾರಿ ಬಳಕೆಯ ಎಚ್ಚರಿಕೆಯ ಗಂಟೆ 'ಖರೇ ಖರೇ ಸಂಗ್ಯಾ ಬಾಳ್ಯಾ'.

೧೯ ದೃಶ್ಯಗಳಿರುವ ಸಣ್ಣಾಟ ರೂಪದ ಈ ನಾಟಕದ ೧೦ ದೃಶ್ಯಗಳಲ್ಲಿ ಪತ್ತಾರ ಮಾಸ್ತರ ಕಾಣಿಸಿಕೊಳ್ಳುತ್ತಾನೆ. ಇಲ್ಲಿ ಪತ್ತಾರ ಖಳನಾಯಕನಾಗಿ ಗಂಗಾ ದುರಂತನಾಯಕಿಯಾಗಿ ಗಮನ ಸೆಳೆಯುವರು. ಮೂಲ ಆಟದಲ್ಲಿ ಗಂಗಿಯ ಹಾದರದ ವೈಭವೀಕರಣವಿದ್ದರೆ ಇದರಲ್ಲಿ ಆ ವೈಭವೀಕರಣದ ಹಿಂದಿನ ಪತ್ತಾರ ಮಾಸ್ತರನ ವಿಕೃತ ಮನಸ್ಸಿನ ಆವೇಶದ ಚಿತ್ರೀಕರಣವಿದೆ. ಪತ್ತಾರನ ಚಾಪಲ್ಯ ಅಗತ್ಯಕ್ಕಿಂತ ಹೆಚ್ಚು ಅವಸರದಲ್ಲಿ ಪ್ರದರ್ಶಿತಗೊಂಡಿದೆ. ಅದೇನಿದ್ದರೂ ಆಟದ ಯಶಸ್ಸನ್ನು ಅಟ್ಟವೇ ನಿರ್ಧರಿಸಬೇಕು. ಡಾ. ಕಲಬುರ್ಗಿಯವರ ರಂಗಕೃತಿಯನ್ನು 'ಎಳೆದಾಟ-ಕೆದಕಾಟ-ಸುತ್ತಾಟ' ಇತ್ಯಾದಿ ಮಾತುಗಳ ಗತ್ತುಗಳಲ್ಲಿ ತೇಲಿಸದೆ ಕೃತಿ ರಚನೆಯ ಉದ್ದಿಷ್ಟ – ಕೃತಿ ಪ್ರದರ್ಶನದ ಪರಿಣಾಮ, ಚಾರಿತ್ರಿಕ ಸತ್ಯ ಸತ್ಯಗಳ ಪರಿಶೀಲನೆ ಹೊಸ ಸಾಧ್ಯತೆಗಳ ಆಯಾಮ ಕಂಡುಕೊಳ್ಳಲು ವೇದಿಕೆಯಾಗಿ ಬಳಸಿಕೊಳ್ಳುವುದು ಹೆಚ್ಚು ಸಮಂಜಸ. ವಾದ ವಿವಾದವೇ ಆದರೆ ವಿವಾದ ರಾದ್ಧಾಂತವಾಗದೇ ಒಂದು ಸತ್ಯದ ಸಿದ್ಧಾಂತವಾಗಬೇಕು. ಪತ್ತಾರ ಮಾಸ್ತರನಿಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಡಾ. ಕಲಬುರ್ಗಿಯವರಿಗೂ ಬೇಕು. ಡಾ. ಕಲಬುರ್ಗಿಯವರಿಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಪತ್ತಾರ ಮಾಸ್ತರನಿಗೂ

ಬೇಕು ಯಾವುದು ಸುಳ್ಳು ಯಾವುದು ಖರೇ ಪ್ರಾಜ್ಞ ಮನಸ್ಸುಗಳು ನಿರ್ಧರಿಸಬೇಕಿವೆ."[೬] "ಪತ್ತಾರ ಮಾಸ್ತರನ ಸಂಗ್ಯಾಬಾಳ್ಯಾ ಗಂಗಿಯ ಹಾದರದ ಬಯಲಾಟ; ಕಲಬುರ್ಗಿಯವರ 'ಖರೇ ಖರೇ.......... ಪತ್ತಾರ ಮಾಸ್ತರನ ಶಾಬ್ದಿಕ ಹಾದರದ ನಾಟಕ". [೭]

ಅವರ ಆಕ್ಷೇಪವಿರುವುದು ಆಟದ ಮೂಲ ಆಶಯದಲ್ಲಿ. ಒಂದು ಹಾದರದ ವಿಷಯವನ್ನು ಸಾಹಿತ್ಯ ಕೃತಿಯೊಂದರ ವಸ್ತುವಾಗಿಸಿ ಸಮಾಜದಲ್ಲಿ ಹರಿಬಿಡುವುದು ಸಾಹಿತಿಗೆ ಭೂಷಣವಲ್ಲ ಎಂಬುದು ಅವರ ಕಳಕಳಿಯ ಮಾತು. ಅದನ್ನು ಯಾರಾದರೂ ಒಪ್ಪಲೇಬೇಕು. ಒಂದು ಹೆಣ್ಣಿನ ಅಶ್ಲೀಲ ನಡತೆಯನ್ನು ಬಹಿರಂಗವಾಗಿ ಅವಳು ಬದುಕಿದ್ದಾಗಲೇ ನಾಟಕವಾಗಿ ಪ್ರದರ್ಶಿಸುವುದು ಖಂಡಿತವಾಗಿ ಮಾನವೀಯತೆಯಲ್ಲ. ಅದು ಯಾವ ಉದ್ದೇಶವನ್ನು ಸಾಧಿಸುವುದಿಲ್ಲ. ಬದಲಾಗಿ ಆ ವ್ಯಕ್ತಿಯ ತೇಜೋವಧೆಗೆ ಕಾರಣವಾಗುತ್ತದೆ. ಇದರಲ್ಲಿ ನಾವು ಪರಿಭಾವಿಸುವ ಹಲವು ವಿಷಯಗಳಿರುವುದು ಸ್ಪಷ್ಟ.



ಸಂಗ್ಯಾ ಬಾಳ್ಯಾ ಆಟದ ಬಗ್ಗೆ ಕಲಬುರ್ಗಿಯವರ ಹೊಸ ಚರ್ಚೆಯನ್ನು ನೋಡಿದಾಗ ಸಮಾಜದ ಮತ್ತೊಂದು ಮುಖದ ಅನಾವರಣದಂತಿದೆ. ಡಾ. ಕಲಬುರ್ಗಿಯವರ ಕಲ್ಪನೆಯಂತೆ (ಬಹುಶಾ ಅದೇ ಸತ್ಯವಾಗಿಯೇ ಇರಬಹುದು ತಿಳಿದವರಾರು?) ಪತ್ತಾರ ಮಾಸ್ತರ ಗಂಗಾಳಿಗೆ ಆಶೆ ಪಟ್ಟಿರಬಹುದು. ಅವಳನ್ನು ಬಯಸಿರಬಹುದು. ಅವನನ್ನವಳು ನಿರಾಕರಿಸಿದಾಗ ಹುಟ್ಟಿದ ರೋಷದ ಪ್ರತಿಕಾರವೇ 'ಸಂಗ್ಯಾ ಬಾಳ್ಯಾ'.

---

೬. ಡಾ. ವ್ಹಿ.ಎಸ್. ಮಾಳಿ(ಲೇ) ಸ್ಪಂದನ (ವಿಮರ್ಶೆ ಲೇಖಗಳ ಸಂಕಲನ) ಪುಟ-೬೧-೬೨-೬೩
೭. ಡಾ. ವ್ಹಿ.ಎಸ್. ಮಾಳಿ(ಲೇ) ಸ್ಪಂದನ (ವಿಮರ್ಶೆ ಲೇಖನಗಳ ಸಂಕಲನ) ಪುಟ-೬೦

ಡಾ. ಕಲಬುರ್ಗಿಯವರ ವಿಚಾರಧಾರೆಯನ್ನೇ ಇಟ್ಟುಕೊಂಡು ಇದನ್ನು ಮತ್ತೊಂದು ರೀತಿಯಿಂದಲೂ ವಿಶ್ಲೇಷಿಸಬಹುದು. ಆದಿಯಿಂದಲೂ ನಮ್ಮದು ಪುರುಷ ಪ್ರಧಾನ ಸಮಾಜ, ಪ್ರಪಂಚದ ಎಲ್ಲಾ ದೇಶಗಳಲ್ಲೂ ಮಾನವ ಸಮಾಜದ ಕಟ್ಟುಪಾಡು–ನ್ಯಾಯ–ಶಾಸನ ಹಾಗೂ ಆಚಾರ–ವಿಚಾರಗಳು ಪುರುಷ ಪ್ರಧಾನವೇ ಆಗಿವೆ. ಹೆಣ್ಣು ಗಂಡಿನ ಗುಲಾಮಳಾಗಿ ಅವನ ದೌರ್ಜನ್ಯಕ್ಕೆ ಬಲಿಯಾದದ್ದು ಇತಿಹಾಸದುದ್ದಕ್ಕೂ ನೋಡುತ್ತೇವೆ. ಪಾತಿವೃತ್ಯೆ–ಕನ್ಯತ್ವಗಳ ಕಲ್ಪನೆಯಿಂದ ಅವಳನ್ನು ಸಮಾಜ ನಿಯಂತ್ರಿಸುತ್ತಲೇ ಬಂದಿದೆ. ಅವಳಿಂದ ಸೇವೆ–ತ್ಯಾಗ–ಪ್ರೀತಿ–ವಾತ್ಸಲ್ಯಗಳನ್ನು ಪಡೆಯುವ ಸಮಾಜ ಅವಳಿಗೆ ಸ್ವಾಭಿಮಾನ ಇರುವ ಸಾಧ್ಯತೆಗಳನ್ನು ನಿರಾಕರಿಸುತ್ತದೆ. ಅವಳ ಸ್ವಾಭಿಮಾನಕ್ಕೆ ಅಹಂಕಾರವೆಂದೇ ಬಿಂಬಿಸಲಾಗುತ್ತದೆ. ಅವಳ ಇಡೀ ಬದುಕಿನ ವ್ಯವಸ್ಥೆ ಶೋಷಣೆಯಾಗಿದೆ.

ಅವಳ ಬದುಕೆಂದೂ ಸುಲಲಿತವಾಗಿಲ್ಲ. ನಿಂದನೆ–ಉಪೇಕ್ಷೆ–ಕಹಿಗಳನ್ನು ಅನುಭವಿಸುತ್ತಲೇ ತುಳಿಯಲ್ಪಟ್ಟಿದ್ದಾಳೆ. ಪುರುಷನಿಗಿರುವ ಸ್ವಾತಂತ್ರ್ಯ, ಬದುಕುವ ರೀತಿಯನ್ನು ನಮ್ಮ ಸಮಾಜ ಯಾವತ್ತೂ ಹೆಣ್ಣಿಗೆ ಕಲ್ಪಿಸಲೇ ಇಲ್ಲ! ಅವಳನ್ನು ಪುರುಷ ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡೇ ತಾನು ರಾಜಾರೋಷವಾಗಿ ಬದುಕುತ್ತಿದ್ದಾನೆ. ನಮ್ಮ ಸಮಾಜದಲ್ಲಿ ಹಿಂದಿನಿಂದಲೂ ಮಹಿಳೆಗಿರುವ ಕಟ್ಟುಪಾಡುಗಳು ಪುರುಷನಿಗೆ ಅನ್ವಯಿಸಲೇ ಇಲ್ಲ! ಅವನ ಯಾವುದೇ ತಪ್ಪುಗಳಿಗೂ ಸಮಾಜ ತೆರೆದೆದೆಯ ಸ್ವಾಗತ ಕೋರುತ್ತ ಬಂದಿದೆ–ಬರುತ್ತಲಿದೆ............ ಅದೇ ತಪ್ಪನ್ನು ಮಹಿಳೆ ಮಾಡಿದಾಗ ಅವಳನ್ನು ನಿಂದಿಸುತ್ತೆ. ಪುರುಷ ಮಾಡುವ ತಪ್ಪನ್ನು ಹೆಣ್ಣು ಮಾಡಿದರೆ ಅದಕ್ಕೆ ತುಪ್ಪ ಸುರಿಯುತ್ತದೆ. ಇದು ಹೆಣ್ಣಿನ ಶೋಷಣೆಯ ಇನ್ನೊಂದು ಮುಖ. ತಾನು ಬಯಸಿದ ಗಂಗಾ ತನಗೆ ಯಾವಾಗ ಸಿಗಲಿಲ್ಲವೋ ಆಗಲೇ ಅವಳಿಗೆ ಅವಮಾನ ಮಾಡುವ ಉದ್ದೇಶ ಅವನಲ್ಲಿ ಮೂಡಿದೆ. ಇದು ಹೆಣ್ಣಿನ ಶೋಷಣೆಯ ಮತ್ತೊಂದು ಮುಖ.

ಚರಿತ್ರೆ ಮತ್ತು ಸಾಹಿತ್ಯದ ಉದ್ದೇಶಗಳೇ ಭಿನ್ನ. ಚರಿತ್ರೆ ಸತ್ಯದ ನಿರೂಪಣೆ, ಸಾಹಿತ್ಯ ಮಾನವ ಕಲ್ಯಾಣದಾಸೆಯದ ಅಭಿವ್ಯಕ್ತಿ. ಮೊದಲನೇಯದು ವರದಿಯ ಸ್ವರೂಪದ್ದು, ಎರಡನೇಯದು ಕಲಾ ಕೇಂದ್ರಿತವಾದುದು. ಮೊದಲನೇಯದರಲ್ಲಿ ಕಾಲ್ಪನಿಕ ಅಂಶಗಳಿರುವುದಿಲ್ಲ. ಸಾಹಿತ್ಯದ ಮೂಲ ನೆಲೆಯೇ ಕಲ್ಪನೆ. ಈ ಕೆಲವು ಅಂಶಗಳು ಸಾಹಿತ್ಯ ಮತ್ತು ಚರಿತ್ರೆಯನ್ನು ಕಟ್ಟುವಲ್ಲಿ ಸಹಾಯಕವಾಗುತ್ತವೆ. ಒಂದು ಸಾಹಿತ್ಯ ಕೃತಿಯನ್ನು ಚರಿತ್ರೆಯನ್ನು ರಚಿಸಿದಂತೆ ಕಟ್ಟಲಾಗುವುದಿಲ್ಲ. ಅದರ ವಸ್ತು ಚಾರಿತ್ರಿಕವಾಗಿದ್ದರೂ, ಅದನ್ನು ಸಾಹಿತ್ಯಕವಾಗಿ ಬದಲಾಯಿಸಿ ಕೊಳ್ಳುವುದೇ ಮುಖ್ಯವಾದುದು. ಇಲ್ಲದಿದ್ದಲ್ಲಿ ಆ ಕೃತಿ ಸಾಹಿತ್ಯದ ಉದ್ದೇಶಕ್ಕೆ ವ್ಯತಿರಿಕ್ತವೆನಿಸುತ್ತದೆ. 'ಸಂಗ್ಯಾಬಾಳ್ಯಾ' ಆಟದಲ್ಲಿ ಆಗಿರುವುದೂ ಇದೆ. ಅವನು ಅದನ್ನು ಸಾಹಿತ್ಯ ಕೃತಿಯಾಗಿಸುವುದರಲ್ಲಿ ಸೋತಿದ್ದಾನೆ. ಆತ ಕನಿಷ್ಠ ಪಾತ್ರಗಳ ಹೆಸರನ್ನಾದರೂ ಬದಲಾಯಿಸ ಬಹುದಿತ್ತು. ಸ್ಥಳವನ್ನು ಸೂಚಿಸಬಾರದಿತ್ತು. ಇವೆಲ್ಲ ವಿಷಯಗಳನ್ನು ಯೋಚಿಸದೇ ಒಂದು ಚಾರಿತ್ರಿಕ ಘಟನೆಯನ್ನು ಯಥಾವತ್ತಾಗಿ ನಾಟಕವಾಗಿ ಪರಿವರ್ತಿಸಿರುವುದು ಖಂಡಿತ ವಾಗಿಯೂ ಸಮರ್ಥನೀಯವಲ್ಲ. ಅವನು ಚಾರಿತ್ರಿಕ ಸತ್ಯವನ್ನು ಹೇಳಲು ಹೋಗಿ ಸಾಹಿತ್ಯಿಕ ತಥ್ಯವನ್ನು ಮರೆತಿರುವುದು ಸುಸ್ಪಷ್ಟ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಕೆಲವು ಚಾರಿತ್ರಿಕ ಕೃತಿಗಳು ಕಂಡುಬರುತ್ತವೆ. ಪಂಪನ ವಿಕ್ರಮಾರ್ಜುನ ವಿಜಯ, ಪೊನ್ನನ ಭುವನೈಕ ರಾಮಾಭ್ಯುದಯ, ರನ್ನನ ಸಾಹಸಭೀಮ ವಿಜಯ ಮುಂತಾದ ಕಾವ್ಯಗಳು ಚಾರಿತ್ರಿಕ ವಿಷಯಗಳನ್ನು ಒಳಗೊಂಡಿದ್ದರೂ ಇವುಗಳನ್ನು ಚಾರಿತ್ರಿಕ ಕೃತಿಗಳೆಂದು ಕರೆಯುವುದು ಉಚಿತವೆನಿಸುವುದಿಲ್ಲ. ಏಕೆಂದರೆ ಪಂಪ-ಪೊನ್ನ-ರನ್ನ ಸಮಕಾಲೀನ ಚರಿತ್ರೆಯನ್ನು ಪುರಾಣ ಕಥೆಗಳೊಂದಿಗೆ ಸಮೀಕರಿಸಿದ್ದಾರೆ. ಆ ಕೃತಿಗಳಲ್ಲಿ ಚಾರಿತ್ರಿಕ ವಿವರಗಳಿಗಿಂತ ಪೌರಾಣಿಕ ಸಂಗತಿಗಳೇ ವಿಪುಲವಾಗಿರುವುದು ಸ್ಪಷ್ಟ. ನಂಜುಂಡ ಕವಿಯ ಕುಮಾರರಾಮನ ಸಾಂಗತ್ಯ ಕನ್ನಡದ ಮೊದಲ ಚಾರಿತ್ರಿಕ ಕೃತಿ. ಇಂಥ ಹಲವು ಚಾರಿತ್ರಿಕ ಕೃತಿಗಳು

ಕನ್ನಡದಲ್ಲಿವೆ. ಇಂಥ ಚಾರಿತ್ರಿಕ ಕೃತಿಗಳಲ್ಲಿ ಚರಿತ್ರೆ ಮತ್ತು ಸಾಹಿತ್ಯ ಸಮ್ಮಿಲಿತಗೊಂಡಿರುತ್ತವೆ. ಚಾರಿತ್ರಿಕ ಕೃತಿಗಳಿಗೆ ಜವಾಬ್ದಾರಿಗಳಿರುತ್ತವೆ. ಚರಿತ್ರೆಯನ್ನು ತಿರುಚದೇ ಸಮಕಾಲೀನ ಸತ್ಯವನ್ನು ಸಾರ್ವತ್ರಿಕ ಸತ್ಯವಾಗಿಸುವ ಕಾಳಜಿ ಇರುತ್ತದೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ 'ಸಂಗ್ಯಾಬಾಳ್ಯಾ' ಸಣ್ಣಾಟ ಚಾರಿತ್ರಿಕ ನಾಟಕವಲ್ಲ. ಅದರ ವಸ್ತು ಚಾರಿತ್ರಿಕವಾಗಿರಬಹುದು, ಆದರೆ ಅದನ್ನು ರಚಿಸಿದ ಕೃತಿಕಾರ ಆ ವಸ್ತುವನ್ನು ಸಾಮಾಜಿಕವಾಗಿ ರೂಪಿಸಲು ಉದ್ದೇಶಿಸಿದ್ದಾನೆ.

# ಅಧ್ಯಾಯ – ೫

# ಸಂಗ್ಯಾ ಬಾಳ್ಯಾ ಮತ್ತು ಸಾಂಸ್ಕೃತಿಕ ಸಂಘರ್ಷ

## ಅಧ್ಯಾಯ – ೫

# ಸಂಗ್ಯಾ ಬಾಳ್ಯಾ ಮತ್ತು ಸಾಂಸ್ಕೃತಿಕ ಸಂಘರ್ಷ

ಪ್ರಸ್ತುತ ಅಧ್ಯಯನದಲ್ಲಿ ನಮ್ಮ ಗಮನ ಸೆಳೆಯುವ ವಿಷಯವೆಂದರೆ ಅಲ್ಲಿಯ ಸಾಂಸ್ಕೃತಿಕ ಸಂಘರ್ಷ, ಅಲ್ಲಿಯ ಸಾಂಸ್ಕೃತಿಕ ಒಳನೋಟಗಳು ಅಭ್ಯಸನೀಯ. ಅದು ಕೇವಲ ಸಂಗ್ಯಾ ಮತ್ತು ಗಂಗಿಯರ ಹಾದರದ ಕಥೆಯಲ್ಲ, ಅದು ಲಗಳಿ ಮತ್ತು ಮೇಲ್ಮನಿ ಮನೆತನಗಳ ವೈರತ್ವದ ಪ್ರದರ್ಶನವಲ್ಲ, ಅದು ಬಡತನ ಮತ್ತು ಸಿರಿತನಗಳ ಆಖ್ಯಾನವಲ್ಲ, ಅದು ಕಾಮ ಮತ್ತು ಪ್ರೇಮಗಳ ಸಂಘರ್ಷವಲ್ಲ, ಅದು ಪ್ರೀತಿ ಮತ್ತು ಕ್ರೌರ್ಯಗಳ ಕಥನವಲ್ಲ. ಅವೆಲ್ಲವುಗಳನ್ನು ಒಟ್ಟುಗೂಡಿಸಿದಾಗ ಕಾಣುವ ಒಂದು ಸ್ವರೂಪವೇ ಸಂಗ್ಯಾ ಬಾಳ್ಯಾ ಸಣ್ಣಾಟ. ಈ ಹಿಂದಿನ ಅಧ್ಯಾಯಗಳಲ್ಲಿ ಈ ಸಣ್ಣಾಟದ ಚಾರಿತ್ರಿಕ ಸತ್ಯ ಮತ್ತು ಸಾಹಿತ್ಯಿಕ ತಥ್ಯಗಳ ಕುರಿತು ವಿಶ್ಲೇಷಿಸಲು ಪ್ರಯತ್ನಿಸಲಾಗಿದ್ದು ಪ್ರಸ್ತುತ ಅಧ್ಯಾಯದಲ್ಲಿ ಅದರಲ್ಲಿಯ ಸಾಂಸ್ಕೃತಿಕ ಸಂಘರ್ಷದ ಒಳಸುಳಿಗಳನ್ನು ಬಿಚ್ಚಿಡಲು ಪ್ರಯತ್ನಿಸಲಾಗಿದೆ. ಅಲ್ಲಿಯ ಭಾಷೆ, ಛಂದಸ್ಸು, ಸಂಗೀತ, ನೃತ್ಯ ಶೈಲಿ, ಪಾತ್ರಗಳ ಮನೋಭಾವ, ವೇಷಭೂಷಣಗಳು, ನಂಬಿಕೆಗಳು ಇವೆಲ್ಲವುಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದಾಗ ಅಲ್ಲಿಯ ಸಾಂಸ್ಕೃತಿಕ ಸಂಘರ್ಷ ಅನಾವರಣ ಗೊಳ್ಳುತ್ತದೆ.

"ಇಲ್ಲಿ ನಡೆಯುವ ಘಟನೆಗಳನ್ನು ಕುರಿತು ವಿಚಾರಿಸಿದಾಗ ನಾವು ಪರಂಪರಾಗತವಾಗಿ ನಂಬಿ ಒಪ್ಪಿಕೊಂಡು ಬಂದಿರುವ ಸಾಮಾಜಿಕ ನಿಯಮಗಳು ನಮ್ಮ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಮನುಷ್ಯನ ಬದುಕಿನ ನಿಯಮಗಳು ತಮ್ಮ ನಿಲುಮೆಗೆ ಬದ್ಧವಾದ ಸದಾ ಒಂದೇ ತೆರನಾಗಿ ಪಾತ್ರವಾಡುವುದಿಲ್ಲ. ಹೀಗಾಗಿ ಇಲ್ಲಿ ಕೇವಲ ವಿವಾಹಿತ ಸ್ತ್ರೀಯನ್ನು ಮೋಹಿಸಿದ ಎಂಬ ಮಾತ್ರಕ್ಕೆ ಸಂಗ್ಯಾನನ್ನು ನಮ್ಮ ಸಮಾಜ ಅತ್ಯಂತ ಕ್ರೂರತನದಿಂದ ಕೊಲೆ

ಮಾಡಿತು. ಆದರೆ ಮಾನವನ ಬದುಕಿಗೆ ಅತ್ಯವಶ್ಯಕವಾದ ಪ್ರೀತಿ, ಕಾಮದ ವಿರಹವನ್ನು ನಮ್ಮ ಸಮಾಜ ಗಂಭೀರವಾಗಿ ಪರಿಗಣಿಸುವುದಿಲ್ಲ. ನಮ್ಮ ಸಾಮಾಜಿಕ ನಿಯಮಗಳು ಯಾವಾಗಲೂ ಬಲಿಷ್ಠರ ಕೈಗೊಂಬೆಯಾಗಿವೆ ಎಂಬುದನ್ನು ಇಲ್ಲಿ ಕಾಣಬಹುದು.

ಇಲ್ಲಿಯ ಘಟನೆಗಳನ್ನು ಗಮನಿಸಿದಾಗ ಸಮಾಜದ ಸಮಕಾಲೀನ ಸಂದರ್ಭದಲ್ಲಿಯೇ ಸೀಮಿತ ವಲಯದಲ್ಲಿ ನಿತ್ಯವೂ ಕಾಣುವ ಚಿತ್ರಗಳಿಗೆ ಸಾಮಾಜಿಕ ಸ್ವರೂಪ ಕೊಡಲು ಯತ್ನಿಸಲಾಗಿದೆ. ಮನುಷ್ಯ ಸಂಬಂಧದಲ್ಲಿ ಉಂಟಾಗುವ ಏರು ಪೇರುಗಳು ಇದರ ಪರಿಣಾಮವಾದ ಆಘಾತ, ಸಂಕಟಗಳು, ಮನಸ್ಸು ಡೋಲಾಯಮಾನವಾದಾಗ ನಡೆಯುವ ಸೂಕ್ಷ್ಮ ಎಳೆಗಳು ಗೊತ್ತಾದ ದುರಂತದೊಂದಿಗೆ ಈ ರೂಪಕ ಮುಕ್ತಾಯವಾಗುತ್ತದೆ."[೧]

ಈ ಹಿಂದೆ ಚರ್ಚಿಸಿದಂತೆ ಈ ಆಟದ ವಸ್ತು ಚಾರಿತ್ರಿಕವಾಗಿದ್ದರೂ ಆಶಯ ಸಾಮಾಜಿಕವೆಂಬುದು ಸ್ಪಷ್ಟ. ಕೃತಿಕಾರನಿಗೆ ಅಥವಾ ಕತೃವಿಗೆ ಗಂಗಿಯ ನಡತೆಯನ್ನು ಶೀಲದ ಒರೆಗಲ್ಲಿಗೆ ಹಚ್ಚಿ ಅವಳನ್ನು ಪರಂಪರಾಗತ ನಂಬಿಕೆಗಳ ಕಟಕಟೆಗಳ ಚೌಕಟ್ಟಿನಲ್ಲಿ ತಂದು ನಿಲ್ಲಿಸುವುದಿತ್ತು. ಆ ಪಾತ್ರ ಅದೆಷ್ಟು ಅಪಮಾನಗಳನ್ನು ಅನುಭವಿಸಿತ್ತೆಂದರೆ ಆ ಪರಿಸರದಲ್ಲಿ ಅನೇಕ ವರ್ಷಗಳವರೆಗೆ ತಮ್ಮ ಹೆಣ್ಣು ಮಕ್ಕಳಿಗೆ ಜನ ಗಂಗಾ ಎಂದು ನಾಮಕರಣ ಮಾಡದಂತ ಪರಿಸ್ಥಿತಿ ನಿರ್ಮಾಣವಾಗಿತ್ತು.

"ಬೈಲವಾಡದ ಯಾವುದೇ ಸಮುದಾಯದಲ್ಲಿ ಗಂಗಾ, ಗಂಗಿ, ಗಂಗಮ್ಮ, ಗಂಗವ್ವ ಎಂದು ಸ್ತ್ರೀ ವ್ಯಕ್ತಿನಾಮಗಳಿಲ್ಲ. ಸಂಗ್ಯಾಬಾಳ್ಯಾದ ಗಂಗಿಗೂ

---

೧. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪಕದ ಅಧ್ಯಯನ ಪುಟ-೧೨

'ಬೈಲವಾಡದ ಗಂಗಿ' ಎಂದು ಕರೆಯುತ್ತಿದ್ದರು. ಇಂದಿನ ಹೆಣ್ಣು ಮಕ್ಕಳಿಗೆ ಆ ಹೆಸರನ್ನಿಟ್ಟು ಅವರನ್ನು ಬೇರೆ ಊರಿಗೆ ಕೊಟ್ಟರೆ ಅಲ್ಲಿಯೂ 'ಬೈಲವಾಡದ ಗಂಗಿ' ಎಂದು ಸಂಬೋಧನೆ ಮಾಡುತ್ತಾರೆ. ಇದರಿಂದ ನಮಗೂ ನಮ್ಮ ಊರಿಗೆ ಅವಮಾನ ಆದಂತೆ ಆಗುತ್ತದೆ ಎಂಬ ಭಾವನೆ ಇಂದಿಗೂ ಬೈಲವಾಡದ ಎಲ್ಲ ಸಮುದಾಯದ ಜನರಲ್ಲಿ ಬೇರೂರಿಬಿಟ್ಟಿದೆ. ಇದನ್ನು ನೋಡಿದಾಗ ಈ ಸ್ತ್ರೀ ವ್ಯಕ್ತಿನಾಮ ಸಾಮಾಜಿಕ ಸ್ಥಾನಮಾನದ ದೃಷ್ಟಿಯಿಂದ ಸ್ಥಳೀಯ ಜನತೆಯ ಮೇಲೆ ಎಷ್ಟೊಂದು ಋಣಾತ್ಮಕ ಪ್ರಭಾವ ಬೀರಿದೆ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ."[೨] ಮತ್ತೊಂದು ವಿಷಯವೆಂದರೆ ಗಂಗಿಯ ತವರು ಬೈಲವಾಡದ ಖಾನಾಪೂರ ಮನೆತನವೆಂದು ಡಾ. ಎಸ್. ಎಸ್. ಅಂಗಡಿಯವರು ಗುರುತಿಸಿದ್ದಾರೆ. ಅವರು ತಮ್ಮ ಕ್ಷೇತ್ರಕಾರ್ಯದಲ್ಲಿ ಶೋಧಿಸಿದ ಹಲವು ವಿಷಯಗಳು ತುಂಬಾ ಮಹತ್ವದ ಸಂಶೋಧನೆಗಳು.'

"ಬೈಲವಾಡದಲ್ಲಿ ಗಂಗಿಯ ತವರು ಮನೆಯ ಹೆಸರು 'ಖಾನಾಪೂರ' ಎಂದು ತಿಳಿದು ಬಂದಿದೆ. (ಈ ಕುಟುಂಬ ನಾಮದ ಎರಡು ಮನೆತನಗಳು ಇಂದು ಬೈಲವಾಡದಲ್ಲಿವೆ.) ಖಾನಾಪೂರ ಮನೆತನದ ಎದುರುಗಡೆ ಒಂದು ಬೇವಿನ ಮರವಿದೆ. ಅದರ ಪಕ್ಕದಲ್ಲಿ ವಿಸ್ತಾರವಾದ ಕಟ್ಟೆಯೊಂದಿದೆ ಆ ಕಟ್ಟೆಗೆ 'ಸಂಗ್ಯಾನ ಕಟ್ಟೆ' ಯೆಂದು ಕರೆಯುತ್ತಿದ್ದರೆಂದು ಸಂಗ್ಯಾ ಬೈಲವಾಡಕ್ಕೆ ಬಂದಾಗ ಅಲ್ಲಿಯೇ ಕುಳಿತುಕೊಂಡು ಕಾಲಹರಣ ಮಾಡುತ್ತಿದ್ದನೆಂದು ಹಿರಿಯರು ನಮಗೆ ಹೇಳುತ್ತಿದ್ದರೆಂದು ಈಗಿನ ವಯೋವೃದ್ಧರು ನನಗೆ ತಿಳಿಸಿದರು. ಅದನ್ನು ನಾನು ಗಂಭೀರವಾಗಿ ತೆಗೆದುಕೊಂಡೆನು. ಗಂಗಿಯ ತವರು ಮನೆ ಖಾನಾಪೂರ ಎಂಬುದಕ್ಕೆ ಇದೊಂದು ಉತ್ತಮ ಸಾಕ್ಷಿ ದೊರೆತಂತಾಯಿತು. (ಆದರೆ ಇದು

---

೨. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪದ ಅಧ್ಯಯನ ಪುಟ–xvii ರಿಂದ xviii

ಖಾನಾಪೂರ ಮನೆತನದವರು ಗಂಗಿ ನಮ್ಮ ಮನೆತನಕ್ಕೆ ಸೇರಿದವಳಲ್ಲವೆಂದು ಹೇಳುತ್ತಾರೆ.) ಅವಳು ನಮ್ಮ ಮನೆತನದವಳೆಂದರೆ ನಮಗೆ ಅವಮಾನವಾಗುತ್ತದೆ ಎಂಬ ಭಾವನೆ ಅವರಲ್ಲಿದೆ."[೩]

ಡಾ. ಅಂಗಡಿಯವರು ಹೇಳುವಂತೆ ಗಂಗಿ ಮದುವೆ ಆಗುವುದಕ್ಕಿಂತ ಮೊದಲೇ ಅವಳ ರೂಪ, ಯೌವ್ವನಗಳಿಗೆ ಸಂಗ್ಯಾ ಮನಸೋತಿದ್ದನೆಂಬ ಅಂಶ ಕೂಡ ಚಿಂತನೀಯವಾದದ್ದು. "ಗಂಗಿ ಈರ್ಯಾನನ್ನು ಮದುವೆಯಾಗುವುದಕ್ಕಿಂತ ಪೂರ್ವದಲ್ಲಿ ಸಂಗ್ಯಾ ಆಗಾಗ ಬೈಲವಾಡಕ್ಕೆ ಬಂದು ಹೋಗುತ್ತಿದ್ದನು. ಬೈಲವಾಡದಲ್ಲಿ ಸಂಗ್ಯಾನ ಸಂಬಂಧಿಕರಿದ್ದರು. ಅವರು ಬೈಲವಾಡಕ್ಕೆ ಬಂದಾಗ ಜನರೊಂದಿಗೆ ಊರು ಬಿಟ್ಟು ಸ್ವಲ್ಪ ದೂರದಲ್ಲಿರುವ 'ಬೈಲವಾಡ ವರ್ತಿ'ಗೆ ನೀರು ತರಲಿಕ್ಕೆ ಹೋಗುತ್ತಿದ್ದನು. ಆ ವೇಳೆಯಲ್ಲಿ ಗಂಗಿಯೂ ನೀರಿಗೆ ಬರುತ್ತಿದ್ದಳು. ಅವಳ ರೂಪ, ಯೌವ್ವನಕ್ಕೆ ಮನಸೋತು ಸ್ನೇಹ ಬಯಸಲಾರಂಭಿಸಿದನು. ಗಂಗಿ ಮಾತ್ರ ಅದಕ್ಕೆ ಬಯಸದೆ ತಿರಸ್ಕರಿಸುತ್ತಿದ್ದಳು. ಅವಳು ಮುಂದೆ ಬೈಲಹೊಂಗಲದ ಲಗಳೇರ ಈರಪ್ಪರೊಂದಿಗೆ ಮದುವೆಯಾದಳು (ಕೆಲವರ ಪ್ರಕಾರ ಈರ್ಯಾ ಮತ್ತು ಗಂಗಿಯ ನಡುವೆ ಮದುವೆ ಆಗಲಿಲ್ಲ. ಗಂಗಿ ಈರ್ಯಾನ ಶ್ರೀಮಂತಿಕೆಯನ್ನು ನೋಡಿ ಅವನ ಮನೆ ಹೊಕ್ಕಳು ಎಂಬ ವದಂತಿ ಇನ್ನೂ ಆ ಪ್ರದೇಶದಲ್ಲಿದೆ)"[೪]

ಅಂದರೆ ಸಂಗ್ಯಾ ಮತ್ತು ಗಂಗಿ ಪ್ರೇಮಿಗಳಿದ್ದಿರಬಹುದು ಆದರೆ ಅವರು ಯಾವುದೋ ಕಾರಣದಿಂದ ಪರಸ್ಪರ ಮದುವೆಯಾಗುವುದು ಸಾಧ್ಯವಾಗಲಿಲ್ಲ. ಆದರೆ ನಿಸರ್ಗಸಹಜವಾದ ಆ ಪ್ರೇಮ ಅವರಿಬ್ಬರಲ್ಲಿ ಹಾಗೇ ಬೆಳೆಯಿತು. ಅದಕ್ಕೆ ಸಾಮಾಜಿಕ ಮಾನ್ಯತೆ ಮಾತ್ರ ಸಿಗಲಿಲ್ಲ.

---

೩. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪಕದ ಅಧ್ಯಯನ ಪುಟ xvii
೪. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪಕದ ಅಧ್ಯಯನ ಪುಟ–xvi

ಸಂಗ್ಯಾ ಹಾಗೂ ಗಂಗಿಯ ನಡುವಿನ ಸಂಬಂಧವನ್ನು ತಿಳಿದುಕೊಳ್ಳಲು ಆ ಪಾತ್ರಗಳ ಮನಸ್ಥಿತಿಗಳನ್ನು ಅರಿಯಬೇಕಾಗುತ್ತದೆ. "ಗಂಗಾಳ ಪಾತ್ರದ ಬೆಳವಣಿಗೆಯಲ್ಲಿ ಎರಡು ಘಟ್ಟಗಳನ್ನು ಗುರುತಿಸಬಹುದು. ಪೂರ್ವಾರ್ಧದಲ್ಲಿ ಬರುವ ಗಂಗಿ ಮುಗ್ಧ ನಿಷ್ಕಪಟ ಹೆಣ್ಣಾಗಿದ್ದರೆ, ಉತ್ತರಾರ್ಧದಲ್ಲಿ ಪ್ರೌಢ ಉನ್ಮತ್ತ ಪ್ರೇಮಿಯಾಗಿದ್ದಾಳೆ (ಮಲಶೆಟ್ಟಿ) ಗಂಡ ವ್ಯಾಪಾರಕ್ಕೆ ಹೋಗುವಾಗ ಹೋಗಬೇಡ ವೆಂದು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾಳೆ.

ಮೂರಂತಸ್ತಿನ ಮನೆಯೊಳು ಯಾರ‍್ಯಾರೂ ಇಲ್ಲಾ
ನಾರೀ ನಾ ಒಬ್ಬವಳು ಇರುವ ದಿವಸಲ್ಲಾ
ಒಂದೂ ಪಡೆದಿಲ್ಲೊ ಪ್ರಿಯಾ ಕಂದಿಲ್ಲೊ ನನ್ನ ಧ್ಯಾಯ
ಒಂದೇ ಇರುವೆನು ನಾನಾ ಬಂದೀತೋ ಗೋಳಾ ॥

ತನ್ನ ಅಂತರಂಗದ ಆಶೆಯನ್ನು ತಾರುಣ್ಯದ ಬಯಕೆಯನ್ನು ಪ್ರಾಮಾಣಿಕವಾಗಿ ತೋಡಿಕೊಂಡಿದ್ದಾಳೆ. ಅವಳ ಮನಸ್ಸಿನ ಅಂತರಂಗದ ಪರಿಚಯವು ಸಹೃದಯರಿಗಾಗುತ್ತದೆ. ಮರಡಿ ಬಸವಣ್ಣನ ಜಾತ್ರೆಯಲ್ಲಿ ಸಂಗ್ಯಾನು ದಾರಿಕಟ್ಟಿ ಪ್ರೇಮಯಾಚಿಸಿದಾಗ–

ಗಂಡನುಳ್ಳ ಬಾಲ್ಯಾರನಾ । ಬಂದ ಕೇಳುವರೇನ
ಹರಿಸಿಬಿಟ್ಟೀಯಾ ಹೋಗೊ ಒಗತಾನ॥
ದೊರಿ ಈರ‍್ಯಾ । ಅವನನ್ನ ಪ್ರಾಣಕಾಂತಾ
ಮೈದುನವರ । ಇರಪಕ್ಷಿ ಬಸವಂತಾ
ಕಡದ ಹಾಕ್ಯಾರೋ ನಿನ್ನ ಎಲೆ ಕ್ವಾಣಾ
ಮುದಕಾದಿ। ಈಗಾರೆ ಆಗೋ ಜಾಣಾ

ವಿವಾಹಿತ ಸ್ತ್ರೀ ವ್ಯಾಮೋಹ ಸರಿಯಲ್ಲವೆಂದು ಸಂಗ್ಯಾನಿಗೆ ಬುದ್ದಿ ಹೇಳುತ್ತಾಳೆ, ಜಬರಿಸುತ್ತಾಳೆ, ಗರತಿಯಂತೆ ವರ್ತಿಸುತ್ತಾಳೆ. ತನ್ನ ಶೀಲ ರಕ್ಷಣೆಗಾಗಿ ಅವಳ ಅಂತರಂಗದಲ್ಲಿ ನಡೆಯುವ ಹೋರಾಟ ಪರಿಣಾಮಕಾರಿಯಾಗಿದೆ."[೫]

ಆರಂಭದಲ್ಲಿ ಅವನ ಒಡನಾಟಕ್ಕೆ ಪ್ರತಿಭಟಿಸುವ ಅವಳು ಬದುಕಿನ ಮೌಲ್ಯಗಳನ್ನು ಅವನಿಗೆ ತಿಳಿಸುತ್ತ ತನ್ನನ್ನು ತಾನು ಸಂತೈಸಿಕೊಳ್ಳುತ್ತಾಳೆ. ತನ್ನ ಮನಸ್ಸನ್ನು ಉದ್ದೀಪನಗೊಳಿಸಲು ಬಂದ ಬಾಳ್ಯಾನಿಗೆ ಬುದ್ದಿ ಹೇಳುತ್ತಾಳೆ. ಡಾ. ಅಂಗಡಿಯವರು ಹೇಳುವಂತೆ ಇದು ಆ ಪಾತ್ರದ ಬೆಳವಣಿಗೆಯಲ್ಲಿಯ ಮೊದಲ ಘಟ್ಟ. ಅನಂತರ ಅವಳು ಸಂಪೂರ್ಣವಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತಾಳೆ. ಅವನನ್ನು ತನ್ನ ಪ್ರಾಣಪ್ರಿಯನೆಂದು ಆರಾಧಿಸುತ್ತಾಳೆ. 'ಮೊದಲ ಜಾರಿದವಳಂತೆ ಕಾಣುವ ಅವಳು ತದನಂತರ ಪ್ರಣಯದ ಗಾಢ ಸೆಳೆತದಲ್ಲಿ ನಿರ್ಮಲ ಮನಸ್ಸಿನ ಪ್ರೇಯಸಿಯಂತೆ ಬೆಳಗುತ್ತಾಳೆ.' ಅವಳು ಅವನೊಂದಿಗೆ ತನ್ನ ಗಂಡನ ಕೈಯಲ್ಲಿ ಸಿಕ್ಕುಬಿದ್ದಾಗ ತನ್ನ ಗೆಳೆಯನನ್ನು ರಕ್ಷಿಸುವ ಯೋಜನೆಗಳು ಅವಳ ಮನಸ್ಸಿನಲ್ಲಿಯೇ ಅವನ ಸೆಳೆತವನ್ನು ಸಾಕ್ಷಿಕರಿಸುತ್ತವೆ.

"ಅಯ್ಯಯ್ಯೋ ಎನ್ನ ಸಂಗ್ಯಾ ಅಂಜಬ್ಯಾಡಿರಿ ನೀವಾ ।
ಹ್ಯಾಂಗಾರೆ ಮಾಡಿ ನಿನ್ನ ಉಳಿಸುವೆ ಪ್ರಾಣಾ ॥
ಗಚ್ಚಿನ ಬಚ್ಚಲಾಗ ಮುಚ್ಚಿ ಇಡುವೆನಾ ನಿನ್ನಾ ।
ಕಪ್ಪು ಕತ್ತಲದೊಳು ಗಪ್ಪ ಮಾಡುವೆ ನಾನಾ
ಚಾಪೀಯ ಸುರಳ್ಯಾಗ ಮುಚ್ಚಿ ಇಡುವೆನಾ ನಿನ್ನಾ
ಬೆಚ್ಚಗ ಇರೋ ನೀನಾ ಅಂಜಬ್ಯಾಡಿರಿ ನೀವಾ ॥"[೬]

---

೫. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪದ ಅಧ್ಯಯನ ಪುಟ-೪೯-೫೦
೬. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪಕದ ಅಧ್ಯಯನ ಪುಟ-೫೧

ಇಲ್ಲಿ ಮಲಶೆಟ್ಟಿಯವರು ಹೇಳುವ ಮಾತು ಅತ್ಯಂತ ಸಮಂಜಸವೆನಿಸುತ್ತದೆ. ಈ ಸಣ್ಣಾಟದಲ್ಲಿ ಗಂಗಿ ಒಂದು ಅಪೂರ್ವ ಕಲಾಸೃಷ್ಟಿ. ಅದರಷ್ಟು ಕ್ರೀಯಾಶೀಲವಾದ ಪಾತ್ರ ಮತ್ತೊಂದಿಲ್ಲ. ಅದು ಉಳಿದೆಲ್ಲ ಪಾತ್ರಗಳಂತೆ ಏಕಮುಖವಾಗಿಲ್ಲ. ಉಳಿದ ಪಾತ್ರಗಳು ಸರಳ ರೇಖೆಗಳಾಗಿದ್ದರೆ ಇದೊಂದು ವಕ್ರತೆಗಳಿಂದ ಕೂಡಿದ ಸುಂದರ, ಅದ್ಭುತ, ವಿಚಿತ್ರ ಸಹಜವಿನ್ಯಾಸದ ಪಾತ್ರ. ಅದರ ಮುಖ್ಯ ವೈಶಿಷ್ಟ್ಯವೆಂದರೆ ಅದು ನಿಸರ್ಗದಂತೆ ತನ್ನಷ್ಟಕ್ಕೆ ತಾನು ಕಾಲಕ್ಕೆ ತಕ್ಕಂತೆ ಬದಲಾಗುತ್ತದೆ ಮತ್ತು ಬೆಳೆಯುತ್ತದೆ. ನಾವು ಆ ಪಾತ್ರವನ್ನು ಸೃಷ್ಟಿಯ ಜೊತೆಗಿಟ್ಟು ನೋಡುವುದು ಉಚಿತವೆನಿಸುತ್ತದೆ.

ಗಂಗಿಗೆ ಕಾಮನೆಗಳನ್ನು ಗೆಲ್ಲುವ ಶಕ್ತಿ ಇಲ್ಲ. ಅವಳು ಎಲ್ಲವನ್ನು ಸಹಜವಾಗಿ ಅನುಭವಿಸುವ ಪ್ರಕೃತಿ ಅವಳ ಮೇಲೆ ಎರಡೂ ಪರಸ್ಪರ ವಿರುದ್ದ ಪುರುಷ ಶಕ್ತಿಗಳು ದಾಳಿ ಮಾಡುತ್ತವೆ. ಒಂದೆಡೆ ಪ್ರೇಮದ ಸೆಳೆತ ಮತ್ತೊಂದೆಡೆ ಸಾಮಾಜಿಕ ಕಟ್ಟುಪಾಡುಗಳ ಬಂಧನ. "ಅಬಲೆಯಾದ ಹೆಣ್ಣನ್ನು ಕೇವಲ ಪೀಡಿಸುವ, ಅವಮಾನಗೊಳಿಸುವ ಕೆಲಸದಲ್ಲಿ ಅವರು ನಿರತರಾಗಿರುತ್ತಾರೆ. ಗಂಗಿ ದುರಂತಗಳ ನಡುವೆ ಸ್ತ್ರೀ ಶೋಷಣೆಯ ಸಂಕೇತವಾಗಿ ತೋರುವ ಆಕೆ ಕೊನೆಯಲ್ಲಿ ದುರಂತ ನಾಯಕಿಯಾಗಿ ಬೆಳೆದು ನಿಲ್ಲುತ್ತಾಳೆ. ಸ್ತ್ರೀವಾದಿ ದೃಷ್ಠಿಯಿಂದ ಈ ಪಾತ್ರವನ್ನು ಗಮನಿಸುವುದಾದರೆ ಪುರುಷ ಪ್ರಧಾನ ಸಮಾಜ ಒಂದು ಹೆಣ್ಣನ್ನು ನಡೆಸಿಕೊಂಡ ರೀತಿ ಅಮಾನವೀಯವೆನಿಸುತ್ತದೆ". (ದಂಡೆ ೧೯೯೪)"[೭]

ಗಂಗಿಯ ಬದುಕಿನಲ್ಲಿ ಸಂಭವಿಸುವ ಈ ದುರಂತವನ್ನು ಸಾಂಸ್ಕೃತಿಕವಾಗಿ ಚಿಂತನೆಗೆ ಒಡ್ಡಬೇಕು. ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯ

---

೭. ಡಾ. ಎಸ್.ಎಸ್. ಅಂಗಡಿ(ಲೇ) ಸಂಗ್ಯಾ ಬಾಳ್ಯಾ ಗೀತರೂಪದ ಅಧ್ಯಯನ ಸಂಗ್ಯಾ ಬಾಳ್ಯಾ ಸಾಮಾಜಿಕ ಚಿಂತನೆ ಕೆ. ಶಶಿಕಾಂತ ಕವಿಮಾರ್ಗ(ಜನೆವರಿ ಜೂನ ೧೯೯೫) ಪುಟ-೫೧-೫೨.

ವಸ್ತುವೇ ಈ ಅಂತರಂಗದ ಸಂಘರ್ಷ ಅಲ್ಲಿಯ ಪಾತ್ರಗಳು ಸಾಮಾಜಿಕ ಚೌಕಟ್ಟಿನೊಳಗಡೆ ದುರಂತವನ್ನು ಕಂಡರೆ ಇಲ್ಲಿಯ ಪಾತ್ರಗಳು ಸಾಮಾಜಿಕ ಚೌಕಟ್ಟನ್ನು ಮೀರಿ ದುರಂತವನ್ನು ಅನುಭವಿಸುತ್ತವೆ. ಅದರಲ್ಲಿ ಸಂಗ್ಯಾ ಮತ್ತು ಗಂಗಿ ಇಬ್ಬರದೂ ಸಮಪಾಲು ಇದ್ದರೂ ಸಂಗ್ಯಾನ ಲಂಪಟತನಕ್ಕಿಂತ ಗಂಗಿಯ ಅನೈತಿಕತೆಯನ್ನೇ ವೈಭವೀಕರಿಸಿದುದು ಸ್ತ್ರೀ ಸಮಾಜದ ಮೇಲೆ ಎಸಗಲಾದ ಪುರುಷ ದೌರ್ಜನ್ಯವೇ ಸರಿ, ಇದು ಕೂಡಾ ಆ ಕಾಲದ ಒಂದು ಸಾಂಸ್ಕೃತಿಕ ಸಂಘರ್ಷ. ಸಂಗ್ಯಾ ಸತ್ತು ಹೋಗುತ್ತಾನೆ. ಆದರೆ ಗಂಗಿ ಬದುಕಿ ನಿತ್ಯ ನಿತ್ಯವೂ ಸಾಯುತ್ತಾ ಚಿತ್ರ ಹಿಂಸೆ ಅನುಭವಿಸುತ್ತಾಳೆ.

ಈ ನಾಟಕದಲ್ಲಿ ತೆರೆದುಕೊಳ್ಳುವ ಮತ್ತೊಂದು ಸಾಂಸ್ಕೃತಿಕ ಸಂಘರ್ಷವೆಂದರೆ ಪತಿ ಪತ್ನಿಯರ ನಡುವಿನ ಸಾಮಾಜಿಕ ಮಾನ್ಯತೆಯ ಪ್ರಶ್ನೆ. ಈರ್ಯಾ ಒಬ್ಬ ವರ್ತಕ ಬಳ್ಳಾರಿ ಕಡೆಗೆ ವ್ಯಾಪಾರಕ್ಕೆ ಹೋರಟಾಗ ಗಂಗಿ ಅವನಿಗೆ ತನ್ನೊಬ್ಬಳನ್ನೇ ಬಿಟ್ಟು ಹೋಗದಿರುವಂತೆ ಕೇಳುತ್ತಾಳೆ. ಅವಳು ತನ್ನ ಮನದ ಗೋಳು ತೋಡಿಕೊಳ್ಳುತ್ತಾಳೆ.

"ಪ್ರಾಣಕಾಂತಾ ಹಾ । ಹೆಂಗ ಜೀವಿಸಲ್ಯೋ ॥ಪ॥
ಇಂಥಾ ದೊಡ್ಡ ಮಾಲಿನೊಳು । ಬಾಲಿನಾ ಒಬ್ಬವಳು ।
ನಾನು ಇಲ್ಲೆ । ನಾನು ಇಲ್ಲೆ ಹ್ಯಾಂಗ ಜೀವಿಸಲ್ಯೋ॥
ಪ್ರಾಣಕಾಂತಾ ಹಾ । ಹೆಂಗ ಜೀವಿಸಲ್ಯೋ ॥" [೮]

"ಮೂರಂತಸ್ತಿನ ಮನೆಯೊಳು ಯಾರ್ಯಾರೂ ಇಲ್ಲಾ
ನಾರೀ ನಾ ಒಬ್ಬವಳು ಇವರು ದಿವಸಲ್ಲಾ
ಒಂದೂ ಹಡೆದಿಲ್ಲೊ ಪ್ರಿಯಾ ಕಂದಿಲ್ಲೊ ನನ್ನ ಧ್ಯಾಯ
ಒಂದೇ ಇರುವೆನು ನಾನಾ ಬಂದಿತೊ ಗೋಳಾ॥" [೯]

---

೮. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ (ಲೇ) ಸಂಗ್ಯಾ ಬಾಳ್ಯಾ ಪುಟ-೧೯
೯. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ (ಲೇ) ಸಂಗ್ಯಾ ಬಾಳ್ಯಾ ಪುಟ-೨೦

ಈ ಮಾತುಗಳಲ್ಲಿಯ ಅವಳ ತಳಮಳ ಅವನಿಗೆ ಅರ್ಥವೇ ಆಗುವುದಿಲ್ಲ. 'ಬಳ್ಳಾರಿಗಿ ಹೋಗತೇನ। ಮುತ್ತು ರತ್ನ ತರತೇನ" ಎನ್ನುವ ಈರ್ಯಾನಿಗೆ ತನ್ನ ಹೆಂಡತಿಯ ಮನದ ಇಂಗಿತ ತಿಳಿಯಲಿಲ್ಲ. ಅವಳ ಒಟ್ಟು ದುರಂತಕ್ಕೆ ಕಾರಣವಾಗಿರುವುದು ಅವಳ ಮನದೊಳಗಿನ ಈ ಬೇಗುದಿ. ಆತನಿಗೆ ಹಣ ಮುಖ್ಯವಾಗಿತ್ತೇ ವಿನಾ ಹೆಂಡತಿ ಅಲ್ಲ.

"ಗಂಡ ಗಂಟಕ ಹ್ವಾದಾ। ಈರ್ಯಾ ಯಾಪಾರಕ ಹ್ವಾದಾ॥
ಎಂದು ಬರತೇನಂತ ಹೇಳಿ ಹೋಗಲಿಲ್ಲ ನನಗ
ಮೂರಂತಸ್ತದ ಮನಿಯೊಳು। ನಾರಿ ನಾ ಒಬ್ಬವಳು
ಇರುವುದು ಸರಿ ಏನಿದು॥" ೧೦

ಮನೆ ಮೂರಂತಸ್ತಿನದಾಗಿದ್ದರೂ ಅವಳ ಮನದ ಕೊನೆ ತಿಳಿಯುವ ಯೋಗ್ಯತೆ ಅವನಲ್ಲಿರಲಿಲ್ಲ. "ಹೆಂಡತಿಯನ್ನು ಗಾಢವಾಗಿ ಪ್ರೀತಿಸುವ ಅವಳ ಮನಸ್ಸನ್ನು ಅರಿಯುವ ಸೂಕ್ಷ್ಮ ಬುದ್ದಿ ಅವನಿಗಿದ್ದಂತಿಲ್ಲ". ಆತನಿಗೆ ಶ್ರೀಮಂತಿಕೆಯ ಗುಂಗು ನಮ್ಮ ಸಾಮಾಜಿಕ, ಸಾಂಪ್ರದಾಯಿಕ ವ್ಯವಸ್ಥೆ ಪರಸ್ಪರ ವಿರುದ್ಧವಾದ ಎರಡು ಮನಸ್ಸುಗಳನ್ನು ದಾಂಪತ್ಯದ ನೆಪದಲ್ಲಿ ಬೆಸೆಯುವುದು ಅದೆಷ್ಟು ಉಚಿತ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅರ್ಥವಾಗದ ಸ್ವರ್ಗಕ್ಕಿಂತ ಅರ್ಥವಾಗುವ ನರಕ ಲೇಸು. ಇಲ್ಲಿ ಆಗಿರುವುದು ಕೂಡ ಅದೇ....... ಅವಳಿಗೆ ಸಂಪತ್ತು ಬೇಕಾಗಿರಲಿಲ್ಲ. ಪ್ರೀತಿ ಬೇಕಿತ್ತು. ಇವನಿಗೆ ಪ್ರೀತಿ ಬೇಕಿರಲಿಲ್ಲ. ಸಂಪತ್ತು ಬೇಕಿತ್ತು. ಇದೊಂದು ಪ್ರೀತಿ ಮತ್ತು ಸಂಪತ್ತು ಗಳ ನಡುವಿನ ಸಂಘರ್ಷ. ದುರ್ದೈವವೆಂದರೆ ಈ ಸಂಘರ್ಷದಲ್ಲಿ ಪ್ರೀತಿ ಸೋಲುತ್ತದೆ. ಹಣ ಗೆಲ್ಲುತ್ತದೆ. ಆದರೆ ಈ ಹಣದ ಮದವೇ ಒಂದು ಪ್ರತಿಷ್ಟಿತ ಮನೆತನದ ಉದ್ವಸ್ಥಕ್ಕೆ ಕಾರಣವಾಗುತ್ತದೆ.

---

೧೦. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ (ಲೇ) ಸಂಗ್ಯಾ ಬಾಳ್ಯಾ ಪುಟ-೨೧

ಈ ಶ್ರೀಮಂತಿಕೆಯ ಚೆಲ್ಲಾಟ ಇಲ್ಲಿಗೆ ನಿಲ್ಲುವುದಿಲ್ಲ. ಅದು ಬಡತನ ದೊಂದಿಗೆಯೂ ಆಟವಾಡುತ್ತದೆ. ಆ ಬಡತನವನ್ನು ಬಾಳ್ಯಾ ಪ್ರತಿನಿಧಿಸುತ್ತಾನೆ. ಸಾಹುಕಾರ ಸಂಗ್ಯಾ ತನ್ನ ಗೆಳೆಯ ಬಾಳ್ಯಾನನ್ನು ಹುಡುಕುತ್ತಾ ಬಂದಾಗ ಆತ ಅವನನ್ನು ಎಲ್ಲಿಗೆ ಹೋಗಿದ್ದೆ ಎಂದು ಕೇಳುತ್ತಾನೆ. ಆತ ಸಂಗ್ಯಾನಿಗೆ ಕೊಡುವಂತ ಉತ್ತರ ಮಾರ್ಮಿಕವಾದದ್ದು.

"ಬಡವಪ್ಪಾ ಸಂಗ್ಯಾ ನಾನು ಹೋಗಿನ್ಯೊ ಹ್ವಾರೇಕ
ಮಕ್ಕಾಳ ಭಾಳಾ ಜಲಮತಿ ಗೋಳಾ
ಬಡವಪ್ಪಾ ಸಂಗ್ಯಾ ನಾನು ಹೋಗಿನ್ಯೊ ಹ್ವಾರೇಕ
ಬೀಸಾಕ ಜ್ವಾಳಿಲ್ಲಾ ತಿನ್ನಾಕ ಕೂಳಿಲ್ಲಾ
ಬಡವಪ್ಪಾ ಸಂಗ್ಯಾ ನಾನು ಹೋಗಿನ್ಯೊ ಹ್ವಾರೇಕ॥" [೧೧]

ಆತನಿಗೆ ಬಟ್ಟೆಕೊಡಿಸುವುದಾಗಿ ಹೇಳಿ ಅಂಗಡಿಗೆ ಕರೆದಾಗ ಬಾಳ್ಯಾ ಮತ್ತೇ ತನ್ನ ಬಡತನದ ಕಷ್ಟವನ್ನು ಹೀಗೆ ತೋಡಿಕೊಳ್ಳುತ್ತಾನೆ.

"ಒಲ್ಲಿನ್ಹೋಗೊ ಸಂಗ್ಯಾ ನಾನು ಪ್ಯಾಟ್ಯಾಗ
ಮಾರವಾಡೆರಂಗಡ್ಯಾಗ
ಗಟ್ಟಿ ಅರಿವಿ ಇಲ್ಲೊ ಎನ್ನ ಮೈಯ ಮ್ಯಾಗಾ॥

ಕಾಣತೀದಿ ಸಾವಕಾರ ಮಗನ್ಹಂಗ।
ಥೇಟ ಕುಬೇರನ್ಹಾಂಗ।
ಬೆನ್ನ ಹತ್ತಿ ಬರಲೆಪ್ಪ ನಾ ಹೆಂಗ॥

ಕಡೆ ತೋಡೆ ಇಟ್ಟುದಿ ಕೈಯಾಗ॥
ಊರ ಧನೇರಂಗಾ।
ಬಡವ ನಾ ಬರಲಾರೆನೊ ಹಿಂಗಾ॥" [೧೨]

---

೧೧. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ (ಲೇ) ಸಂಗ್ಯಾ ಬಾಳ್ಯಾ ಪುಟ-೮
೧೨. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ (ಲೇ) ಸಂಗ್ಯಾ ಬಾಳ್ಯಾ ಪುಟ-೯

ಈ ಬಡತನದ ಗೋಳು ಇಷ್ಟಕ್ಕೆ ಮುಗಿಯುವುದಿಲ್ಲ. ಸಂಗ್ಯಾ ದುಡ್ಡು ತರಲು ಬಾಳ್ಯಾನನ್ನು ಅಂಗಡಿಯಲ್ಲಿ ಬಿಟ್ಟು ಮನೆಗೆ ಹೋದಾಗ ಆ ಮಾರವಾಡಿ ಬಾಳ್ಯಾನನ್ನು ತನ್ನ ಅಂಗಡಿಯಲ್ಲಿ ಒತ್ತೇ ಇಟ್ಟುಕೊಳ್ಳುತ್ತಾನೆ.

"ಬಾಸಿ ಕೊಟ್ಟ ಕುಣಿಸಿ ಹ್ವಾದೊ ಸಂಗ್ಯಾ ನನಗ
ಮಾರವಾಡಿ ಅಂಗಡ್ಯಾಗ
ಬಡದ ಬಡವನ ಅಬ್ರು ತಗೊಂದ್ರೊ ಹೀಂಗ॥
ರೂಪ್ಯಾ ತರ್ತೇನಂತ ಹ್ವಾದೊ ಸಂಗ್ಯಾ ಬೇಗ
ಕೇಳಲಿಲ್ಲೊ ನನಗ॥
ಬಡದ ಬಡವನ ಅಬ್ರು ತಗೊಂದ್ರೊ ಹೀಂಗ॥" ೧೩

ಸಂಗ್ಯಾನಿಂದ ಉಪಕೃತನಾದ ಬಾಳ್ಯಾ ಗಂಗಿಗೆ ಮನಸೋತ ತನ್ನ ಗೆಳೆಯನಿಗೆ ಪರಸ್ತ್ರೀ ಸಂಗ ಒಳ್ಳೆಯದಲ್ಲವೆಂದು ಬುದ್ದಿ ಹೇಳುತ್ತಾನೆ. ಅವಳ ಮನೆಗೆ ಹೋಗಿ ತನಗೆ ಅವಳು ಒಲಿಯುವಂತೆ ಕೇಳಬೇಕು ಎಂದು ಹೇಳಿದಾಗ ನಿರಾಕರಿಸುತ್ತಾನೆ.

"ಸಂಗಪ್ಪಣ್ಣಾ। ಆಗದೊ ಎನ್ನ ಕೈಲೆ ॥ಪ॥
ಕೆಟ್ಟವರ ಮನಿತಾನ
ಕೊಟ್ಟಿ ಸೂಳಿ ಮಕ್ಕಳಾ
ಕಡದ ಹಾಕ್ಯಾರೊ ನನ್ನ
ಬಡವಪ್ಪ ಬಾಳ್ಯಾ ನಾನಾ। ಆಗದೊ ಎನ್ನ ಕೈಲೆ॥

---

೧೩. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ (ಲೇ) ಸಂಗ್ಯಾ ಬಾಳ್ಯಾ ಪುಟ–೧೨

ಹೊಂಗಲದೂರೊಳಗ
ಬೆಳೆದ ಹುಡುಗ ನಾನಾ
ಆಗದೊ ಎನ್ನ ಕೈಲಿ
ಹಿಂತಾ ಕುಂಟಲತಾನ। ಆಗದೊ ಎನ್ನ ಕೈಲೆ॥" [೧೪]

ಆತ ಉಪಕಾರದ ಹಂಗಿಗೆ ಕಟ್ಟುಬಿದ್ದು ಗಂಗಿಯ ಮನೆಗೆ ಹೋಗುತ್ತಾನೆ. ಸಂಗ್ಯಾನಿಗೆ ಒಲಿಯುವಂತೆ ಕೇಳುತ್ತಾನೆ. ಅವಳಿಂದ ಅವಮಾನಿತನಾಗುತ್ತಾನೆ.

"ಯಾವ ತಾಯಿ । ಯಾವ ತಾಯಿ ಹಡದಾಳೊ ಬಾಳ್ಯಾ ನಿನ್ನ
ಮೀಸಿ ಹೊತ್ತ । ಗಂಡಸಾಗಿ ಮಾಡತಿ ಕುಂಟಲತಾನಾ ॥
ಅಜ್ಜ ಮುತ್ಯಾ । ಅಜ್ಜ ಮುತ್ಯಾ ಕಲಿಸಿದರೇನೊ ಹಿಂತಾ ಬುದ್ಧಿ
ತಂದಿ ತಾಯಿ । ತಂದಿ ತಾಯಿ ಕಲಿಸಿದರೇನೊ ಹಿಂತಾ ನಡತಿ ॥
ಹೆಂತಾ ಕೆಲಸ । ಹೆಂತಾ ಕೆಲಸ ಕಲತ್ಯೊ ಬಾಳ್ಯಾ ನೀನಾ
ಕುಂಟಲತನ । ಕುಂಟಲತನ ಮಾಡೋದು ಬಲು ಹೀನಾ ॥
ಕೇಳುವರೇನೊ । ಕೇಳುವರೇನೊ ಗಂಡುಳ್ಳ ಬಾಲ್ಯಾರನಾ
ಹರಿಸಿಬಿಟ್ಟಿ । ಹರಿಸಿಬಿಟ್ಟಿ ಹೋಗೋ ಒಗತಾನಾ ॥" [೧೫]

ಬಾಳ್ಯಾ ದಟ್ಟ ಬಡತನವನ್ನು ಸಂಕೇತಿಸುತ್ತಾನೆ. ಆತ ಕೊನೆಯಲ್ಲಿ ತನ್ನ ಜೀವದ ಗೆಳೆಯನನ್ನೇ ಸಾವಿನ ದವಡೆಗೆ ಇಕ್ಕಿದಾಗ ಅವನ ಪ್ರಾಮಾಣಿಕತೆಯ ಮೇಲೆ ಸಂದೇಹ ಮೂಡುವುದು ಸಹಜ. ಡಾ. ಎಸ್. ಎಸ್. ಅಂಗಡಿಯವರು ಹೇಳುವಂತೆ "ಬಾಳ್ಯಾ ಬಡವನಾದರೂ ಪ್ರಾಮಾಣಿಕನಲ್ಲ ಸ್ವಾರ್ಥಕ್ಕಾಗಿ ಕುಂಟಲತನ ಮಾಡುತ್ತಾನೆ. ಈರ್ಯಾ ಹೊಲಮನೆ ಕೊಡುವೆನೆಂದಾಗ ಆಸೆಗಾಗಿ ಒಡನಾಡಿಯನ್ನು ಮೃತ್ಯುವಿನ ಬಾಯಿಗೆ ತುರುಕಿದ ಮಹಾ ಮಿತ್ರದ್ರೋಹಿ !

---

೧೪. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ(ಲೇ) ಸಂಗ್ಯಾ ಬಾಳ್ಯಾ ಪುಟ-೩೬

೧೫. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ(ಲೇ) ಸಂಗ್ಯಾ ಬಾಳ್ಯಾ ಪುಟ-೪೧

ಇಸವಾಸ ಗೆಳೆತಾನ
ಗೋಣ ಕೊಯ್ದೊ ಬಾಳಣ್ಣ
ಇಸವಾಸ ಕೈಕೊಟ್ಟಿ
ಭಾಳ ನಂಬೀನ್ಯೊ ಬಾಳ್ಯಾ" [೧೬]

ಆತ ಮನಸ್ಸು ಮಾಡಿದರೆ ತನ್ನ ಗೆಳೆಯನನ್ನು ಉಳಿಸಿಕೊಳ್ಳಬಹುದಿತ್ತು. ಆದರೆ ಹಣದ ಆಸೆ ಆತನ ಸ್ನೇಹ, ಪ್ರಾಮಾಣಿಕತೆ, ವಿಶ್ವಾಸಗಳನ್ನು ಅಪಹರಿಸುತ್ತದೆ. ಒಂದೆಡೆ ಗೆಳೆಯ, ಇನ್ನೊಂದೆಡೆ ಹಣ.

"ತಾ ಅಂತಿ ಸಂಗ್ಯಾನ ಕೈಯಾಗ
ಹ್ಯಾಂಗ ತರಲ್ಯೊ ಈಗ
ಹದಿನಾರೆತ್ತಾ ಹಳವಿನ ಬಂಡಿ ಬ್ಯಾಡೊ ನನಗ ॥

ಜಳಕ ಆಗೋದು ಅವನ ಮನಿಯಾಗ
ಬಿಸಿಬಿಸಿ ನೀರಿನೊಳಗ
ಮಡಿ ಅರಿವಿ ಧೋತರ ಮೈಯ ಮ್ಯಾಗ ॥

ಊಟ ಆಗೋದು ಅವನ ಮನಿಯಾಗ
ಹಾಲು ಹೈನದ ಒಳಗ
ಶಿವಾ ಕೊಟ್ಟ ಮರತಾನಪ್ಪ ಸಂಗ್ಯಾಗ ॥

ಹಿಂತಾದ ಮರ್‍ಯೊ ಹೇಳಬ್ಯಾಡ ನನಗಾ
ಚಿಕ್ಕಂದಿರತ ಗೆಳಿತಾನಾ
ಕೂಡೀದೇವೊ ಹಾಲ ಸಕ್ಕರಿ ಹಾಂಗಾ ॥" [೧೭]

---

೧೬. ಡಾ. ಎಸ್. ಎಸ್. ಅಂಗಡಿ(ಲೇ) ಸಂಗ್ಯಾಬಾಳ್ಯಾ ಗೀತರೂಪಕದ ಅಧ್ಯಯನ ಪುಟ-೪೫
೧೭. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ(ಲೇ) ಸಂಗ್ಯಾ ಬಾಳ್ಯಾ ಪುಟ-೮೨

'ನೂರಾರು ರೂಪಾಯಿ, ಮನಿ, ಹೊಲ, ಎತ್ತ ಬಂಡಿ' ಅವನ ಗೆಳತನದ ದಿಕ್ಕು ತಪ್ಪಿಸುತ್ತವೆ. ಇದು ಕೇವಲ ಗೆಳೆತನದ, ವಿಶ್ವಾಸದ, ಪ್ರಾಮಾಣಿಕತೆಯ, ನ್ಯಾಯ, ಅನ್ಯಾಯಗಳ ಪ್ರಶ್ನೆಯಲ್ಲ ಇಲ್ಲಿರುವುದು ಬಡತನ ಸಿರಿತನಗಳ ಸಂಘರ್ಷ. ಆತನ ಪರಿಸ್ಥಿತಿ ಅವನನ್ನು ಆ ಸೆಳೆತಕ್ಕೆ ಎಳೆದೊಯ್ಯುತ್ತವೆ.

ವಾಸ್ತವಿಕವಾಗಿ ಬಡತನಕ್ಕೂ, ಪ್ರಾಮಾಣಿಕತೆಗೂ ಆಗುವುದಿಲ್ಲ. ಬಡತನ ಮನುಷ್ಯನನ್ನು ಸೂತ್ರದ ಗೊಂಬೆಯಂತೆ ಆಡಿಸುತ್ತದೆ. ನಾವು ಎತ್ತರದಲ್ಲಿ ನಿಂತು ಬಡತನವನ್ನು ನೋಡುವುದರಿಂದ ನಮಗೆ ಅದರ ಅರಿವಾಗುವುದಿಲ್ಲ. ಯಾವುದೇ ಪಾತ್ರದ ನಿಜವಾದ ಮೌಲ್ಯಮಾಪನ ಮಾಡಬೇಕಾಗಿದ್ದಲ್ಲಿ ಅದರೊಳಗಡೆ ಹೊಕ್ಕು ನೋಡಬೇಕು. ಆಗ ವಸ್ತು ಸ್ಥಿತಿಯ ಅರಿವು ಮೂಡುತ್ತದೆ. ಈ ನೆಲೆಯಲ್ಲಿ ಆ ಪಾತ್ರವನ್ನು ವಿಶ್ಲೇಷಿಸಿದಾಗ ಅದರಲ್ಲಿ ದೋಷಗಳು ದೊಡ್ಡದಾಗಿ ಕಾಣಿಸುವುದಿಲ್ಲ.

ಸಂಗ್ಯಾನ ಕೊಲೆಯ ಸಂದರ್ಭದಲ್ಲಿ ಬಾಳ್ಯಾ ರಂಗದ ಮೇಲೆ ಕಾಣಿಸಿಕೊಳ್ಳವುದೇ ಇಲ್ಲ. ಆತ ಸಿಳ್ಳು ಹಾಕಿ ಸಂಗ್ಯಾನನ್ನು ತಾನು ಕರೆದು ತಂದಿರುವುದಾಗಿ ಸಂಕೇತಿಸಿ ಕಂಟಿಯ ಮರೆಗೆ ಅಡಗಿ ಬಿಡುತ್ತಾನೆ. ಅಲ್ಲಿ ಅವನ ವಿಶ್ವಾಸಘಾತಕತನವನ್ನು ಅಭಿವ್ಯಕ್ತಿಸುವವನು ಸಂಗ್ಯಾ.

> "ಬಾಳ್ಯಾ ಮಾಡಿದ್ಯೊ ಘಾತಾ
> ತಿಳೀಲಿಲ್ಲೊ ಇಂಥಾ ಬೇತಾ
> ಕರತಂದಿ ಎನ್ನ ರಮಿಸಿ
> ತಂದ ಹಾಕಿದಿ ಬಲಿಗಿ
> ಗಂಗಾ ಹೇಳಿದ ಮಾತಾ
> ಕೇಳಲಿಲ್ಲವೊ ನಾನಾ

ಇಸವಾಸ ಗೆಳಿತಾನ
ಗೋಣ ಕೊಯ್ದೊ ಬಾಳಣ್ಣಾ
ಭಾಳ ನಂಬಿನ್ಯೊ ಬಾಳ್ಯಾ
ಇಸವಾಸ ಕೈಕೊಟ್ಟಿ
ಕಂಟಿ ಮರಿಗಿ ಪಂಟ ಹೇಳಿ
ಬಂಟರ ಕೈಯಾಗ ಕೊಟ್ಟಿ
ಮೀರಿ ಬಂದೇನು ನಾನಾ
ಬಸವಣ್ಣ ಕಾಯೊ ನನ್ನ
ತಾಯಿಲ್ಲ ತಂದಿಲ್ಲ
ಬಂಧುವಿಲ್ಲ ಬಳಗವಿಲ್ಲ" [೧೮]

ಈ ಸಣ್ಣಾಟದಲ್ಲಿಯ ನೈಸರ್ಗಿಕ, ಸಾಮಾಜಿಕ, ವಾಣಿಜ್ಯಿಕ, ಆರ್ಥಿಕ ಸಂಘರ್ಷಗಳಿರುವಂತೆ ಆಟದ ಕೊನೆಯಲ್ಲಿ ಬರುವ ಧಾರ್ಮಿಕ ಸಂಘರ್ಷ ಕೂಡ ಅತ್ಯಂತ ಮುಖ್ಯವೆನಿಸುತ್ತದೆ. ಅದು ಬ್ರಿಟೀಷ ಭಾರತದ ಆ ಕಾಲದ ಧಾರ್ಮಿಕ ಸೆಣಸಾಟವನ್ನು ಪ್ರತಿಮಿಸುತ್ತದೆ. ಅದನ್ನು ಲಕ್ಷ್ಮೆಯವರು ಸಂಪಾದಿಸಿದ ಡಪ್ಪಿನಾಟದಲ್ಲಿ ಕಾಣುತ್ತೇವೆ. ಡಾ. ಚಂದ್ರಶೇಖರ ಕಂಬಾರ ಹಾಗೂ ಕೀರ್ತಿನಾಥ ಕುರ್ತಕೋಟಿಯವರು ಸಂಪಾದಿಸಿದ "ಸಂಗ್ಯಾ ಬಾಳ್ಯಾ" ಈರ್ಯಾ ಮತ್ತು ಅವನ ಸಹೋದರರು ಸಂಗ್ಯಾನನ್ನು ಕೊಂದು ಪೊಲೀಸ ಠಾಣೆಗೆ ಹೋಗಿ ಶರಣಾಗತರಾಗುವಲ್ಲಿ ಕೊನೆಯಾಗುತ್ತದೆ. ಆದರೆ ಆ ಕೃತಿಯ ಪ್ರಸ್ತಾವಣೆಯಲ್ಲಿ "ಇದರಲ್ಲಿಯ ಈರ್ಯಾ, ಇರಪಕ್ಷಿ, ಬಸವಂತ ಇವರಿಗೆ ಖೂನಿ ಮಾಡಿದ್ದಕ್ಕಾಗಿ ಫಾಶೀ ಶಿಕ್ಷೆಯಾಗಿತ್ತು. ಇರಪಕ್ಷಿ, ಬಸವಂತ ಇಬ್ಬರೂ ಕ್ರಿಶ್ಚಿಯನ್ನರಾಗಿ ಫಾಶೀ ಶಿಕ್ಷೆಯಿಂದ ತಪ್ಪಿಸಿಕೊಂಡರು. ಈರ್ಯಾ ಮಾತ್ರ ಜೀವ ತೆರಲೇಬೇಕಾಯಿತು". [೧೯]

---

೧೮. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ(ಲೇ) ಸಂಗ್ಯಾ ಬಾಳ್ಯಾ ಪುಟ-೯೮
೧೯. ಡಾ. ಚಂದ್ರಶೇಖರ ಕಂಬಾರ ಮತ್ತು ಕೀರ್ತಿನಾಥ ಕುರ್ತಕೋಟಿ(ಲೇ) ಸಂಗ್ಯಾ ಬಾಳ್ಯಾ ಪುಟ-i

ಇದು ಚಿಂತನಾರ್ಹ ವಿಚಾರ. ಈ ಆಟದ ಕಾಲಾವಧಿ ೧೮೬೦ ರಿಂದ ೧೯೫೦. ಅಂದರೆ ಸ್ವಾತಂತ್ರ್ಯದ ಮೊದಲ ೧೦೦ ವರ್ಷಗಳ ಕಾಲ. ಬ್ರಿಟೀಷ ಆಡಳಿತ ವೈಖರ್ಯದ ಮೇಲೆಯೂ ಈ ಆಟ ಬೆಳಕು ಚೆಲ್ಲುತ್ತದೆ. ಕೊಲೆಯಂಥ ಗಂಭೀರ ದುಷ್ಕೃತ್ಯವನ್ನು ಎಸಗಿದರೂ ಕ್ರಿಶ್ಚಿಯನ್ನ ಧರ್ಮಕ್ಕೆ ಮತಾಂತರ ಹೊಂದಿದವರು ಶಿಕ್ಷೆಯಿಂದ ವಿನಾಯಿತಿ ಪಡೆಯುತ್ತಿದ್ದುದು ಗಂಭೀರ ವಿಷಯ. ಅಂದರೆ ನ್ಯಾಯ ಕೂಡಾ ಧರ್ಮವನ್ನು ಅವಲಂಬಿಸಿತ್ತು. ಈರ್ಯಾ, ಇರಪಕ್ಷಿ, ಬಸವಂತ ಮೂವರೂ ಕೊಲೆಗಡುಕರು. ಆದರೆ ಕ್ರಿಶ್ಚಿಯನ್ ಧರ್ಮ ಸ್ವೀಕರಿಸಿ ಇರಪಕ್ಷಿ ಮತ್ತು ಬಸವಂತ ಮರಣದಂಡನೆಯಿಂದ ತಪ್ಪಿಸಿಕೊಳ್ಳುತ್ತಾರೆ. ಕ್ರಿಶ್ಚಿಯನ್ನನಾಗಲು ನಿರಾಕರಿಸಿ ಈರ್ಯಾ ಪ್ರಾಣವನ್ನು ಕಳೆದುಕೊಳ್ಳುತ್ತಾನೆ. ಇದು ಬ್ರಿಟೀಷರು ತಮ್ಮ ಆಡಳಿತವನ್ನು, ಜೊತೆಗೆ ನ್ಯಾಯ ಪದ್ಧತಿಯನ್ನು ಧರ್ಮ ಪ್ರಸಾರಕ್ಕೆ ದುರುಪಯೋಗಪಡಿಸಿಕೊಂಡುದುದಕ್ಕೆ ಚಾರಿತ್ರಿಕ ನಿದರ್ಶನ.

ಹೀಗೆ ಸಂಗ್ಯಾ ಬಾಳ್ಯಾ ಸಣ್ಣಾಟ ತನ್ನ ಶೀರ್ಷಿಕೆಯಂತೆ ಹಲವು ದ್ವಂದ್ವಗಳ ತಾತ್ವಿಕ ಸಂಘರ್ಷಗಳನ್ನು ಪ್ರತೀಮಾತ್ಮಕವಾಗಿ ಅಭಿವ್ಯಕ್ತಿಸುವ ಸಶಕ್ತ ಜನಪದ ರಂಗರೂಪ.

## ಅಧ್ಯಾಯ – ೬

# ಸಮಾರೋಪ

[illegible]

[illegible]

# ಅಧ್ಯಾಯ – ೬

# ಸಮಾರೋಪ

ಒಂದು ಕೃತಿ ಲೇಖಕರಿಂದ ಲೇಖಕರಿಗೆ ಭಿನ್ನವಾಗುತ್ತಾ ಸಾಗುತ್ತದೆ. ಹೊಸ ವಿಷಯಗಳತ್ತ ತಿರುವು ಪಡೆಯುತ್ತದೆ. ಹೀಗೆ ತಿರುವನ್ನು ಪಡೆದ ಕೃತಿಯೇ ಸಂಗ್ಯಾಬಾಳ್ಯಾ. ಹಳ್ಳಿಯ ಸೊಗಡಿನಲ್ಲಿ ಹಾಸುಹೊಕ್ಕಾಗಿರುವ ಸಂಗ್ಯಾಬಾಳ್ಯಾ ಸಣ್ಣಾಟ ಕೆಲವು ಕಾಲ ಯಶಸ್ವಿ ಪ್ರದರ್ಶನ ನೀಡಿತು. ಹಳ್ಳಿಗಾಡಿನ ರಂಗವೇದಿಕೆಯ ಮೇಲೆ ಯಶಸ್ಸಿನ ಪತಾಕೆಯನ್ನು ಹಾರಿಸಿದ ಸಣ್ಣಾಟಗಳಲ್ಲಿ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಮಾಜದಲ್ಲಾಗುವ ಘಟನೆಗಳನ್ನು ಗುರುತಿಸಲು ಇದು ನೆರವಾಗುತ್ತದೆ.

ಡಾ. ಎಂ. ಎಂ. ಕಲಬುರ್ಗಿಯವರು ರಚಿಸಿದ 'ಖರೇ ಖರೇ ಸಂಗ್ಯಾಬಾಳ್ಯಾ' ಮತ್ತು ಡಾ. ಚಂದ್ರಶೇಖರ ಕಂಬಾರವರು ಸಂಪಾದಿಸಿದ 'ಸಂಗ್ಯಾಬಾಳ್ಯಾ' ಇವೆರಡು ರಂಗಭೂಮಿಯಲ್ಲಿ ಪರಸ್ಪರ ಮುಖಾಮುಖಿಯಾಗಿ ನಿಂತ ಕೃತಿಗಳಾಗಿವೆ. ನೂರು ನೂರೈವತ್ತು ವರ್ಷಗಳಿಂದ ಜನಪ್ರೀಯತೆಯ ಶಿಖರದಲ್ಲೇ ಇರುವ ಸಂಗ್ಯಾಬಾಳ್ಯಾ ಸಣ್ಣಾಟ ಸತ್ಯ ಮತ್ತು ಸುಳ್ಳಿನ ಚರ್ಚೆಗೆ ವೇದಿಕೆಯಾಗಿದೆ. ನಾಲ್ಕು ವರ್ಷಗಳ ಹಿಂದೆ ಈ ಸಣ್ಣಾಟ ಬಿಸಿ ಬಿಸಿ ಚರ್ಚೆಯ ಕಾವನ್ನು ಎಲ್ಲೆಡೆ ಪಸರಿಸಿತ್ತು.

ಬೈಲಹೊಂಗಲ ಪ್ರದೇಶದಲ್ಲಿ ನಡೆದ ಪ್ರಕರಣವೊಂದಕ್ಕೆ ಬರಹರೂಪ ಕೊಟ್ಟು ಸಂಗ್ಯಾಬಾಳ್ಯಾ ಎಂಬ ಹೆಸರಿನಲ್ಲಿ ರಂಗಭೂಮಿಯ ಚೌಕಟ್ಟಿನೊಳಗೆ ತಂದ ಕೀರ್ತಿ ಡಾ. ಚಂದ್ರಶೇಖರ ಕಂಬಾರರಿಗೆ ಸಲ್ಲುತ್ತದೆ. ಇದು ಹೆಚ್ಚು ಜನಪ್ರೀಯತೆಯನ್ನು ತಂದುಕೊಟ್ಟಿತು. ಇದನ್ನು ಆಧರಿಸಿದ ಪ್ರಯೋಗಗಳು, ಸಣ್ಣಾಟಗಳು ಮತ್ತು ನಾಟಕವಾಗಿ ಪ್ರದರ್ಶನ ಕಂಡು ಜನಜನಿತವಾಗಿವೆ. ಇದರ ವಿಷಯ ವಸ್ತುವಿನ ಚರ್ಚೆಗೆ ಕಾವುಕೊಟ್ಟಿರುವುದು ಡಾ. ಕಲಬುರ್ಗಿಯವರು ಬರೆದ 'ಖರೇ ಖರೇ ಸಂಗ್ಯಾಬಾಳ್ಯಾ'. ಒಂದೇ ವಿಷಯವನ್ನು ಸೃಜನಶೀಲ

ಬರಹಗಾರ ಬೇರೆ ಬೇರೆ ವ್ಯಾಖ್ಯಾನಕ್ಕೆ ಒಳಪಡಿಸಿ ಬರೆಯಲು ಅವಕಾಶವಿದೆ. ಕಲಬುರ್ಗಿಯವರ ಪ್ರಕಾರ ನೂರೈವತ್ತು ವರ್ಷದ ಹಿಂದೆಯೇ ಸುಳ್ಳನ್ನು ಸತ್ಯ ಎಂದು ಬಿಂಬಿಸುವ ಪ್ರಯತ್ನ ನಡೆದಿದೆ. ಆ ಸುಳ್ಳುಗಳೇ ಇಗಲೂ ವಿಜೃಂಭಿಸುತ್ತಿವೆ. ಸತ್ಯಾಸತ್ಯಗಳ ಪರಾಮರ್ಶೆ ಮಾಡಿದರೆ ನಿಜಾಂಶ ತಿಳಿಯುತ್ತದೆ. ಇವರ ಪ್ರಕಾರ ಗಂಗಿ ಗೌರವಸ್ಥ, ಸಂಪ್ರದಾಯಸ್ಥ ಮನೆತನದ ಹೆಣ್ಣು. ಇದರಲ್ಲಿ ಇವಳದು ಯಾವ ತಪ್ಪು ಇಲ್ಲ. ಕಾಲ ಅವಳಿಗೆ ಮಾಡಿದ ಮೋಸದ ಪ್ರತಿಫಲ ಅನುಭವಿಸಿದ್ದಾಳೆ.

ಆದರೆ ಡಾ. ಕಂಬಾರರು ಸಂಪಾದಿಸಿದ ಬೈಲವಾಡ ಪತ್ತಾರ ಬರೆದನೆನ್ನಲಾದ ಕೃತಿಯಲ್ಲಿ ಗಂಗಿ ಜಾರಿದವಳು, ಸಮಯದ ಅವಕಾಶ ಪಡೆದವಳು, ಅನೈತಿಕತೆಯ ಜಾಡಿನಲ್ಲಿ ಸಿಲುಕಿದವಳು. ಪುರುಷ ಸಮಾಜದಲ್ಲಿ ಸ್ತ್ರೀಯ ವೇದನೆಗೆ ಉತ್ತರ ನಿರುತ್ತರವಾಗಿದೆ.

> "ನೀವು ಮಾಡಿದವುಗಳೆಲ್ಲ । ಉಸಿರಾಡಿವೆ ಇಲ್ಲಿ
> ಹಸಿರಾಗಿವೆ । ಬೇರಾಗಿವೆ ಈ ನೆಲದಲ್ಲಿ
> ಶಾಪವಾಗಿವೆ ಸ್ತ್ರೀ ಕುಲಕೆ" [೧]

ಪುರುಷ ಕೇಂದ್ರಿತ ಸಮಾಜದಲ್ಲಿ ಆತನದೇ ಸರ್ವಾಡಳಿತ, ಆತನ ನಿರ್ಣಯವೇ ಕೊನೆಯ ತೀರ್ಪು. ಅವನ ಆಸೆ, ಬಯಕೆ, ಕಾಮನೆಗಳನ್ನೆಲ್ಲ ಸ್ತ್ರೀಯ ಮೇಲೆ ಹೇರಿದ್ದಾನೆ. ಅವೆಲ್ಲವು ಶಾಪವಾಗಿವೆ. ಸ್ತ್ರೀಗೆ ಪುರುಷ ಪ್ರಧಾನ ಸಮಾಜದಲ್ಲಿ ಸ್ವಾತಂತ್ರ್ಯಹೀನ ಸ್ಥಿತಿ ಸ್ತ್ರೀದಾಗಿದೆ. ಇದೇ ಪರಿಸ್ಥಿತಿಯನ್ನು ಗಂಗಿಯೂ ಅನುಭವಿಸಿದ್ದಾಳೆ. ಅವಳ ಉತ್ತರಕ್ಕೆ ಅವಕಾಶವೇ ಕೊಡದೇ ಎಲ್ಲ ನಿರ್ಧಾರಗಳನ್ನು ತೆಗೆದುಕೊಂಡು ಅವಳ ಜೀವನ ನಾಕ ಮಾಡಿದರು. ಅವಳಿಗೆ

---

೧. ಬಾಗ್ಯ (ಲೇ) "ಬಳುವಳಿ" ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ – ಪುಟ – ೬೬.

ಮಾತನಾಡುವ ಅವಕಾಶ ಕೊಟ್ಟಿದ್ದರೆ ಇವತ್ತಿಗೆ ಸಂಗ್ಯಾಬಾಳ್ಯಾದ ಸತ್ಯಾಂಶ ಬೇರೆನೇ ಆಗಿರುತ್ತಿತ್ತೋ ಏನೋ? ಇದರಲ್ಲಿ ಅವಳ ಪ್ರತಿಕ್ರಿಯೆಗೆ ಅವಕಾಶವೇ ಇಲ್ಲ. ಕ್ಷಣ ಹೊತ್ತಿನ ಸಿಟ್ಟಿನ ಸ್ಥಿತಿಯಲ್ಲಾದ ದುರಂತ ಘಟನೆಯಾಗಿದೆ.

೧೮ರ ದಶಕಗಳಲ್ಲಿ ಘಟನೆ ನಡೆದುಹೋದ ನಂತರ ಅದರ ಪ್ರದರ್ಶನ ಆಗುತ್ತಿದ್ದಾಗ ಎರಡು ಮನೆತನಗಳ ಸದಸ್ಯರೇಕೆ ವಿರೋಧ ವ್ಯಕ್ತಪಡಿಸಲಿಲ್ಲ? ಡಾ. ಬಸವರಾಜ ಮಲಶೆಟ್ಟಿಯವರ ಅಭಿಪ್ರಾಯದಂತೆ ೧೯೨೦ರಲ್ಲಿ ಗಂಗಾ ೮೦ ವರ್ಷದ ಮುದುಕಿಯಾಗಿ ಬೈಲಹೊಂಗಲದ ಸಂತೆಗೆ ಬಂದಾಗ ಬಲರಾಮಪ್ಪ ನವರು ನೋಡಿದ್ದರಂತೆ. ಆಗಲೂ ಸಂಗ್ಯಾಬಾಳ್ಯಾ ನಾಟಕ ಪ್ರದರ್ಶನವಾಗುತ್ತಿತ್ತು. ಅದನ್ನು ಗಂಗಾ ವಿರೋಧಿಸಬಹುದಾಗಿತ್ತು. ಆದರೆ ಅವಳ ವಿರೋಧ ಸಮಾಜಕ್ಕೆ ನಗೆಪಾಟಲಾಗುತ್ತಿತ್ತು. ಅವಳ ಕಣ್ಣಮುಂದೆ ತನ್ನದೇ ನಾಟಕ ನಡೆಯುತ್ತಿದ್ದರೂ ಅದನ್ನೆಲ್ಲ ಸಹಿಸಿದ ಮನೋವೇದನೆ ಅದರ ಲೇಖಕನಿಗೆ ಕಿಂಚಿತ್ತು ಅರ್ಥವಾಗದಿರುವುದು ವಿಷಾದನೀಯ ಸಂಗತಿ. ಅವಳ ಮಾನಸಿಕ ಸ್ಥಿತಿ ಆ ಲೇಖಕನಿಗೆ ಅರ್ಥವಾಗಿದ್ದರೆ ಆತ ಖಂಡಿತವಾಗಿಯೂ ಇದನ್ನು ರಚಿಸು ತ್ತಿರಲಿಲ್ಲವೆನಿಸುತ್ತದೆ. ಅದನ್ನೇ ಡಾ. ಕಲಬುರ್ಗಿಯವರು ಶಾಬ್ದಿಕ ಹಲ್ಲೆ ಎಂದು ಕರೆದಿರುವುದು. ಅವರ ಮುಖ್ಯ ನಿಲುವು ಏನೆಂದರೆ ಗಂಗಾನ ಮೇಲೆ ನಡೆದಿರುವ ಅದೊಂದು ಶಾಬ್ದಿಕ ಹಲ್ಲೆ. ಕಲಬುರ್ಗಿಯವರು ಹೇಳುವಂತೆ ಅವಳು ಪತಿವ್ರತೆ ಆಗಿದ್ದಳೋ ಇಲ್ಲವೋ ಎಂಬ ಪ್ರಶ್ನೆ ಮುಖ್ಯವಾಗುವುದಿಲ್ಲ. ಅವಳನ್ನು ಆ ಲೇಖಕ ಮನುಷ್ಯಳನ್ನಾಗಿ ನೋಡಿದ್ದರೆ ಸಾಕಿತ್ತು. ಇಡೀ ವಸ್ತು ಹೊಸ ತಿರುವನ್ನು ಪಡೆಯುತ್ತಿತ್ತು. ಅದಕ್ಕೆ ಕಲಬುರ್ಗಿಯವರು ತಮ್ಮ ನಾಟಕದ ಮುಖಪುಟದ ಮೇಲೆ ಈ ಪದ್ಯವನ್ನು ಮುದ್ರಿಸಿದರು.

"ಕೆಡಸ ಬ್ಯಾಡರಿ ಕಾಗದ ಗರತಿಯ
ಮಿಂಡ ಮಸಿಯ ಕೆಳಗ ।
ತೊಳಿಯ ಬ್ಯಾಡರಿ ವಿಷದ ಲೇಖನಿ
ಕುಡಿವ ನೀರಿನೊಳಗ"

"ಕಟಕಟೆಯಲ್ಲಿ ನಿಲ್ಲಬೇಕಿದೆ ನಾನು । ತತ್ತರಿಸುವ ಕಾಲು
ತುಂಬಿದ ಜನಜಂಗುಳಿಯ ನಡುವೆ
ಸುಯ್ಯನೆ ನಿಟ್ಟುಸಿರು । ತಬ್ಬಲಿಭಾವ । ಹರಕೆಯ ಕುರಿ"[೨]

ಸಮಾಜದ ಕಟಕಟೆಯಲ್ಲಿ ಗಂಗೆ ನಿಲ್ಲುವ ಪರಿಸ್ಥಿತಿ ಸೃಷ್ಟಿಯಾಗಿದೆ. ತಪ್ಪಿಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುವ ಪರಿಸ್ಥಿತಿಯಲ್ಲಿ ನಿಂತು ಜನರ ಆಡುವ ಬಾಯಿಗೆ ಬಲಿಯಾಗಿದ್ದಾಳೆ. ಚರಿತ್ರೆಯಲ್ಲಿ ಲೀನವಾಗಿದ್ದಾಳೆ. ಚರಿತ್ರೆ ಇದ್ದ ವಿಷಯವನ್ನು ಇದ್ದ ಹಾಗೆ ಯಾವ ಬದಲಾವಣೆಯನ್ನು ಮಾಡಲು ಅವಕಾಶವೇ ಇರದ ಹಾಗೇ ಸೃಷ್ಟಿಯಾಗಿದ್ದು ಸತ್ಯಕ್ಕೆ ಒತ್ತು ಕೊಡುತ್ತದೆ. ಚರಿತ್ರೆಯನ್ನು ಸಾಹಿತ್ಯಕ್ಕೆ ಪರಿಗಣಿಸಿಕೊಳ್ಳುವಾಗ ಸಾಧಾರಣೀಕರಣಗೊಳಿಸಿಕೊಳ್ಳುವುದು ಸಾಹಿತಿಯ ಮೂಲ ಜವಾಬ್ದಾರಿಯಾಗಿರುತ್ತದೆ. ಅಂದರೆ ಯಾವುದೇ ಸತ್ಯ ಘಟನೆಯನ್ನು ಬರೆಯುವಾಗ ಆ ವ್ಯಕ್ತಿಗಳ, ಸ್ಥಳಗಳ ಹೆಸರನ್ನು ಬದಲಾಯಿಸಿ ಆ ವಸ್ತುವನ್ನು ಕಲಾತ್ಮಕಗೊಳಿಸಿ ಸಮಕಾಲೀನತೆಯಲ್ಲಿ ಸಾರ್ವಕಾಲೀನತೆಯನ್ನು ಸೇರಿಸಿ ಬರೆಯಬೇಕಾಗುತ್ತದೆ. ಕಾರಣ ಮಾನವೀಯತೆಯ ದೃಷ್ಟಿಯಿಂದ ವಿಚಾರಿಸಿದಾಗ ಮೂಲ ಘಟನೆಗೆ ಸಂಬಂಧಪಟ್ಟ ವ್ಯಕ್ತಿಯ ಮರ್ಯಾದೆಗೆ ಯಾವುದೇ ಧಕ್ಕೆ ಬರದ ರೀತಿಯಲ್ಲಿ ವಿಷಯ ವಸ್ತುವನ್ನು ಸಮಾಜದ ಮಡಿಲಿಗೆ ಹಾಕಬೇಕು. ಆದರೆ ಸಂಗ್ಯಾಬಾಳ್ಯಾ ನಾಟಕ ರಚಿಸುವಾಗ ಪತ್ತಾರ ಮಾಸ್ತರ ಗಂಗೆಯ ಮೇಲಿನ ಸೇಡಿನಿಂದ ಮಾಡಿರುವನೆಂಬುದು ಡಾ. ಕಲಬುರ್ಗಿಯವರ ಅಭಿಪ್ರಾಯ. ಇದರ ಸತ್ಯಾಂಶ ಕೂಡ ಚರ್ಚಾಸ್ಪದವಾಗಿರುವುದು. ಮಾನವೀಯತೆಯನ್ನು ವಿಚಾರಿಸದೇ ಗಂಗೆಯ ಮರ್ಯಾದೆಗೆ ಧಕ್ಕೆ ತಂದಿದ್ದಾನೆ. ಈ ಘಟನೆಯ ಬಗ್ಗೆ ಕೂಲಂಕುಷವಾಗಿ ವಿಚಾರಿಸಿದಾಗ ಇದರ ಬಗ್ಗೆ ಸ್ಪಷ್ಟತೆ ಸಿಗುವುದೇ ಇಲ್ಲ. ಅಲ್ಲಿ ನಿಜವಾದದ್ದು ಏನು ಘಟಿಸಿದೆ ಅನ್ನುವುದು ಆ ಕಾಲದ

---

೨. ಎಚ್. ಎಲ್. ಪುಷ್ಪಾ (ಲೇ) ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ಪುಟ – ೭೫.

ಜನರಿಗೆ ಗೊತ್ತು. ಪತ್ತಾರ ಮಾಸ್ತರ ಸೇಡಿಗೋಸ್ಕರ ಇದ್ದ ವಿಷಯವನ್ನು ಮುಚ್ಚಿಟ್ಟು ಸುಳ್ಳು ಕಥೆಯನ್ನು ಸೃಷ್ಟಿಸಿರುವ ಅವಕಾಶಗಳು ಸಾಧ್ಯತೆಗಳು ಹೆಚ್ಚಾಗಿ ಕಂಡುಬರುತ್ತದೆ ಎಂದು ಭಾವಿಸಿದರು ಅಥವಾ ಭಾವಿಸದಿದ್ದರೂ ಗಂಗಿಯ ಪಾತ್ರಕ್ಕೆ ಅನ್ಯಾಯವಾದುದು ಸ್ಪಷ್ಟ.

ಈ ಎಲ್ಲ ಗೊಂದಲಗಳು ಹುಟ್ಟಿಕೊಂಡಿರುವುದಕ್ಕೆ ಕಾರಣ ಸಾಹಿತ್ಯ ಮತ್ತು ಚರಿತ್ರೆಯನ್ನು ಒಂದೇ ತಕ್ಕಡಿಯಲ್ಲಿಟ್ಟು ತೂಗುತ್ತಿರುವ ಸಂದರ್ಭದಿಂದಾಗಿ ಒಂದು ವೇಳೆ ಸಾಹಿತ್ಯವನ್ನು ಚರಿತ್ರೆಯಿಂದ, ಚರಿತ್ರೆಯನ್ನು ಸಾಹಿತ್ಯದಿಂದ ಬೇರ್ಪಡಿಸಿ ಆ ಆಟವನ್ನು ಅವಲೋಕಿಸಿದಾಗ ಯಾವ ಅನುಮಾನಗಳು ಹುಟ್ಟಿಕೊಳ್ಳುವುದಿಲ್ಲ. ನಾವು ಆ ಆಟದ ವಸ್ತು, ಚಾರಿತ್ರಿಕ ಹಿನ್ನೆಲೆ ಆ ಪಾತ್ರಗಳ ಸಾಮಾಜಿಕ ಸ್ಥಾನಮಾನಗಳು ಹಾಗೂ ಸಂದರ್ಭಗಳನ್ನು ಶೋಧಿಸತೊಡಗಿದಾಗ ಈ ಎಲ್ಲ ಗೊಂದಲಗಳು ನಮ್ಮನ್ನು ಕಾಡುತ್ತವೆ.

ಸಾಹಿತ್ಯ ಕಲ್ಪನೆಯಿಂದ ಸೃಷ್ಟಿಯಾದರೆ ಚರಿತ್ರೆ ಸತ್ಯಾಂಶದಿಂದ ಕೂಡಿರುತ್ತದೆ. ಇದಕ್ಕೆ ಪೂರಕ ಎನ್ನುವಂತೆ ಡಾ. ಎಂ. ಎಂ. ಕಲಬುರ್ಗಿಯವರು ರಚಿಸಿರುವ 'ಖರೇ ಖರೇ ಸಂಗ್ಯಾಬಾಳ್ಯಾ' ಪಾತ್ರಗಳ ಸೃಷ್ಟಿ, ಕಥೆಯ ಧೋರಣೆ, ವಸ್ತುವಿನ ಮೂಲ ಆಶಯ ಇವೆಲ್ಲವೂ ಸಾಮಾಜಿಕ ಮಾನವೀಯತೆಯ ಆಧಾರದ ಮೇಲೆ ಸೃಷ್ಟಿಯಾಗಿವೆ. ಇದು ಸಂದರ್ಭೋಚಿತವಾಗಿದೆ. ಪ್ರತಿಯೊಂದು ಪಾತ್ರವು ತನ್ನದೇ ಆದ ಪ್ರಾಮುಖ್ಯತೆಯನ್ನು ಪಡೆದಿದೆ. ಅಮಾನವೀಯವಾಗಿ ನಡೆದುಕೊಂಡ ಪತ್ತಾರ ಮಾಸ್ತರ ಇಲ್ಲಿ ಖಳನಾಯಕನಾಗುತ್ತಾನೆ. ಅವನ ಕುತಂತ್ರಗಳ ಬಲೆಯಲ್ಲಿ ಗಂಗೆಯನ್ನು ಸಿಲುಕಿಸಿ ಅವಳ ಜೀವನವನ್ನೇ ನಾಶ ಮಾಸುವ ವಿಕೃತ ಮನಸ್ಸಿನ ವ್ಯಕ್ತಿ ಪತ್ತಾರ ಮಾಸ್ತರ. ಸಮಾಜದ ಎಲ್ಲ ವಿಕೃತ ಶಕ್ತಿಗಳಲ್ಲಿ ಮೊದಲನೇ ಸಾಲಿನಲ್ಲಿ ನಿಲ್ಲುತ್ತಾನೆ.

ಡಾ. ಕಲಬುರ್ಗಿಯವರು ಒಬ್ಬ ಸಾಹಿತಿಯ ಜೊತೆಗೆ ಸಂಶೋಧಕರು ಆಗಿರುವುದರಿಂದ ಅವರ ಲೇಖನದಲ್ಲಿ ಸಂಶೋಧನೆಯ ಪ್ರತಿಫಲಗಳು ಎದ್ದು

ಕಾಣುತ್ತವೆ. ಸಂಶೋಧಕ ಮಾತ್ರ ಚರಿತ್ರೆಯ ಸತ್ಯಾಸತ್ಯತೆಗಳನ್ನು ಸಮಾಜಕ್ಕೆ ತಿಳಿಸಲು ಸಾಧ್ಯ. ಸಾಹಿತ್ಯಕ್ಕಿಂತ ಚರಿತ್ರೆಯ ವಿಷಯಗಳಿಗೆ ಹೆಚ್ಚು ಒತ್ತು ಕೊಡುವುದರಿಂದ ಕಲಬುರ್ಗಿಯವರ ವಿಷಯವಸ್ತು ಮೇಲ್ನೋಟದಲ್ಲಿ ಹೆಚ್ಚು ಸಂದರ್ಭೋಚಿತವೆನಿಸುತ್ತದೆ. ಆದರೆ ಆ ಚಾರಿತ್ರಿಕ ಸತ್ಯ ಪ್ರಶ್ನಾತೀತವಲ್ಲ. ಅವರು ಖರೇ ಖರೇ ಎಂದು ವಾದಿಸುವುದು ಸುಳ್ಳಾಗಿರಲುಬಹುದು. ಆದರೆ ಆ ಎಲ್ಲ ಸಂಗತಿಗಳು ಆ ಕೃತಿಯನ್ನು ಒಂದು ನಾಟಕವಾಗಿ ದರ್ಶಿಸುವಾಗ ಆ ಎಲ್ಲಾ ಸಂಗತಿಗಳು ಪ್ರಸ್ತುತವಾಗುವುದಿಲ್ಲ. ಅಲ್ಲಿ ರಸಾನುಭವ ಮುಖ್ಯವಾಗುತ್ತದೆ ಹೊರತು ಚರಿತ್ರೆಯಲ್ಲ.

ಸಂಗ್ಯಾಬಾಳ್ಯಾ ಸಣ್ಣಾಟದ ವಸ್ತು ಚಾರಿತ್ರಿಕವೆಂದು ಭಾವಿಸಿದಾಗ ಈ ಎಲ್ಲ ಗೋಜಲು ಹುಟ್ಟಿಕೊಳ್ಳುತ್ತದೆ ಎಂದು ಮತ್ತೇ ಹೇಳಬೇಕಾಗಿಲ್ಲ. ಅದಕ್ಕೆ ಪ್ರಸ್ತುತ ಸಂಪ್ರಬಂಧವೇ ಸಾಕ್ಷಿ. ಈ ಸಂಪ್ರಬಂಧದ ಉದ್ದಕ್ಕೂ ಇದನ್ನೇ ಚರ್ಚಿಸಲಾಗಿದೆ. ಇದು ಸಾಹಿತ್ಯ ಮತ್ತು ಚರಿತ್ರೆ ಪರಸ್ಪರ ಮುಖಾಮುಖಿಯಾದಾಗ ಅದರ ಸತ್ಯಾಸತ್ಯತೆಗಳನ್ನು ಪರಿಶೀಲಿಸುತ್ತದೆ. ಆ ಸಾಹಿತ್ಯ ಕೃತಿಯ ರಚನೆಯ ಹಿಂದಿನ ಕಾರಣ ಮತ್ತು ಪರಿಣಾಮಗಳನ್ನು ವಿವೇಚಿಸುತ್ತದೆ.

ಡಾ. ಚಂದ್ರಶೇಖರ ಕಂಬಾರರು ಪತ್ತಾರ ಮಾಸ್ತರನ ಪಠ್ಯಕ್ಕೆ ಅನುಗುಣವಾಗಿ ಅವರು ತಮ್ಮ ಕೃತಿಯನ್ನು ಸಂಪಾದಿಸಿದ್ದಾರೆ. ಅಲ್ಲಿಯ ಘಟನೆಗಳ ಚಾರಿತ್ರಿಕ ಸತ್ಯವನ್ನು ಪರಿಶೀಲಿಸುವುದು ಅವರ ಉದ್ದೇಶವಾಗಿರಲಿಲ್ಲ. ಈ ಮಾತು ಡಾ. ಎಂ. ಎಸ್. ಲಠ್ಠೆ ಅವರು ಸಂಪಾದಿಸಿದ ಡಪ್ಪಿನಾಟಕ್ಕೂ ಅನ್ವಯಿಸುತ್ತದೆ. ಆದರೆ ಚಂದ್ರಶೇಖರ ಕಂಬಾರ, ಕೀರ್ತಿನಾಥ ಕುರ್ತಕೋಟಿ ಹಾಗೂ ಎಂ. ಎಸ್. ಲಠ್ಠೆಯವರು ಅದರ ಪ್ರಸ್ತಾವಣೆಯಲ್ಲಿ ಬೈಲಹೊಂಗಲ ಪರಿಸರದ ಜನ ಆ ನಾಟಕದ ಕರ್ತೃ, ವಸ್ತುವಿನ ಹಿನ್ನೆಲೆ ಹಾಗೂ ಪಾತ್ರಗಳ ಕುರಿತು ಆಡುವ ಮಾತುಗಳನ್ನು ಉಲ್ಲೇಖಿಸಿದಾಗ ಇಂಥದೊಂದು ಚರ್ಚೆಗೆ ವೇದಿಕೆ ಸಿದ್ಧಗೊಂಡಿತು. ಅದೇ ವೇದಿಕೆ ಮೇಲೆ ಡಾ. ಕಲಬುರ್ಗಿಯವರು

ಖರೇ ಖರೇ ಸಂಗ್ಯಾಬಾಳ್ಯಾ ಪ್ರಸ್ತುತಪಡಿಸಿ ಚಾರಿತ್ರಿಕ ಸತ್ಯ ವಿವೇಚನೆಗೆ ಹೊಸ ದಿಕ್ಕು ತೋರಿಸಿದರು.

ಈ ಸಣ್ಣಾಟ ಹೆಣ್ಣಿನ ಮನಸ್ಸಿನ ತೊಳಲಾಟವನ್ನು ಪ್ರತಿಬಿಂಬಿಸಿದೆ. ಬಡತನ ಸಿರಿತನಗಳ ನಡುವಿನ ಹೋರಾಟವನ್ನು ಸಾಕ್ಷಿಕರಿಸುತ್ತದೆ. ಬಡತನಕ್ಕೆ ತುತ್ತಾದ ಬಾಳ್ಯಾ ಮತ್ತು ಪರಮ್ಮ ಹಣ, ಹೊಲ, ಮನೆ, ಬಂಗಾರಕ್ಕೆ ಆಶೆಪಟ್ಟು ಬಾಳ್ಯಾ ತನ್ನ ಜೀವದ ಗೆಳೆಯನ ಸಾವಿನಲ್ಲಿ ಕೈಜೋಡಿಸುತ್ತಾನೆ. ಪರಮ್ಮ ಸೀರೆ, ಕುಪ್ಪಸ, ಬಂಗಾರದ ಆಶೆಗೆ ಬಿದ್ದು ಗೌರವಸ್ಥ, ಸಂಪ್ರದಾಯಸ್ಥ ಮನೆತನದ ಹೆಣ್ಣುಮಗಳಾದ ಗಂಗಿಯ ಮನಸ್ಸು ಚಂಚಲಗೊಳಿಸಿ ಅವಳ ದುರಂತಮಯ ಬದುಕಿಗೆ ಕಾರಣವಾಗುತ್ತಾಳೆ.

ಎಲ್ಲ ವಿದ್ವಾಂಸರ ಕೃತಿಗಳಲ್ಲಿ ಬೈಲವಾಡ ಮತ್ತು ಬೈಲಹೊಂಗಲದ ಪರಿಸರವನ್ನು ಬಹಳ ಸುಂದರವಾಗಿ ಸೃಷ್ಟಿಸಿದ್ದಾರೆ. ಆ ಪರಿಸರದ ಬಡತನ, ಸಿರಿತನ, ಒಳಿತು, ಕೆಡಕು, ನಂಬಿಕೆ, ಸಂಪ್ರದಾಯ, ಆಚರಣೆ, ಉತ್ಸವ ಮುಂತಾದವುಗಳನ್ನು ಚಿತ್ರಿಕರಿಸಿದ್ದಾರೆ. ಮೂಲ ಲೇಖಕ ತನಗೆ ತಿಳಿದೋ ತಿಳಿಯದೆಯೋ ಅದರಲ್ಲಿ ಆ ಪರಿಸರ ಸಾಂಸ್ಕೃತಿಕ ಬದುಕನ್ನು ಸೇರಿಸಿಟ್ಟಿದ್ದಾನೆ. ಎಲ್ಲ ಕಾರಣಗಳಿಂದಾಗಿ ಸಂಗ್ಯಾಬಾಳ್ಯಾ ಸಣ್ಣಾಟ ಮತ್ತೇ ಮತ್ತೇ ಅಧ್ಯಯನದ ತೆಕ್ಕೆಗೆ ವಸ್ತುವಾಗುತ್ತದೆ. ಶ್ರೀಮಂತರು ತಮ್ಮ ಆಸೆ, ಬಯಕೆಗಳನ್ನು ತೀರಿಸಿಕೊಳ್ಳಲು ಬಡವರನ್ನು ಯಾವ ರೀತಿಯಾಗಿ ದಾಳವನ್ನಾಗಿ ಬಳಸುತ್ತಾರೆ ಎನ್ನುವುದನ್ನು ಚೆನ್ನಾಗಿ ತೋರಿಸಿದ್ದಾರೆ. ಸ್ವಲ್ಪದಿನ ಡಾ. ಚಂದ್ರಶೇಖರ ಕಂಬಾರ ಮತ್ತು ಡಾ. ಎಂ. ಎಂ. ಕಲಬುರ್ಗಿಯವರು ರಚಿಸಿರುವ 'ಸಂಗ್ಯಾಬಾಳ್ಯಾ' ಮತ್ತು 'ಖರೇ ಖರೇ ಸಂಗ್ಯಾಬಾಳ್ಯಾ' ಸಣ್ಣಾಟಗಳ ನಡುವೆ ಸಾಕಷ್ಟು ವಿವಾದಾತ್ಮಕ ಚರ್ಚೆಗಳಾದವು. ಕೆಲವು ವಿದ್ವಾಂಸರಿಂದ ವಿಮರ್ಶೆಗೂ ಒಳಪಟ್ಟವು. ಈ ಎರಡು ಕೃತಿಗಳು ವಿದ್ವತ್ ವಲಯದಲ್ಲಿ ಒಂದು ವಿವಾದಾತ್ಮಕ ಅಲೆಯನ್ನು ಸೃಷ್ಟಿಸಲು ಕಾರಣವಾದವು.

ಡಾ.ಮಲಶೆಟ್ಟಿಯವರು ಹೇಳಿದಂತೆ ಗಂಗಿ ತನ್ನ ೮೦ರ ವಯಸ್ಸಿನಲ್ಲಿಯೂ ಸಹಜ ಸುಂದರಿಯಾಗಿದ್ದಳು. ಅಷ್ಟು ಮುಪ್ಪಿನ ವಯಸ್ಸಿನಲ್ಲಿಯೂ ಕೂಡ ಅಷ್ಟು ಸುಂದರತೆಯನ್ನು ತನ್ನದಾಗಿಸಿಕೊಂಡವಳು ಹರೆಯದಲ್ಲಿ ಸಂಗ್ಯಾನ ಮನಸ್ಸು ಕೆಡಲು ಅವಳ ಸೌಂದರ್ಯ ಕಾರಣವಾಗಿರಲು ತಪ್ಪಿಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಹೀಗೆ ಸಂಗ್ಯಾಬಾಳ್ಯಾ ಸಣ್ಣಾಟ ಅನೇಕ ಚರ್ಚೆಗಳಿಗೆ ಗ್ರಾಸವಾಗಿದೆ. ಅಲ್ಲದೇ ಎಲ್ಲ ಚರ್ಚೆಗಳ ಚೌಕಟ್ಟಿನೊಳಗೆ "ಸಂಗ್ಯಾಬಾಳ್ಯಾ : ಚಾರಿತ್ರಿಕ ಮತ್ತು ಸಾಹಿತ್ಯಿಕ ಸತ್ಯಗಳಿಗೆ ಮುಖಾಮುಖಿಯಾಗಿ ಹತ್ತು ಹಲವು ವಿಷಯಗಳನ್ನು ಚರ್ಚೆಯ ವೇದಿಕೆಗೆ ಎಳೆತರುತ್ತವೆ. ಈ ನಿಟ್ಟಿನಲ್ಲಿ ನಿಖರವಾದ ಅಧ್ಯಯನ ನಡೆಯುವ ಅಗತ್ಯವಿದೆ. ನಾವು ಸಂಗ್ಯಾಬಾಳ್ಯಾ ಕಥಾವಸ್ತುವಿನ ಚಾರಿತ್ರಿಕ ಶೋಧಕ್ಕೆ ಒತ್ತು ನೀಡಿ ಒಟ್ಟು ಅದರ ಸತ್ಯಾಸತ್ಯತೆಯನ್ನು ತಿಳಿಯಬೇಕಿದೆ. ಆಗ ಆ ಘಟನೆಗೆ ಲಭ್ಯವಿರುವ ಖಚಿತ ದಾಖಲೆಗಳು ಮಾತ್ರ ನಿಜವನ್ನು ತಿಳಿಯಬಲ್ಲವು. ಇದುವರೆಗೂ ಈ ವಸ್ತುವಿನ ಕುರಿತು ನಡೆದಿರುವ ಸಂಶೋಧನೆ ಕೇವಲ ವದಂತಿಗಳನ್ನು ಆಧರಿಸಿವೆ. ಅವುಗಳಿಗೆ ಚಾರಿತ್ರಿಕ ದಾಖಲೆಗಳಿಲ್ಲ. ಅಷ್ಟೇ ಅಲ್ಲ ಕರಾವಳಿ ಪ್ರದೇಶದಲ್ಲಿಯೂ ಹಾಲಕ್ಕಿ ಜನಾಂಗದವರು ಸಂಗ್ಯಾಬಾಳ್ಯಾ ಆಟವನ್ನು ಆಡುತ್ತಿರುವ ವಿಷಯ ಇತ್ತೀಚೆಗೆ ನನ್ನ ಗಮನಕ್ಕೆ ಬಂದಿದೆ. ಆದರೆ ನನ್ನ ಅಧ್ಯಯನ ಸೀಮಿತ ಅವಧಿಗೆ ಹಾಗೂ ಸೀಮಿತ ವ್ಯಾಪ್ತಿಗೆ ಅಳವಟ್ಟಿರುವುದರಿಂದ ಆ ಕುರಿತು ವಿಸ್ತೃತ ಸಂಶೋಧನೆಗೆ ಅವಕಾಶವಿರುವುದಿಲ್ಲ. ಈಗ ಈ ಹಿಂದೆ ಡಾ. ಎಸ್. ಎಸ್. ಅಂಗಡಿಯವರು ಸಂಗ್ಯಾಬಾಳ್ಯಾ ಸಣ್ಣಾಟದ ಕುರಿತು ಸಂಶೋಧನಾ ಕೃತಿಯನ್ನು ರಚಿಸುವಂತೆ ಅದರ ಮುಂದುವರೆದ ಭಾಗವಾಗಿ ಮತ್ತೊಂದು ಕೃತಿ ಹೊರಬರುವ ಅಗತ್ಯವಿದೆ. ಅಲ್ಲಿಯ ಚಾರಿತ್ರಿಕ ಸತ್ಯ ಸ್ಫುಟವಾಗದ ಹೊರತು ಈ ಊಹಾ ಪೋಹಗಳಿಗೆ ಕೊನೆಯಿಲ್ಲ. ಇದು ನನ್ನ ಸಂಪ್ರಬಂಧದ ಒಟ್ಟು ಫಲಿತವಾಗಿದ್ದು ಹಾಗೂ ನನ್ನ ಅಧ್ಯಯನದಲ್ಲಿ ನಾನು ಕಂಡು ಕೊಂಡ ಅನುಭವವೂ ಆಗಿದೆ.

# ಅನುಬಂಧಗಳು

[illegible]

# ಅನುಬಂಧ –೧

# ಆಕರ ಗ್ರಂಥಗಳು

| ಕ್ರ.ಸಂ. | ಕೃತಿ | ಲೇಖಕರು | ಪ್ರಕಾಶನ | ಪ್ರಕಟಿತ ವರ್ಷ |
|---|---|---|---|---|
| ೧ | ಸಂಗ್ಯಾಬಾಳ್ಯಾ | ಚಂದ್ರಶೇಖರ ಕಂಬಾರ ಹಾಗೂ ಕೀರ್ತಿನಾಥ ಕುರ್ತಕೋಟಿ | ಮನೋಹರ ಗ್ರಂಥಮಾಲೆ ಧಾರವಾಡ | ೧೯೮೦ |
| ೨ | ಸಂಗ್ಯಾಬಾಳ್ಯಾ ಅನ್ನಬೇಕೋ ನಾಡೊಳಗ | ಡಾ. ಚಂದ್ರಶೇಖರ ಕಂಬಾರ | ನೆಲಮನೆ ಪ್ರಕಾಶನ ಮೈಸೂರು | ಮೊದಲ ಮುದ್ರಣ ೧೯೭೫ ಎರಡನೇ ಮುದ್ರಣ ೧೯೮೧ |
| ೩ | ಸಂಗ್ಯಾಬಾಳ್ಯಾ ಡಪ್ಪಿನಾಟ | ಡಾ.ಮಲ್ಲಿಕಾರ್ಜುನ ಶಿ. ಲಠ್ಠೆ | ಗ್ರಿನೋಬಲ್ಸ್ ಪ್ರಕಾಶನ ಕಲಬುರ್ಗಿ | ೧೯೯೧ |
| ೪ | ಸಂಗ್ಯಾಬಾಳ್ಯಾ ಗೀತರೂಪಕದ ಅಧ್ಯಯನ | ಎಸ್. ಎಸ್. ಅಂಗಡಿ | ವಿದ್ಯಾನಿಧಿ ಪ್ರಕಾಶನ ಗದಗ | ೧೯೯೬ |
| ೫ | ಖರೇ ಖರೇ ಸಂಗ್ಯಾಬಾಳ್ಯಾ | ಡಾ.ಎಂ. ಎಂ. ಕಲಬುರ್ಗಿ | ಲೋಹಿಯಾ ಪ್ರಕಾಶನ ಬಳ್ಳಾರಿ | ೨೦೦೫ |
| ೬ | ಸ್ಪಂದನ | ಡಾ. ವ್ಹಿ. ಎಸ್. ಮಾಳಿ | ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು | ೨೦೦೭ |
| ೭ | ಉತ್ತರ ಕರ್ನಾಟಕದ ಬಯಲಾಟಗಳು | ಡಾ.ಬಸವರಾಜ ಮಲಶೆಟ್ಟಿ | ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ | ೧೯೮೩ |
| ೮ | ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ | ವಿವಿಧ ಲೇಖಕರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಕನ್ನಡ ಭವನ ಬೆಂಗಳೂರು | ೨೦೦೬ |
| ೯ | ಬಣಗಾರ(ನಾಗಲೀಕ) ಸಮಾಜ ಮತ್ತು ಸಂಸ್ಕೃತಿ | ಪ್ರೊ.ಈರಣ್ಣ ಚನ್ನಪ್ಪನವರ | ನೀಲಾಂಬರಿ ಪ್ರಕಾಶನ ಬೆಟಗೇರಿ ಜಿ. ಗದಗ | ೨೦೦೯ |
| ೧೦ | ಫ್ಲೀಟರು ಸಂಗ್ರಹಿಸಿದ ಲಾವಣಿಗಳು | ಕ್ಯಾತನಹಳ್ಳಿ ರಾಮಣ್ಣ | ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ | ೧೯೯೧ |


# ಅನುಬಂಧ –೨

# ಲೇಖನಗಳು

| | | | | |
|---|---|---|---|---|
| ೧ | 'ಖರೆ' ಕಥಾವಸ್ತುವಿನ ಎಳೆದಾಟ | ಚಂದ್ರಕಾಂತ ಕುಸನೂರ | ಸಂಯುಕ್ತ ಕರ್ನಾಟಕ ದಿನಪತ್ರಿಕೆ | ೨೪ ಜುಲೈ ೨೦೦೫ |
| ೨ | ಸಂದಿಗ್ಧತೆಯಲ್ಲಿ 'ಸಂಗ್ಯಾಬಾಳ್ಯಾ' | ಎಂ. ಡಿ. ಗೋಗೇರಿ | ಪ್ರಜಾವಾಣಿ ದಿನಪತ್ರಿಕೆ | ೨೦೦೫ |
| ೩ | ಕಲಬುರ್ಗಿ ಆವೃತ್ತಿಯ ಸಂಗ್ಯಾಬಾಳ್ಯಾ | ಆರೂರು ಲಕ್ಷ್ಮಣ ಶೇಟ್ | ಪ್ರಜಾವಾಣಿ ದಿನಪತ್ರಿಕೆ | ೨೦೦೫ |
| ೪ | 'ಸಂಗ್ಯಾಬಾಳ್ಯಾ' V/S 'ಖರೇ ಖರೇ ಸಂಗ್ಯಾಬಾಳ್ಯಾ' : ಕೆಲ ವಿಚಾರಗಳು | ಸಿದ್ದಲಿಂಗ ದೇಸಾಯಿ, ಡಾ.ಎಚ್.ಚಂದ್ರಶೇಖರ ಹುರಕಡ್ಲಿ ಶಿವಕುಮಾರ | ಪ್ರಜಾವಾಣಿ ದಿನಪತ್ರಿಕೆ | ೨೦೦೫ |
| ೫ | 'ಸಂಗ್ಯಾಬಾಳ್ಯಾ' V/S 'ಖರೇ ಖರೇ ಸಂಗ್ಯಾಬಾಳ್ಯಾ' | ಎಂ. ಕೆ. ಭಾಸ್ಕರರಾವ್ | ಪ್ರಜಾವಾಣಿ ದಿನಪತ್ರಿಕೆ | ೨೦೦೫ |



N
MASTMARDI
HOSKOTI
GAD
KALKUPPI
MALLAPUR
NESARGI
SOMANHATTI
HANUMANHATTI
MURKIBHAVI
MARIKATTI
GANIKOP
BAILHONGAL
BAILWAD
SANPGOAN
CHIKBAGEWADI
AMTUR
NEGINHAL
HULEHOSUR
MK HUBLI
AMRAPUR
SUGAR FACTORY
SIDDASAMUDRA
DODVAD
KADASGATTI
CHIKBELLIKATTI
JAMALUR
BAILUR
KENEHLARKOP
NINGADANATH
KULWALLLI
DINDALKOPPA



ELAGAAVI
District Map
MAHARASHTRA
Shirur
Gundevadi
Navalihal
Athni
Halhalli
Bijapur
Kagvad
Karadge
Arkali
Koligud
Chikodi
Nipani
Bagalkot
Gurlapur
Hukeri
Ghatprabha
Yadawad
Upparhatti
Panchgaon
Ghatprabha
Sutdhal
Honga
Satugeri
Ramdurg
BELAGAAVI
Bailhongal
Malprabha
Holand
Lingadhalli
Khauapur
Hanbur
Halsi
OA
NH-4
NH-4
NH-4A
Dharwar
Uttara Kannada
Map not to Scale
LEGEND
State Boundary
District Boundary
National Highway
Major Road
Railway
District Headquarter
Major Town
Other Town
River
N